ರಂಜನೆ ಬೋಧನೆ ಪ್ರಚೋದನೆ

# ಲಂಕೇಶ್

ಪಶ್ಚಿಮ ಘಟ್ಟಕ್ಕೆ ಪರಿಸರ ವ್ಯಾಧಿ

ಜುಲೈ 20, 2011 ಪುಟ 20 ರೂ. 14/-




ಪದ್ಮನಾಭ ದೇಗುಲ ಲಕ್ಷ ಕೋಟಿ ನಿಧಿ!

# ಸಿಕ್ಕಿದ್ದು ಹೇಗೆ? ಈಗ ಯಾರ ಕೈಗೆ?



## ಕಳ್ಳನೇ ಕಂಡಾಯ ಮಂತ್ರಿ

ರೈತರ ವಿರೋಧ




## 'ಕೋಟಿ ಕೊಟ್ಟರೂ ಭೂಮಿ ಕೊಡಲ್ಲ'

ರಿಯಾ ಮೋನಿಕಾ


## ೊಂದಳು ಂದಳು



## ಉಪ್ಪಿಯ ಶ್ರೀಮತಿ ವಿವಾದ



## ನೋ ಕಾಮೆಂಟ್ಸ್




"ನಮ್ಮ ಮುತ್ತಜ್ಜನ ಕಾಲ್ದಾಗಿಂದ ನಾವು ಭೂಮೀನ ನಂಬಿ ಬದ್ಕಿವ್ರಿ. ಈಗ ಯಾವುದೋ ಬ್ಯಾರೇ ದೇಶದ ಕಂಪನಿ ಕೇಳ್ತೈತಿ ಅಂತ ನಮ ಮನೆತನಕ್ಕೆ ಆಸರ್ ಆಗಿರೋ ಭೂಮೀನ ಬಿಟ್ಕೊಡಕ್ಕೆ ನಾವು ತಯಾರಿಲ್ರಿ. ಸರ್ಕಾರ ಅಲ್ಪಸ್ವಲ್ಪ ರೊಕ್ಕಾ ಕೊಟ್ಟತೇನ್. ಬಿಟ್ಟತೇನ್. ಅದನ್ನ ತೊಗೊಂಡು ಏನ್ ಮಾಡೊದ್ರಿ? ಇರೋ ಜಮೀನ್ ಕಳ್ಕೊಂಡ್ರ ಇದರಂತ ಇನ್ನೊಂದು ಜಮೀನು ಸಿಗಬೇಕಲ್ರಿ? ಪ್ರಾಣ ಹೋದ್ರೂ ಹೊಲ ಮಾತ್ರ ಕೊಡೊಂಗಿಲ್ರೀ"

-ಶರಣಪ್ಪ, ಪೋಸ್ಕೋಗಾಗಿ ಜಮೀನು ಕಳೆದುಕೊಳ್ಳುತ್ತಿರುವ ಮೇವುಂಡಿ ಗ್ರಾಮಸ್ಥ


"ರಾಜ್ಯದಲ್ಲಿ ಎರಡು ವರ್ಷಗಳಲ್ಲಿ 12 ಲಕ್ಷ ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿರುವುದನ್ನು ಪತ್ತೆ ಹಚ್ಚಲಾಗಿದೆ. ಚಿಕ್ಕಮಗಳೂರಿನಲ್ಲಿ ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಕ್ರಮ ಜರುಗಿಸದಂತೆ ಮುಖ್ಯಮಂತ್ರಿ ಕಚೇರಿಯಿಂದಲೇ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುವುದು ಗೊತ್ತಾಗಿದೆ. ಸರ್ಕಾರಿ ಭೂಮಿ ಹಾಗೂ ಅರಣ್ಯ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಒತ್ತುವರಿಯಾಗಿದೆ. ರಾಜಕಾರಣಿಗಳು ನೇರವಾಗಿ ಅಲ್ಲದಿದ್ದರೂ ತಮ್ಮ ಸಂಬಂಧಿಗಳು ಮತ್ತು ಆಪ್ತರ ಮೂಲಕ ಪರೋಕ್ಷವಾಗಿ ಭೂಕಬಳಿಕೆ ಮಾಡಿದ್ದಾರೆ."

- ವಿ. ಬಾಲಸುಬ್ರಮಣಿಯನ್, ಕಾರ್ಯಪಡೆ ಅಧ್ಯಕ್ಷ

"ರಾಜ್ಯದಲ್ಲಿ 2005-2009ರವರೆಗೆ ವಿದ್ಯುತ್ ಬೆಲೆಯಲ್ಲಿ ಯಾವುದೇ ಹೆಚ್ಚಳವಾಗಿರಲಿಲ್ಲ. ಆದರೆ ಕಳೆದ ಎರಡು ವರ್ಷಗಳಲ್ಲಿ ಪ್ರತಿ ಯುನಿಟ್ ಮೇಲೆ ಗ್ರಾಹಕರು ಹೆಚ್ಚುವರಿಯಾಗಿ 57.16 ಪೈಸೆಗಳನ್ನು ತೆರುತ್ತಿದ್ದಾರೆ. ಈಗ ಯುನಿಟ್‌ಗೆ 50 ಪೈಸೆಯಷ್ಟು ಬೆಲೆ ಹೆಚ್ಚಳ ಮಾಡುವ ಇರಾದೆಯನ್ನು ಸರ್ಕಾರ ಹೊಂದಿದೆ. ಆಗ ವಿದ್ಯುತ್ ದರ ಏರಿಕೆಯಲ್ಲಿ ಹ್ಯಾಟ್ರಿಕ್ ಸಾಧಿಸಿದ ಕೀರ್ತಿಗೆ ಬಿಜೆಪಿ ಸರ್ಕಾರ ಭಾಜನವಾಗುತ್ತದೆ. ಈ ಮೂಲಕ ರಾಜ್ಯದ ಪ್ರತಿ ಯುನಿಟ್ ಕರೆಂಟ್ ದರ 4.17ರಿಂದ 4.67ರೂಗೆ ಏರಿಕೆಯಾಗಲಿದೆ."

- ಪತ್ರಿಕಾ ವರದಿ

### ನಂಬಿದ್ರೆನಂಬಿ ಬಿಟ್ರೆಬಿಡಿ



"ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಾಲ್ಕು ಮಂದಿಗೆ ಕಾನೂನುಬದ್ಧವಾಗಿ ಅವಕಾಶ ನೀಡಿದ್ದೇನೆ. ಆದರೆ ಇನ್ನು ಆರು ಮಂದಿ ನನ್ನ ಸಂಬಂಧಿಕರಲ್ಲ."

- ಯಡಿಯೂರಪ್ಪ

"ವಿವಾದಿತ ಲೋಕಪಾಲ ಮಸೂದೆಗೆ ಸಂಬಂಧಿಸಿದಂತೆ 'ಸಂಸತ್ತಿನ ಪರಮಾಧಿಕಾರ'ದ ಬಗ್ಗೆ ಬಹುತೇಕ ರಾಜಕೀಯ ಪಕ್ಷಗಳು ಪ್ರತಿಪಾದಿಸಿದ್ದು ಮುಂಗಾರು ಅಧಿವೇಶನದಲ್ಲಿ ಒಮ್ಮತದೊಂದಿಗೆ ಕರಡು ಮಸೂದೆಯನ್ನು ಮಂಡಿಸುವ ವಿಶ್ವಾಸವನ್ನು ಸರ್ಕಾರ ವ್ಯಕ್ತಪಡಿಸಿದೆ."

- ಪತ್ರಿಕಾ ವರದಿ

### ಇದರಲ್ಲಿ ರೈತರ ಹಿತವೇನಿದೆ?

"ರಾಜ್ಯದ ರೈತರ ಹಿತದೃಷ್ಟಿಯಿಂದ ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡಲು ಅವಕಾಶ ಕಲ್ಪಿಸಲಾಗಿದೆ. ರೈತ ಬಾಂಧವರು ಜುಲೈ ತಿಂಗಳು 31ರೊಳಗೆ ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸಬೇಕು. ಆಗಸ್ಟ್-1ರ ಒಳಗೆ ಯಾರು ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡುವುದಿಲ್ಲವೋ ಅವರ ಮೇಲೆ ಮೊಕದ್ದಮೆ ದಾಖಲಿಸಿ ಅವರ ಪಂಪ್‌ಸೆಟ್ ಅನ್ನು ಮುಟ್ಟುಗೋಲು ಹಾಕಲಾಗುವುದು."

- ಸರ್ಕಾರೀ ಜಾಹೀರಾತು




# ಕನ್ನಡದಲ್ಲಿ ಅಂತರ್ಜಾಲ ಬರವಣಿಗೆ

## ಕೆಲವು ಟಿಪ್ಪಣಿಗಳು

ಶಿವಸುಂದರ್

## ಚಾರ್ವಾಕ



ಅಂತರ್ಜಾಲ ಮಾಧ್ಯಮವನ್ನು ಇತರ ಮಾಧ್ಯಮಗಳಿಗಿಂತ ಹೆಚ್ಚು ಪ್ರಜಾತಾಂತ್ರಿಕವಾಗಿ ದುಡಿಸಿಕೊಳ್ಳಬಹುದಾದ ಸಾಧ್ಯತೆಗಳನ್ನು ಚರ್ಚಿಸಿದ್ದೇವೆ. ಭಾಗೇದಾರಿ ಪತ್ರಿಕೋದ್ಯಮ, ಸಂಪಾದಕನ ಇಷ್ಟಾನಿಷ್ಟಗಳಿಗೆ ತಕ್ಕಂತೆ ಬಗ್ಗಬೇಕಾದ ಹಂಗಿಲ್ಲದಿರುವುದು, ಪದಮಿತಿಯ ಬಂಧನವಿಲ್ಲದೆ ಎಲ್ಲವನ್ನು ಹೇಳಿಕೊಳ್ಳಬಹುದಾದದ್ದು ಇತ್ಯಾದಿ. ಇದರಿಂದಾಗಿ ಸಾಂಪ್ರದಾಯಿಕವಾದ ಮಾಧ್ಯಮಗಳು ಹೇರಬಹುದಾದ ಮಿತಿಗಳನ್ನು ಮೀರಿ ಬರಹಗಾರನಿಗೆ ಮತ್ತು ಓದುಗನಿಗೆ ಹೆಚ್ಚಿನ ಪ್ರಜಾತಂತ್ರ ಮತ್ತು ಸ್ವಾತಂತ್ರ್ಯ ಸಿಕ್ಕುತ್ತದೆ. ಎಲ್ಲಾ ಅಭಿವ್ಯಕ್ತಿ ಮಾಧ್ಯಮಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕಾರ್ಪೊರೇಟ್ ಬಂಡವಾಳಿಗರ ಕೈಗೆ ಸಿಲುಕಿ ವೈವಿಧ್ಯತೆಯ ಹೆಸರಿನಲ್ಲಿ ಏಕಮುಖ ಅಭಿರುಚಿ ಮತ್ತು ಮೌಲ್ಯಗಳನ್ನು ಹೇರುತ್ತಾ "ಸಮ್ಮತಿಯನ್ನು ಉತ್ಪಾದಿಸುತ್ತಿರುವ" ಈ ಹೊತ್ತಿನಲ್ಲಿ ಈ ಬಗೆಯ ಸ್ವಾತಂತ್ರ್ಯ ಓದುಗನಿಗೆ ಮತ್ತು ಲೇಖಕನಿಗೆ ದೊರೆಯುವುದು ಒಂದು ದೊಡ್ಡ ವಿಮೋಚನೆಯೇ.

ಎಲ್ಲಾ ಹೊಸ ಆವಿಷ್ಕಾರಗಳು ಮೊದಲು ಶ್ರೀಮಂತ ವರ್ಗದ ಸುಖ ಸೌಕರ್ಯದ ಸಾಧನವಾಗಿ ಬಳಕೆಯಾದರೂ ಅದು ಜನಸಾಮಾನ್ಯಗೊಳ್ಳುವುದು ಅದು ಸಾಮಾನ್ಯ ಜನರ ಅಗತ್ಯದ ಭಾಗವಾದಾಗ ಮಾತ್ರ. ಅದರಲ್ಲೂ ಒಂದು ಬಂಡವಾಳಶಾಹಿ ವ್ಯವಸ್ಥೆಯ ಉತ್ಪಾದನಾ ಕ್ರಮವೇ ಸಾಮೂಹಿಕ ಉತ್ಪಾದನೆಯಾದ್ದರಿಂದ ಸಮೂಹ ಮಟ್ಟದಲ್ಲಿ ಸಂವಹಿಸುವ ಅಂಶ ಅದರ ಉತ್ಪಾದನಾ ಕ್ರಮದಲ್ಲೇ ಅಡಕವಾಗಿರುತ್ತದೆ. ಆದರೆ ಈ ಹೊಸ ಅಗತ್ಯಗಳ ಅಥವಾ ಸೌಕರ್ಯಗಳ ಸೃಷ್ಟಿಯಲ್ಲಿ ಜನಸಾಮಾನ್ಯರ ಪಾತ್ರವೇನೂ ಇರುವುದಿಲ್ಲ. ಅದನ್ನು ಸೃಷ್ಟಿಸುವುದು ಇಂದಿನ ಹೊಸ ಮಾರುಕಟ್ಟೆ ಶಕ್ತಿಗಳ ಆರ್ಥಿಕತೆಯ ತರ್ಕಗಳೇ. ಹೀಗಾಗಿಯೇ ಅಂತರ್ಜಾಲವೆಂಬ ಆವಿಷ್ಕಾರ ಸಹ ಆದದ್ದು ರಾಷ್ಟ್ರಗಳ ಗಡಿಯನ್ನು ದಾಟಿ ಇಡೀ ಜಗತ್ತನ್ನೇ ಒಂದು ಘಟಕವಾಗಿ ಮಾಡಿಕೊಂಡು ಉತ್ಪಾದನಾ ಪ್ರಕ್ರಿಯೆಗಳು ಪ್ರಾರಂಭವಾದಾಗ. ಅದರ ಸಂಯೋಜನೆಗೆ ಬೇಕಾಗಿದ್ದ ಸಂವಹನಕ್ಕಾಗಿ ಅಂತರ್ಜಾಲದ ಆವಿಷ್ಕಾರವಾಯಿತು. ಈ ಪ್ರಕ್ರಿಯೆಯ ಸೈಡ್ ಪ್ರಾಡಕ್ಟ್ ಆಗಿ ಉಚಿತ ಈ ಮೈಲ್‌ಗಳು ಮತ್ತು ವೆಬ್‌ಸೈಟ್‌ಗಳು ಪ್ರಾರಂಭವಾದವು. ಆದರೆ ರೈಲಿನ ಆವಿಷ್ಕಾರ ಸರಕು ಸಾಗಣೆಗೆ ಆದರೂ ಅದರ ಬೈ ಪ್ರಾಡಕ್ಟ್ ಆಗಿ ವಸಾಹತುಶಾಹಿ ದೇಶಗಳಲ್ಲಿ ವಿಚಾರಗಳ ಸಾಗಾಣಿಕೆಯೂ ನಡೆದದ್ದರಿಂದ ರಾಷ್ಟ್ರ ವಿಮೋಚನೆಯ ಚಳವಳಿಯೂ ಗಟ್ಟಿಗೊಂಡಿತು. ಇದು ತಂತ್ರಜ್ಞಾನಕ್ಕಿರುವ ಎರಡು ಮುಖ. ತನ್ನಂತೇ ತಾನೆ ಯಾವುದೇ ತಂತ್ರಜ್ಞಾನಕ್ಕೆ ಅಂತರ್ಗತ ಮೌಲ್ಯಗಳು ಅಡಕಗೊಂಡಿರುವುದಿಲ್ಲ, ಆದರೆ ಈ ಹಿಂದೆಯೇ ಹೇಳಿದಂತೆ ಒಂದು ಬಂಡವಾಳಶಾಹಿ ಉತ್ಪಾದನಾ ಪ್ರಕ್ರಿಯೆಯ ಪ್ರಧಾನ ತರ್ಕವೇ ಸಾಮೂಹಿಕ ಉತ್ಪಾದನೆಯಾದ್ದರಿಂದ ಅದನ್ನು ಆಗಗೊಳಿಸುವ ತಂತ್ರಜ್ಞಾನದಲ್ಲೂ ಸಾಮೂಹಿಕತೆಯ ಅಂಶ ಇದ್ದೇ ಇರುತ್ತದೆ. ಇಂದು ಮಾಹಿತಿ ಉತ್ಪಾದನಾ ತಂತ್ರಜ್ಞಾನದಲ್ಲೂ ಈ ಸಾಮೂಹಿಕತೆಯ ಅಗತ್ಯವಿರುವುದರಿಂದ ಆ ಕ್ರಮದಲ್ಲೇ ಸಮೂಹ ಭಾಗೀದಾರಿಕೆ ಅದರ ಉತ್ಪಾದನೆಯ ಕ್ರಮದ ಭಾಗವೇ ಆಗಿಬಿಟ್ಟಿದೆ.

ಹೀಗೆ ಮೂಲಭೂತವಾಗಿ ಬಂಡವಾಳಶಾಹಿ ವ್ಯವಸ್ಥೆಯ ಲಾಭವನ್ನು ಹೆಚ್ಚಳ ಮಾಡುವ ಒಂದು ಪ್ರಕ್ರಿಯೆಯಲ್ಲಿ ಇರುವ ಸಾಮೂಹಿಕತೆಯ ಅಂಶವನ್ನೇ ಪಾಶ್ಚಿಮಾತ್ಯ ದೇಶಗಳಲ್ಲಿ ಜನಪರವಾಗಿ ದುಡಿಸಿಕೊಳ್ಳಲಾಯಿತು. ಅಂದರೆ ಯಾವುದೇ ತಂತ್ರಜ್ಞಾನದ ಜನಪರ ಬಳಕೆ ಸಾಧ್ಯವಾಗುವುದು ಅಂತಹ ಜನಪರ ಚಿಂತನೆಗಳುಳ್ಳ ಜನರು ಅದನ್ನು ಅದಕ್ಕೆ ಬಳಸಿಕೊಂಡಾಗ ಮಾತ್ರ!

ಈ ಸಾಧ್ಯತೆಗಳನ್ನು ಬಳಸಿಕೊಂಡೇ ಇವತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಕಾರ್ಪೊರೇಟ್ ನಿಯಂತ್ರಿತ ಮುಖ್ಯಧಾರೆ ಮಾಧ್ಯಮಗಳಿಗೆ ಪರ್ಯಾಯವಾದ ಜನಪರ ಎನ್ನಬಹುದಾದ ಸ್ಪೇಸ್ ಸೃಷ್ಟಿಯಾಗುತ್ತಿದೆ. ವಾಸ್ತವವಾಗಿ 1999ರಲ್ಲಿ ಸಿಯಾಟಲ್‌ನಲ್ಲಿ ನಡೆದ ವಿಶ್ವ ವಾಣಿಜ್ಯ ಸಂಸ್ಥೆಯ ಮಂತ್ರಿಮಂಡಳದ ವಿರುದ್ಧ ನಡೆದ ಪ್ರತಿರೋಧದಿಂದ ಹಿಡಿದು ಮುಂದಿನ ಎರಡು ವರ್ಷಗಳ ಕಾಲ ಸತತವಾಗಿ ನಡೆದ ಬಂಡವಾಳಶಾಹಿ ಮತ್ತು ಕಾರ್ಪೊರೇಟ್‌ಶಾಹಿ ವಿರುದ್ಧದ ಯಶಸ್ವಿ ಪ್ರತಿರೋಧಗಳಲ್ಲಿ ಈ ಅಂತರ್ಜಾಲ ಸೃಷ್ಟಿಸಿದ ಸ್ಪೇಸ್ ಬಹಳ ಮುಖ್ಯವಾದ ಪಾತ್ರವನ್ನು ವಹಿಸಿತ್ತು. ಆನಂತರದಲ್ಲಿ 2001ರಲ್ಲಿ ಅಫ್ಘಾನಿಸ್ತಾನ ಮತ್ತು ಇರಾಕ್ ಮೇಲೆ ಅಮೆರಿಕ ನಡೆಸಿದ ಮತ್ತು ನಡೆಸುತ್ತಿರುವ ಯುದ್ಧದ ವಿರುದ್ಧ ನಡೆದ ಬೃಹತ್ ಪ್ರತಿರೋಧ ಪ್ರದರ್ಶನಗಳಲ್ಲಿ ಸಹ ಈ ಅಂತರ್ಜಾಲ ಮಾಧ್ಯಮದ ಪ್ರಭಾವ ಅತ್ಯಂತ ಪ್ರಬಲವಾಗಿತ್ತು. ಹೀಗಾಗಿ ಅಂತರ್ಜಾಲ ಬರವಣಿಗೆಯು ಪಾಶ್ಚಿಮಾತ್ಯ ಸಾಮಾಜಿಕ ಸನ್ನಿವೇಶದಲ್ಲಿ ಒಂದು ಪರ್ಯಾಯ ಜನಪರ ಸ್ಪೇಸ್ ಅನ್ನು ಕಟ್ಟುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದೆ.

ಆದರೆ ಕನ್ನಡದಲ್ಲಿ ಅಂತರ್ಜಾಲ ಬರವಣಿಗೆಯ ಬಗ್ಗೆ ಬರೆಯುವಾಗ ಅದು ಈ ಬಗೆಯಲ್ಲಿ ಜನಧ್ವನಿಯನ್ನು ಹಿಗ್ಗಿಸುವ ಮತ್ತು ಗಟ್ಟಿಗೊಳಿಸುವ ಪಾತ್ರವನ್ನು ವಹಿಸುತ್ತಿದೆ ಎಂದು ಹೇಳಲು ಸಾಧ್ಯವೇ? ಕನ್ನಡದ ಯಾವ ಸಂದರ್ಭದಲ್ಲಿ ಅಂತರ್ಜಾಲ ಪ್ರವೇಶವಾಗಿದೆ ಮತ್ತು ಒಂದು ಮಾಧ್ಯಮವಾಗಿ ಅಂತರ್ಜಾಲದ ಬಳಕೆ ನಮ್ಮ ಸಂದರ್ಭದಲ್ಲಿ ಯಾವ ವರ್ಗ ಅಥವಾ ಸಮುದಾಯಗಳಿಗೆ ಸಾಧ್ಯವಾಗುತ್ತಿದೆ ಎಂಬ ಸಾಂಸ್ಕೃತಿಕ ಮತ್ತು ಸಾಮಾಜಿಕ ಎಂಬ ವಿಶ್ಲೇಷಣೆ ಮಾಡದೆ ಮೇಲಿನ ಪ್ರಶ್ನೆಗೆ ಉತ್ತರ ದೊರೆಯುವುದು ದುಸ್ತರ. ಇಂದು ನಮ್ಮ ದೇಶದಲ್ಲಿ ಮೊಬೈಲ್ ಫೋನು ಮತ್ತು ದ್ವಿಚಕ್ರ ವಾಹನಗಳು ಯಾವ ರೀತಿ ಕೇವಲ ಮೇಲ್ ವರ್ಗದ ಆಡಂಬರದ ವಸ್ತುಗಳಾಗದೆ ಬಡ ಮಧ್ಯಮ ವರ್ಗದ ಅಗತ್ಯವಾಗಿದೆಯೋ ಅದೇ ರೀತಿಯಲ್ಲಿ ಶ್ರೀಮಂತ ದೇಶಗಳಲ್ಲಿ ಇಂದು ಕಂಪ್ಯೂಟರ್ ಮತ್ತು ಅಂತರ್ಜಾಲವು ಬಡ ವರ್ಗದ್ದಲ್ಲದಿದ್ದರೂ ಕೆಳ ಮಧ್ಯಮ ಮತ್ತು ಮಧ್ಯಮ ವರ್ಗಗಳು ದಿನ ನಿತ್ಯ ಬಳಸುವ, ಪ್ರಾಯಶಃ ಹೆಚ್ಚು ಬಳಸುವ ಮಾಧ್ಯಮವಾಗಿದೆ. ಹೀಗಾಗಿ ಈ ಹೊಸ ಮಾಧ್ಯಮದಲ್ಲಿದ್ದ ಸಾಮೂಹಿಕತೆಯ ಅಂಶವನ್ನು ಅಲ್ಲಿನ "ಸಾಮಾನ್ಯ ಜನ" "ಸಾಮಾನ್ಯವೇ" ಆಗಿಬಿಟ್ಟಿದ್ದ ಈ ಹೊಸ ಮಾಧ್ಯಮವನ್ನು ಯಶಸ್ವಿಯಾಗಿ ಸಬ್ವರ್ಶನ್ ಮಾಡಲು ಬಳಸಿಕೊಂಡರು. ಆದರೆ ಕನ್ನಡದ ಸಂದರ್ಭದಲ್ಲಿ ಈ ಅಂತರ್ಜಾಲ ಸಾಮಾನ್ಯ ಜನರ ಸಾಮಾನ್ಯ ಮಾಧ್ಯಮವಾಗಿಲ್ಲ ಎಂಬುದನ್ನು ಅದನ್ನು ಬಳಸುತ್ತಿರುವವರಸಂಖ್ಯೆಯನ್ನು ಗಮನಿಸಿದರೇ ಅರ್ಥವಾಗ

ಭಾರತದಲ್ಲಿ ಅಂತರ್ಜಾಲ ಬಳಕೆದಾರರು 199 14 ಲಕ್ಷವಿದ್ದದ್ದು 2007ರಲ್ಲಿ 4.2 ಕೋಟಿಗೇರಿದೆ. ಅ ಹತ್ತು ವರ್ಷಗಳಲ್ಲಿ ಅಂತರ್ಜಾಲದ ಬಳಕೆ ಮೂನ ಪಟ್ಟು ಹೆಚ್ಚಿದೆ. ಆದರೆ ಇದು ಈ ದೇಶದ ಜನಸಂ ಶೇ.3.7ರಷ್ಟು ಮಾತ್ರ ಎಂಬುದನ್ನು ಮರೆಯುವ ಒಟ್ಟಾರೆ ಭಾರತದ ಬಳಕೆದಾರ ಮಧ್ಯಮ ವರ್ಗ ಕೋಟಿಯಷ್ಟು ಇದೆ ಎಂದು ಹೇಳಲಾಗುತ್ತದೆ. ಅ ಜನಸಾಮಾನ್ಯರ ಮಾತು ಬಿಡಿ. ಅಂತರ್ಜಾಲ ಬಳಸ ದಾದಷ್ಟು ಶಕ್ತಿ ಇರುವ ವರ್ಗದಲ್ಲೂ ಕೇವಲ ಶೇ ರಷ್ಟು ಜನ ಮಾತ್ರ ಅಂತರ್ಜಾಲವನ್ನು ಬಳಸುತ್ತಿ ಎಂಬುದು ಇದರ ಅರ್ಥ. ಇದಕ್ಕೆ ಪ್ರತಿಯಾಗಿ ಅಮೆರಿಕ ಶೇ.62ರಷ್ಟು ಜನ ಅಂತರ್ 'ಜಾಲಿ'ಗಳಾಗಿದ್ದಾರೆ!


ಇಡೀ ಭಾರತಕ್ಕೆ ಅನ್ವಯಿಸುವ ಈ ಅಂಕಿಅಂಶ ಕರ್ನಾಟಕದ ಸಂದರ್ಭದಲ್ಲಿ ಭಿನ್ನವಾಗಿರುತ್ತದೆ ಎಂದು ಊಹಿಸುವುದಕ್ಕೆ ಕಾರಣಗಳೇನೂ ಇಲ್ಲ. ಬೆಂಗಳೂರು ಐಟಿ-ಬಿಟಿ ರಾಜಧಾನಿಯಾಗಿರುವುದರಿಂದ ಕರ್ನಾಟಕಕ್ಕಾಗಲೀ ಅದರಲ್ಲೂ ಕನ್ನಡಕ್ಕಾಗಲೀ ಹೆಚ್ಚಿನ ಲಾಭವನ್ನೇನು ತಂದು ಕೊಟ್ಟಿಲ್ಲ. ಹೀಗಾಗಿ ಭಾರತದ ಸಂದರ್ಭದಲ್ಲಿ ಮತ್ತು ಕನ್ನಡದ ಸಂದರ್ಭದಲ್ಲಿ ಈ ಡಿಜಿಟಲ್ ಡಿವೈಡ್ ವರ್ಗಗಳ ನಡುವೆ ಪ್ರದೇಶಗಳ ನಡುವೆ ಮತ್ತು ಇಂಗ್ಲಿಷ್ ಹಾಗೂ ಇತರ ಭಾಷೆಗ ನಡುವೆ ಎದ್ದು ಕಾಣುತ್ತದೆ. ಹೀಗಾಗಿಯೇ ಹೊಸ ಡಿಜಿಟಲ್ ಸ್ಪೇಸ್ ಜನರ ಅಥವಾ ಪರ್ಯಾಯ ಜನಪರ ಸ್ಪೇಸ್ ಆಗದೆ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ವಿರಾಮದ ಅಭಿವ್ಯಕ್ತಿಯ ತಾಣವಾಗಿದೆ ಎಂದರೆ ತಪ್ಪೇನಲ್ಲ.

ಇಂದು ಕನ್ನಡದಲ್ಲಿ ಅಂತರ್ಜಾಲ ಬರವಣಿಗೆಯ ಒಟ್ಟು ಪ್ರಮಾಣ ಮತ್ತು ಅದರಲ್ಲಿ ತೊಡಗಿರುವವರ ಹಿನ್ನೆಲೆಯನ್ನು ವಿಶ್ಲೇಷಿಸಿದರೂ ಈ ಡಿಜಿಟಲ್ ಡಿವೈಡ್ ಎಷ್ಟು ಆಳವಾಗಿದೆ ಎಂಬುದು ಇನ್ನಷ್ಟು ಸ್ಪಷ್ಟವಾಗುತ್ತದೆ. ಕನ್ನಡದಲ್ಲಿ ಅಂತರ್ಜಾಲ ಬರವಣಿಗೆಯಲ್ಲಿ ತೊಡಗಿರುವ ಬಹುಪಾಲು ಜನ ಯುವಜನರು ಅಥವಾ ಹಿರಿಯ ಯುವ ಜನರು. ವಯಸ್ಸಾದವರು ಅಥವಾ ಕನ್ನಡ ಸಂದರ್ಭದಲ್ಲಿ ಪ್ರಮುಖರಾದವರು ಅನಂತಮೂರ್ತಿಯಂತವರನ್ನು ಬಿಟ್ಟರೆ ತಮ್ಮ ಮಾಧ್ಯಮವಾಗಿ ಅಂತರ್ಜಾಲವನ್ನು ಬಳಸಿಕೊಳ್ಳುತ್ತಿರುವವರು ಕಡಿಮೆ. ಈ ಯುವಜನರಲ್ ಸ್ವಲ್ಪ ಭಾಗದಷ್ಟಾದರೂ ಜನ ಪತ್ರಕರ್ತ ವೃತ್ತಿಯಲ್ಲಿರುವವರು ಅಥವಾ ಸಾಹಿತ್ಯ ಪ್ರವೃತ್ತಿಯನ್ನು ಉಳ್ಳ ಇತರ ಉತ್ತಮ ಉತ್ಪತ್ತಿಯುಳ್ಳ ವೃತ್ತಿಯಲ್ಲಿರುವವರು. ಇನ್ನು ಬಹಳಷ್ಟು ಜನರನ್ನು ಸಾಮಾನ್ಯವಾಗಿ ಜಾಗತೀಕರಣವು ಕನ್ನಡದ ಸಂದರ್ಭದ ಸೃಷ್ಟಿಸಿರುವ ನವ ಮಧ್ಯಮ ವರ್ಗ ಎನ್ನಬಹುದು. ಹೀಗಾಗಿ ಸಾರಾಂಶದಲ್ಲಿ ಈ ನವ ಮಧ್ಯಮ ವರ್ಗದ ಮನೋಧರ್ಮವೇ ಕನ್ನಡದ ಅಂತರ್ಜಾಲದಲ್ಲಿ ಕಾಣುತ್ತಿರುವ ಪ್ರಧಾನ ಮನೋಧರ್ಮವೆನ್ನಬಹುದು.

ಹಾಗಿದ್ದಲ್ಲಿ ಈ ನವ ಮಧ್ಯಮ ವರ್ಗದ ಮನೋಧರ್ಮ ವೇನು?

ಈ ಅಂತರ್ಜಾಲ ನವ ಮಧ್ಯಮವರ್ಗದ ಪ್ರಧ ಧ್ವನಿ ಅರಾಜಕೀಯ ಅಥವಾ ಸ್ವಲ್ಪ ಬಲಪಂಥದ ಕಡೆ ವಾ ವಂತದ್ದು. ಇದಲ್ಲದೆ ಗಣನೀಯವೆಂಬಷ್ಟು ಮಟ್ಟಿಗೆ ಪ್ರಗತಿ ಯುವ ಬರಹಗಾರರು ಸಹ ಈಗ ಅಂತರ್ಜಾಲಿಗಳಾಗಿದ ಅವರಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬೇರೆಬೇರೆ ಸಮುದಾ ಮತ್ತು ಜಾತಿಗಳ ಹಿನ್ನೆಲೆಯಿಂದ ಬಂದು ಬರೆಯುತ್ತಿರು ಯುವ ಬರಹಗಾರರಿದ್ದಾರೆ. ಕನಿಷ್ಟ ಬೆಂಗಳೂರಿನ ನಡೆಯುತ್ತಿರುವ ಹಲವು ಪ್ರಗತಿಪರ ಚಟುವಟಿಕೆಗಳ ಪ್ರಚ ಮತ್ತು ಸಂವಹನಕ್ಕೆ ಈ ಸಮುದಾಯ ಅಂತರ್ಜಾ ವನ್ನು ಬಳಸಿಕೊಳ್ಳುತ್ತಿದೆ. ಇದಲ್ಲದೆ ಎನ್‌ಜಿಓ ಸೆಕ್ಟರ ಜನ ಕೂಡಾ ಅಂತರ್ಜಾಲಿಗಳು.

ಇವೆಲ್ಲವೂ ಸ್ವಲ್ಪ ಸಮಾಧಾನಕರ ವಿಷಯ ಆಗಿದ್ದರೂ ಒಟ್ಟಾರೆ ನವ ಮಧ್ಯಮ ವರ್ಗ ಮನೋಧರ್ಮ ಬಲಪಂಥದ ಕಡೆ ವಾಲುತ್ತಿರುವು ಮತ್ತು ರಾಜಕೀಯ ವಿಷಯದ ಬಗ್ಗೆ ತಿರಸ ಎನ್ನುವುದು ಅವರುಗಳ ನಡುವೆ ಒಂದು ಮೌಲ್ಯ ಆಗಿಬಿಟ್ಟಿರುವುದರಿಂದ ಅಂತರ್ಜಾಲದಲ್ಲೂ ಇ ಸ್ಪಷ್ಟವಾಗಿಯೇ ವ್ಯಕ್ತವಾಗುತ್ತಿದೆ. ಎಲ್ಲಕ್ಕಿಂತ ಹೆಚ ಬದ್ಧ ಬಲಪಂಥೀಯರು ಬದ್ಧ ಎಡಪಂಥೀಯರಿಗಿ ಕನ್ನಡದ ಅಂತರ್ಜಾಲದಲ್ಲಿ ಬಹಳ ಸಕ್ರಿಯರಾಗಿ ವುದು ಕನ್ನಡ ಸಮಾಜದ ಸಾಂಸ್ಕೃತಿಕ ಮ ರಾಜಕೀಯ ಪರಿಸ್ಥಿತಿಗೆ ಹಿಡಿಯಬಲ್ಲ ಕೈಗನ್ನಡಿಯ ಆಗಿದೆ.



# ಯಡ್ಡಿಯ ಬಾಯಲ್ಲಿ ಬೆಣ್ಣೆ ಬಗಲಲ್ಲಿ ದೊಣ್ಣೆ



• ಗೌರಿ ಲಂಕೇಶ್
editorlankesh@gmail.com

ಇತರೆಡೆಯಂತೆ ನಮ್ಮ ರಾಜ್ಯದಲ್ಲೂ ಅಪಾರ ರ್ಜನ್ಯ ಶೋಷಣೆ ಮತ್ತು ಸಾಮಾಜಿಕ ತಾರತಮ್ಯಕ್ಕೆ ಯಾಗಿರುವ ಲಿಂಗತ್ವ ಅಲ್ಪಸಂಖ್ಯಾತರ ಕುರಿತಂತೆ ಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಸಚಿವ ಪುಟದಲ್ಲಿರುವ ಏಕೈಕ ಮಹಿಳೆ ಶೋಭಾ ಕರಂದ್ಲಾಜೆಗೆ ಕ್ಕಿದ್ದಂತೆ ಅಪಾರ ಕಾಳಜಿ ಉಕ್ಕುಕ್ಕಿಬಂದಿತ್ತು. ಆಗ ವರಿಬ್ಬರೂ ಜೊತೆಗೂಡಿ ಲಿಂಗತ್ವ ಅಲ್ಪಸಂಖ್ಯಾತರ ಟ್ಟಿಯಲ್ಲಿ ಸೇರುವ ಹಿಜ್ರಾಗಳು, ಕೋಥಿಗಳು, ಜೋಗ ದಿರು, ಮಂಗಳಮುಖಿಯರು, ಎಲ್ಲರಿಗೂ ಸರ್ಕಾರದ ಯಿಂದ ವಿವಿಧ ಸವಲತ್ತುಗಳನ್ನು ಘೋಷಿಸಿದ್ದರು.

ಈ ಹಿಂದೆ ಮಿತ್ರ ಸಿ.ಎಸ್.ದ್ವಾರಕಾನಾಥ್ ಅವರು ದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಾಗ ಲಿಂಗತ್ವ ಅಲ್ಪಸಂಖ್ಯಾತರನ್ನು ಹಿಂದುಳಿದ ವರ್ಗಕ್ಕೆ ಸಬೇಕೆಂದು ಶಿಫಾರಸ್ಸು ಮಾಡಿದ್ದರು. ಇದೇ ದ್ವಾರ ನಾಥ್ ಅವರನ್ನು ಅಧ್ಯಕ್ಷಸ್ಥಾನದಿಂದ ಕಿತ್ತೊಗೆಯಲು ಳಷ್ಟು ಕಸರತ್ತುಗಳನ್ನು ನಡೆಸಿದ್ದ ಯಡ್ಡಿ ದ್ವಾರಕಾನಾಥ್ ರು ಮಾಡಿದ್ದ ಶಿಫಾರಸ್ಸನ್ನು ಅನು ೇದಿಸಿ ಈ ಲಿಂಗತ್ವ ಅಲ್ಪಸಂಖ್ಯಾತರನ್ನು ದುಳಿದ ವರ್ಗಗಳ ಪ್ರವರ್ಗ 2ಎ ಸೇರಿಸಿದ್ದೇವೆ ಎಂದು ಘೋಷಿಸಿ ು.

ಅಷ್ಟಕ್ಕೇ ತೃಪ್ತಿಪಟ್ಟುಕೊಳ್ಳದೆ ಈ ದ ಜನರ ಉದ್ಧಾರಕ್ಕಾಗಿ ಹಲವಾರು ೋಜನೆಗಳನ್ನೂ ಪ್ರಕಟಿಸಿದರು. ಅವು ಲ್ಲಿ ಮುಖ್ಯವಾದವು:

ನಲವತ್ತು ವರ್ಷ ಮೀರಿರುವವರಿಗೆ ) ರೂಪಾಯಿಗಳ ಮಾಸಿಕ ಪಿಂಚಣಿ ತುವುದು.

ಕೊಳಚೆ ನಿರ್ಮೂಲನಾ ಮಂಡಳಿ ಯಿಂದ ಮನೆಗಳನ್ನು ಕಟ್ಟಿಸಿಕೊಡುವುದು.

ಬಿಪಿಎಲ್ ಪಡಿತರ ಚೀಟಿಗಳನ್ನು ನೀಡುವುದು.

ಉಚಿತ ವೈದ್ಯಕೀಯ ನೆರವನ್ನಲ್ಲದೆ ಆರೋಗ್ಯ ಯನ್ನೂ ಒದಗಿಸುವುದು.

ಸ್ವಯಂ-ಉದ್ಯೋಗ ಕಲ್ಪಿಸಲು 20,000 ದಿಂದ ನು ಲಕ್ಷದ ತನಕ ಸಾಲ ನೀಡುವುದು.

ಮತದಾರರ ಪಟ್ಟಿಯಲ್ಲಿ ಇವರನ್ನು ಸೇರಿಸುವುದು.

ಕಾಲೇಜು ಶಿಕ್ಷಣದಲ್ಲಿ ಶೇ. ಒಂದರಷ್ಟು ಸಲಾತಿಯನ್ನು ಒದಗಿಸುವುದು....

..., ಇದನ್ನೆಲ್ಲ ಕೇಳಿ ಯಡ್ಡಿ ಮತ್ತು ಶೋಭಾ ತೃತ್ವದಲ್ಲಿ ರಾಜ್ಯದ ಬೇರೆ ಜನರಿಗೆ ಏನೇನೂ ದಿದ್ದರೂ ರಾಜ್ಯದ ಲಿಂಗತ್ವ ಅಲ್ಪಸಂಖ್ಯಾತರಿಗಂತೂ ಾತ್ ರಾಮರಾಜ್ಯವೇ ದಕ್ಕುತ್ತಿದೆ ಎಂದು ಹಲವು ಗತ್ವ ಅಲ್ಪಸಂಖ್ಯಾತರು ಭ್ರಮಿಸಿದ್ದಿರಬಹುದು...

ಆದರೆ ವಾಸ್ತವವಾಗಿ ಈ ಎಲ್ಲ ಯೋಜನೆಗಳು ಟಗೊಂಡು ಇಲ್ಲಿಗೆ ಒಂದು ವರ್ಷವಾಗುತ್ತಾ ದಿದ್ದರೂ ಇಲ್ಲಿಯತನಕ ಯಾವೊಬ್ಬ ಲಿಂಗತ್ವ ಸಂಖ್ಯಾತರಿಗೆ ಮನೆ, ಸಾಲ, ಉದ್ಯೋಗ, ಆರೋಗ್ಯ ಇದ್ಯಾವುದೂ ದಕ್ಕಿಲ್ಲ. ಮಾತ್ರವಲ್ಲ, ಕನಿಷ್ಠ ಒಂದು ತರ ಚೀಟಿ ಕೂಡ ಸಿಕ್ಕಿಲ್ಲ!

ಅಂದರೆ ಯಡಿಯೂರಪ್ಪ ತಾನು ಕೊಟ್ಟ ಮಾತನ್ನು ಸಿಕೊಳ್ಳುವ ಪರಿ ಇದು!

ಹೋಗಲಿ, ಯಡ್ಡಿ ಸರ್ಕಾರದಿಂದ ಈ ನತದೃಷ್ಟರಿಗೆ ನ್ನು ಮಾಡಲಾಗದಿದ್ದರೂ ಪರವಾಗಿಲ್ಲ ಎಂದುಕೊಂಡು ಸ್ಮನಾಗುವಂತಿಲ್ಲ, ಯಾಕೆಂದರೆ, ಒಂದು ವರ್ಷದ ದೆ ಇದೇ ಜನರ ಬಗ್ಗೆ ಅಪಾರ ಕಾಳಜಿ ತೋರಿದ್ದ ಯಡಿಯೂರಪ್ಪನ ಸರ್ಕಾರ ಕಳೆದ ಮಾರ್ಚ್ ತಿಂಗಳಲ್ಲಿ ಇದೇ ಲಿಂಗತ್ವ ಸಮುದಾಯದವರನ್ನೆಲ್ಲ ಮತ್ತಷ್ಟು ಸಂಕಷ್ಟಕ್ಕೆ ದೂಡುವ ಕಾನೂನನ್ನು ಜಾರಿಗೆ ತಂದಿದೆ. 'ಬಾಯಲ್ಲಿ ಬೆಣ್ಣೆ ಬಗಲಲ್ಲಿ ದೊಣ್ಣೆ' ಎಂಬ ಮಾತಿಗೆ ಯಡ್ಡಿ ಸರ್ಕಾರ ಸೂಕ್ತ ಸಾಕ್ಷಿಯಂತೆ ವರ್ತಿಸಿದೆ.

ಯಡಿಯೂರಪ್ಪನ ಅಕ್ರಮ ಮತ್ತು ಅನೈತಿಕ ಸರ್ಕಾರವನ್ನು ವಿರೋಧಿಸಿ ಕಳೆದ ಬಾರಿಯ ವಿಧಾನಸಭಾದ ಕಲಾಪವನ್ನು ವಿರೋಧ ಪಕ್ಷಗಳು ಬಹಿಷ್ಕರಿಸಿದ್ದವಲ್ಲ, ಆ ಅವಕಾಶವನ್ನೇ ಉಪಯೋಗಿಸಿಕೊಂಡ ಯಡ್ಡಿ ಸರ್ಕಾರ ಹಲವಾರು ಜನವಿರೋಧಿ ನಿಯಮಗಳನ್ನು ಅಂಗೀಕರಿಸಿತ್ತು. ಅವುಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರನ್ನು ಮತ್ತಷ್ಟು ದಮನಕ್ಕೆ ಈಡು ಮಾಡುವ ಕಾನೂನಿನ ತಿದ್ದುಪಡಿಯೂ ಒಂದಾಗಿತ್ತು.

ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಸಂದರ್ಭದಲ್ಲಿ **Criminal Tribes Act** ಎಂಬ ಕಾನೂನನ್ನು



ಜಾರಿಗೆ ತಂದಿದ್ದರು. ಹಾಗೆ ಮಾಡುವ ಮೂಲಕ ಭಾರತದ ಹಲವಾರು ಸಮುದಾಯಗಳನ್ನು ಹುಟ್ಟಿನಿಂದ ಅಪರಾಧಿ ಸಮುದಾಯಗಳು ಎಂದು ಘೋಷಿಸಿದ್ದರಲ್ಲದೆ ಆ ಸಮುದಾಯಗಳ ಮೇಲೆ ಇನ್ನಿಲ್ಲದಂತಹ ದೌರ್ಜನ್ಯವನ್ನು ಎಸಗಲಾಗಿತ್ತು. ಸ್ವಾತಂತ್ರ ಬಂದ ನಂತರ ಈ ಕಾನೂನನ್ನು ರದ್ದುಪಡಿಸಲಾಗಿತ್ತು.

ಆದರೆ ಈಗ ಯಡಿಯೂರಪ್ಪನ ಸರ್ಕಾರ ಅಂದಕಾಲತ್ತಿಲ್ ಬ್ರಿಟಿಷರು ಜಾರಿಗೆ ತಂದಿದ್ದ ಕಾನೂನಿನ ಹಲವಾರು ಅಂಶಗಳನ್ನೇ ಸೇರಿಸಿಕೊಂಡು ಇಡೀ ಲಿಂಗತ್ವ ಅಲ್ಪಸಂಖ್ಯಾತರ ಸಮುದಾಯವನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. ಮಾತ್ರವಲ್ಲ, ಅವರ ಮೇಲೆ ಮನಸ್ಸಿಗೆ ಬಂದಂತಹ ಕ್ರಮ ಜರುಗಿಸುವ ಸ್ವಾತಂತ್ರ್ಯವನ್ನು ಪೊಲೀಸ್ ಇಲಾಖೆಗೆ ನೀಡಿದೆ.

ಈ ಹಿಂದೆ ಚಾಮಯ್ಯ ಎಂಬ ಏಕವ್ಯಕ್ತಿ ಸಮಿತಿಯು ಕರ್ನಾಟಕ ಪೊಲೀಸ್ ಕಾಯಿದೆ 1964ರಲ್ಲಿ ತಿದ್ದುಪಡಿ ತರಬೇಕೆಂದು ಶಿಫಾರಸ್ಸು ಮಾಡಿತ್ತು. ಆ ಶಿಫಾರಸ್ಸುಗಳು ಎಂತಹವು, ಅವುಗಳು ಪ್ರಸ್ತುತ ಕಾಲಮಾನಕ್ಕೆ ಸೂಕ್ತವೇ ಎಂದೆಲ್ಲ ಚಿಂತಿಸುವ ಗೋಜಲಿಗೆ ಯಡ್ಡಿಯ ಸರ್ಕಾರ ಹೋಗಿಲ್ಲ.

ಪಾಪ, ಹೋಮ, ಹವನ, ಯಜ್ಞ, ಭ್ರಷ್ಟಾಚಾರ, ಭೂಕಬಳಿಕೆ, ಆಣೆಪ್ರಮಾಣ ಇತ್ಯಾದಿಗಳಲ್ಲೇ ಬ್ಯೂಸಿ ಆಗಿರುವ ಯಡ್ಡಿಗೆ ರಾಜ್ಯಾಡಳಿತದ ಬಗ್ಗೆ ಗಮನಹರಿಸಲು ಸಮಯವಾದರೂ ಎಲ್ಲಿಂದ ಸಿಗಬೇಕು?

ಆದ್ದರಿಂದ ಚಾಮಯ್ಯ ಅವರು ಶಿಫಾರಸ್ಸು ಮಾಡಿದಂತೆ 'ಹೈದರಾಬಾದ್ ಯೂನಕ್ಸ್ ಆಕ್ಟ್' ಎಂಬ ಪುರಾತನ ಕಾಲದ ಕಾನೂನಿನಿಂದ ಹಲವಾರು ಅಂಶಗಳನ್ನು ತೆಗೆದುಕೊಂಡು ನಮ್ಮ ರಾಜ್ಯದಲ್ಲಿ ಜಾರಿಗೆ ತಂದಿದ್ದಾರೆ. ಅದರಂತೆ ಇನ್ನುಮುಂದೆ ರಾಜ್ಯದ ಯಾವುದೇ ಪೊಲೀಸಿಗೆ ಲಿಂಗತ್ವ ಅಲ್ಪಸಂಖ್ಯಾತರು ಗಂಡು ಮಕ್ಕಳನ್ನು ಅಪಹರಿಸಲಿದ್ದಾರೆ ಅಥವಾ ಅಂತಹ ಗಂಡುಮಕ್ಕಳನ್ನು ಕರೆದೊಯ್ದು ಲಿಂಗ ಬದಲಾವಣೆ ಪ್ರಚೋದನೆ ನೀಡಲಿದ್ದಾರೆ, ಅಸ್ವಾಭಾವಿಕ ಅಪರಾಧಗಳಲ್ಲಿ ತೊಡಗಲಿದ್ದಾರೆ, ಅಥವಾ ಇನ್ನೆಂತಹದ್ದೇ ಅನುಮಾನ ಬಂದರೂ ಸಾಕು ಆತ ಆ ಸಮುದಾಯದ ಯಾರನ್ನಾದರೂ ಬಂಧಿಸಬಹುದು.

ಈಗಾಗಲೇ ಲಿಂಗತ್ವ ಅಲ್ಪಸಂಖ್ಯಾತರು ಹೆಚ್ಚು ದೌರ್ಜನ್ಯವನ್ನು ಎದುರಿಸುತ್ತಿರುವುದು ಪೊಲೀಸರ ಕೈಕೆಳಗೆ. ಹೀಗಿರುವಾಗ ಈ ಸಮುದಾಯದ ಸಮಸ್ಯೆಗಳ ಬಗ್ಗೆ ಪೊಲೀಸರನ್ನು ಸೂಕ್ಷ್ಮಗೊಳಿಸುವ ಬದಲಾಗಿ ಅವರನ್ನು ಮತ್ತಷ್ಟು ಪೋಷಿಸುವ ಹಕ್ಕನ್ನು ಅದೇ ಖಾವಿಗಳಿಗೆ ಕೊಟ್ಟರೆ ಏನಾಗುತ್ತದೆ ಎಂದು ಊಹಿಸುವುದು ಸುಲಭ.

(ಈ ತಿದ್ದುಪಡಿಯನ್ನು ರೂಪಿಸುವಾಗ ಯಡ್ಡಿಯ ಸರ್ಕಾರ ಅದೆಷ್ಟು ಉದಾಸೀನತೆ ತೋರಿದೆ ಎಂದರೆ ಇದರಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಎಂಬ ಪದವನ್ನಾದರೂ ಸರಿಯಾಗಿ ಬಳಸಲಾಗಿದೆಯೇ ಎಂದು ಯೋಚಿಸಲೂ ಹೋಗಿಲ್ಲ, ಆದ್ದರಿಂದ ತಿದ್ದುಪಡಿಯಲ್ಲಿ 'ನಪುಂಸಕರು' ಎಂದು ದಾಖಲಿಸಲಾಗಿದೆ!)

ಇಂತಹ ಒಂದು ಘೋರ ತಿದ್ದುಪಡಿಯಲ್ಲಿ ಕಾನೂನು ಸಚಿವ ಸುರೇಶ್ ಕುಮಾರ್ ಅವರ ಪಾತ್ರವೂ ಇದೆ. ಹಲವರು ಈ ಸುರೇಶ್ ಕುಮಾರ್ ತುಂಬಾ ಜಾಣ, ಕಾನೂನನ್ನು ಚೆನ್ನಾಗಿ ಅರಿತವರು, ಇತರೆ ಚೆಡ್ಡಿಗಳಿಗಿಂತ ಉತ್ತಮರು ಎಂದೆಲ್ಲ ಅಭಿಪ್ರಾಯವನ್ನು ಹೊಂದಿದ್ದಾರೆ. ಆದರೆ ಅದೆಲ್ಲ ಎಷ್ಟು ನಿಜ?

ಅದಕ್ಕೆ ಉತ್ತರ ಸುರೇಶ್ ಕುಮಾರ್ ಅವರು ಈ ತಿದ್ದುಪಡಿಯ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯವೇ ಸಾಕ್ಷಿಯಂತಿದೆ. ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತಂದಿರುವ ಈ ತಿದ್ದುಪಡಿಯಿಂದಾಗಿ ಲಿಂಗತ್ವ ಅಲ್ಪಸಂಖ್ಯಾತರು ಗಾಬರಿಗೊಂಡಿದ್ದಾರೆ ಎಂದು ಹಲವು ಸಂಘಟನೆಗಳು ಬರೆದ ಪತ್ರಕ್ಕೆ ಸುರೇಶ್ ಕುಮಾರ್ ಅವರು "ಲೈಂಗಿಕ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ತಡೆ, ಸಾಮಾಜಿಕ ಅಸಮಾನತೆ ಹಾಗೂ ಶೋಷಣೆ ತಡೆಯಲು ಕರ್ನಾಟಕ ಪೊಲೀಸ್ ಅಧಿನಿಯಮ 2009ನ್ನು ಮಾರ್ಚ್ 2011ರ ವಿಧಾನಮಂಡಲ ಅಧಿವೇಶನದಲ್ಲಿ ಅನುಮೋದಿಸಲಾಗಿದೆ. ಈ ಅಧಿನಿಯಮದಡಿ ಇನ್ನೂ ಹೆಚ್ಚಿನ ರಕ್ಷಣೆ ಮತ್ತು ಹಕ್ಕು ಒದಗಿಸುವ ನಿಟ್ಟಿನಲ್ಲಿ ಮತ್ತಷ್ಟು ಅಂಶಗಳನ್ನು ಸೇರಿಸಬೇಕು ಎಂಬ ಲೈಂಗಿಕ ಅಲ್ಪಸಂಖ್ಯಾತರ ಬೇಡಿಕೆಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುತ್ತದೆ" ಎಂದು ಹೇಳಿದ್ದಾರೆ.

ತಿದ್ದುಪಡಿಯಲ್ಲಿ ಸ್ಪಷ್ಟಪಡಿಸಿರುವ ಧೋರಣೆ ಎಂತಹದ್ದು ಮತ್ತು ಸುರೇಶ್ ಕುಮಾರ್ ಮಾತನಾಡುತ್ತಿರುವ 'ರಕ್ಷಣೆ' ಎಂತಹದ್ದು, ಇವೆರಡಕ್ಕೆ ಎತ್ತಿಂದೆತ್ತಣ ಸಂಬಂಧ?!

ಆದರೆ ಇದೇ ವಿಷಯ ಕುರಿತು ಇದೇ ಬಿಜೆಪಿ ಸರ್ಕಾರದಲ್ಲಿ ಸಚಿವೆ ಆಗಿರುವ ಶೋಭಾ ಕರಂದ್ಲಾಜೆಯವರ ಅಭಿಪ್ರಾಯ ಬೇರೆಯದೇ ಆಗಿದೆ. ಕರಂದ್ಲಾಜೆ ಈ ಕುರಿತು ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ: "ಕಳೆದ ವಿಧಾನಸಭೆಯಲ್ಲಿ ಅಸ್ವಾಭಾವಿಕ ಅಪರಾಧಗಳನ್ನು ನಿಯಂತ್ರಿಸಲು ಪೊಲೀಸ್ ಅಧಿನಿಯಮ 1964ರ 36ರ ಪ್ರಕರಣದಲ್ಲಿ ನಪುಂಸಕರ ನಿಯಂತ್ರಣಕ್ಕೆ ಅಧಿಕಾರ 36 (ಎ) ಎಂಬಲ್ಲಿ 'ತನ್ನ ಅಧಿಕಾರ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಎಲ್ಲಾ ನಪುಂಸಕರ' ಎಂಬುದಾಗಿ ಉಲ್ಲೇಖಿಸಲಾಗಿದೆ. ಇದರಿಂದ ಸದರಿ ಪ್ರಕರಣಗಳಲ್ಲಿ ಭಾಗವಹಿಸದೇ ಇರುವ ನಿರಪರಾಧಿ ಹಿಜ್ರಾಗಳ ವಿರುದ್ಧವೂ ಸಹ ಕ್ರಮ ಜರುಗಿಸಬಹುದಾಗಿರುತ್ತದೆ. ಹಾಗೂ ಆ ಪ್ರಾಂತ್ಯದಲ್ಲಿ ವಾಸಿಸುವ ಎಲ್ಲಾ ಹಿಜ್ರಾಗಳನ್ನು ಒಳಗೊಂಡು ರಿಜಿಸ್ಟರಿನಲ್ಲಿ ವಿವರಗಳನ್ನು ದಾಖಲಿಸಲು ಅನುವು ಮಾಡಿಕೊಟ್ಟಂತಾಗುತ್ತದೆ. ಆದಕಾರಣ ಈ ವಿಚಾರದಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡುವ ಅನಿವಾರ್ಯತೆ ಇರುತ್ತದೆ. ಈ ತಿದ್ದುಪಡಿಯ ಆಧಾರದಲ್ಲಿ ಈಗಾಗಲೇ ಪೊಲೀಸ್ ಅಧಿಕಾರಿಗಳಿಂದ ಹಿಜ್ರಾಗಳಿಗೆ ತೊಂದರೆ ಕೊಡುವುದು ಆರಂಭವಾಗಿದೆ."

ಕಳೆದವಾರ ಈ ತಿದ್ದುಪಡಿ ಮತ್ತು ಅದರಿಂದಾಗಿ ಲಿಂಗತ್ವ ಅಲ್ಪಸಂಖ್ಯಾತರ ಮೇಲಾಗುವ ದೌರ್ಜನ್ಯವನ್ನು ಕುರಿತು ಒಂದು ಚರ್ಚಾಗೋಷ್ಠಿ ನಡೆಯಿತು. ಅಂದು ಈ ತಿದ್ದುಪಡಿಯನ್ನು ಎಲ್ಲರೂ ವಿರೋಧಿಸಬೇಕು ಎಂದು ಹೇಳಿದ ದ್ವಾರಕಾನಾಥರು ಒಂದು ಸಲಹೆಯನ್ನು ನೀಡಿದರು. ಅದೇನೆಂದರೆ ಹೇಗಿದ್ದರೂ ಯಡಿಯೂರಪ್ಪನ ಬಿಜೆಪಿ ಸರ್ಕಾರಕ್ಕೆ ದೇವರು ಮತ್ತು ದೇವಸ್ಥಾನಗಳಲ್ಲಿ ಅಪಾರ ನಂಬಿಕೆ ಇರುವುದರಿಂದ, ಅವರ ಸರ್ಕಾರ ಈ ತಿದ್ದುಪಡಿಯನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳದಿದ್ದರೆ ಲಿಂಗತ್ವ ಅಲ್ಪಸಂಖ್ಯಾತರೆಲ್ಲ ಧರ್ಮಸ್ಥಳಕ್ಕೆ ಹೋಗಿ "ಈ ಕಾನೂನನ್ನು ಜಾರಿಗೆ ತಂದ ಎಲ್ಲ ರಾಜಕಾರಣಿಗಳ ಮತ್ತು ಅಧಿಕಾರಿಗಳ ಮನೆಗಳಲ್ಲಿ ತಮ್ಮಂತಹ ಜನರು ಜನಿಸಲಿ" ಎಂದು ಮಂಜುನಾಥನಿಗೆ ಪ್ರಾರ್ಥನೆ ಸಲ್ಲಿಸುವುದು!

ಇದನ್ನು ಕೇಳಿ ರಾಮಭಕ್ತರಾದ ಚೆಡ್ಡಿಗಳಲ್ಲಿ ನಡುಕ ಹುಟ್ಟುವುದು ಖಂಡಿತ. ಯಾಕೆಂದರೆ "ನೀವು ಆಡಿದ ಮಾತು ಸತ್ಯವಾಗಲಿ" ಎಂದು ಶ್ರೀರಾಮನೇ ಲಿಂಗತ್ವ ಅಲ್ಪಸಂಖ್ಯಾತರಿಗೆ 'ವರ' ನೀಡಿದ್ದಾನೆ ಎಂಬ ಕತೆಯೇ ಇದೆ!!



# ಮರಿಯಾ ಮೋನಿಕಾ ಕೊಂದಳು ಬಂದಳು


ಆಧುನಿಕ ಇಂಡಿಯಾದ ನಗರವಾಸಿ ಸುಶಿಕ್ಷಿತ ಯುವಜನರ ಕನಸು, ಭ್ರಮೆ ಹುಚ್ಚಾಟಗಳಿಗೆ ಸಾಕ್ಷಿಯಾಗಿರುವ ಮರಿಯಾ-ನೀರಜ್-ಜೆರೋಂ ತ್ರಿಕೋನ ಪ್ರೇಮ ಪ್ರಸಂಗ ಒಂದು ದುರಂತ ಘಟನೆಯೇನೊ ನಿಜ. ಆದರೆ ಮರಿಯಾಳ ವರ್ತನೆ ಈ ದುರಂತ ಅವಳಿಗೆ ಸಂಬಂಧಿಸಿದ್ದಲ್ಲ ಎನ್ನುವಂತಿರುವುದೇ ಆಶ್ಚರ್ಯಕರ.



ಮೈಸೂರಿನ ನಟಿ ಮರಿಯಾ ಮೋನಿಕಾ ಮುಂಬೈ ಜೈಲಿನಿಂದ ಬಿಡುಗಡೆಯಾಗಿದ್ದಾಳೆ.


ಇವಳು ತನ್ನ ಪ್ರಿಯಕರ ಎಮಿಲಿ ಜೆರೋಮ್ ಮ್ಯಾಥ್ಯೂ ಎಂಬುವನ ಜೊತೆಗೂಡಿ ಇನ್ನೊಬ್ಬ ಪ್ರಿಯಕರ ಮುಂಬೈನ ನೀರಜ್ ಗ್ರೋವರ್ ಎಂಬುವನ ಕೊಲೆ ಮಾಡಿದ್ದ ಪ್ರಕರಣ ನಿಮಗೆ ನೆನಪಿರಬಹುದು. ಆ ಹತ್ಯಾ ಘಟನೆಯ ವಿಚಾರಣೆ ಮುಗಿದಿದೆ. ಮರಿಯಾಗೆ ಕೋರ್ಟ್ ಮೂರು ವರ್ಷ ಶಿಕ್ಷೆ ವಿಧಿಸಿದೆ. ನೀರಜ್‌ಗೆ ಚಾಕು ಹಾಕಿ ಇರಿದು ಕೊಂದಿದ್ದ ಜೆರೋಮ್‌ಗೆ ಹತ್ತು ವರ್ಷಗಳ ಶಿಕ್ಷೆಯಾಗಿದೆ. ಕಳೆದ ಮೂರು ವರ್ಷಗಳಿಂದ ವಿಚಾರಣಾಧೀನ ಕೈದಿಯಾಗಿ ಮುಂಬೈನ ಆರ್ಥರ್ ರೋಡ್ ಜೈಲಿನಲ್ಲಿದ್ದ ಮರಿಯಾ ಒಂದರ್ಥದಲ್ಲಿ ಈಗಾಗಲೇ ಶಿಕ್ಷೆ ಅನುಭವಿಸಿರುವ ಕಾರಣ ಅವಳ ಬಿಡುಗಡೆಯಾಗಿದೆ.


ಜೆರೋಮ್


ಗ್ರೋವರ್


ಈಗಿನ್ನೂ 28 ರ ಯುವಕ ಜೆರೋಂ ಇನ್ನೂ 7 ವರ್ಷ ಜೈಲಿನಲ್ಲಿರಬೇಕು. ಮುಂಬೈನ ಸೆಷನ್ಸ್ ಕೋರ್ಟ್‌ನ ನ್ಯಾಯಾಧೀಶ ಎಂ.ಎಲ್. ಚಾಂದ್‌ವಾನಿ ಶಿಕ್ಷೆಯ ತೀರ್ಪನ್ನು ಓದಿ ಮುಗಿಸಿದಾಗ ಜೆರೋಂ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತಿತ್ತು.

ಜೈಲಿನ ಜೀವನ ಅದೆಷ್ಟು ಕಷ್ಟವೆಂಬುದು ಅವನಿಗೀಗಾಗಲೇ ಗೊತ್ತಾಗಿದೆ. ಆದರೆ ತೀರ್ಪು ಕೇಳಿ ಮರಿಯಾ ಅಳಲೂ ಇಲ್ಲ, ನಗಲೂ ಇಲ್ಲ, ಅದರ ಬದಲಾಗಿ ತನ್ನ ಲಾಯರ್ ಖಾನ್‌ರನ್ನು ಪಕ್ಕ ಕೂರಿಸಿಕೊಂಡು 'ನಾನು ಮುಗ್ಧೆ ನೀರಜ್‌ನನ್ನು ಸಾಯಿಸಿದ್ದು ಜೆರೋಂ, ನಾನಲ್ಲ' ಅಂದು ಎದ್ದು ಹೋಗಿದ್ದಾಳೆ. ಈ ಕೋರ್ಟ್ ತೀರ್ಪು ಕೇಳಿ ನೀರಜ್‌ನ ತಂದೆ-ತಾಯಿ ಭೋರೆಂದು ಅಳುತ್ತಿದ್ದಾರೆ. ನೀರಜ್‌ನ ಗೆಳೆಯರು ಪ್ರತಿಭಟಿಸುತ್ತಿದ್ದಾರೆ. ಮೀಡಿಯಾಗಳು ಅಪಸ್ವರವೆತ್ತುತ್ತಿವೆ. ಆದರೆ ಒಬ್ಬ ರಾಮ್‌ಗೋಪಾಲ್ ವರ್ಮ ಮಾತ್ರ 'ಮರಿಯಾ ಒಪ್ಪಿದರೆ ಅವಳನ್ನೇ ಹಾಕಿಕೊಂಡು ಅದೇ ಲವ್ ಟ್ರಯಾಂಗಲ್ ಕತೆ ಇಟ್ಟುಕೊಂಡು ಒಂದು ಸಿನಿಮಾ ಮಾಡ್ತೀನಿ' ಅನ್ನುತ್ತಿದ್ದಾನೆ. ಇನ್ನು ನಾವ್ಯಾಕೆ ತಡ ಮಾಡಬೇಕೆಂದು ಅನಿಲ್ ಎಂಬಾತ ಕನ್ನಡ ಸಿನಿಮಾ ತೆಗೆಯಲು ಹೊರಟಿದ್ದಾನೆ. 'ಸೂರ್ಯ ದಿ ಗ್ರೇಟ್' ಎಂಬ ಸಡನ್ನಾಗಿ ಬಂದು ಮಾಯವಾದ ಚಿತ್ರದ ನಿರ್ದೇಶಕ ಖುಷಿ ಎಂಬಾತನೇ ಇದರ ನಿರ್ದೇಶಕ.



ಇವರಿಬ್ಬರೂ ಬೃಹಸ್ಪತಿಗಳು ಸೇರಿಕೊಂಡು ಸಿನಿಮಾಗೆ 'ಕೊಟ್ಟಲ್ಲಪ್ಪೋ ಕೈ' ಎನ್ನುವ ತಿಕ್ಕಲು ಹೆಸರಿಟ್ಟಿದ್ದಾರೆ. ನಯನ ಕೃಷ್ಣ ಎಂಬ ದಢೂತಿ ಹುಡುಗಿ, ಸಾಧಾರಣ ರೂಪು, ಪ್ರತಿಭೆಯ ನಟಿ ಕೈಕೊಟ್ಟ ಪಾತ್ರ ಮಾಡುತ್ತಿದ್ದಾಳೆ. ಈ ಸಿನಿಮಾದ ಬಗ್ಗೆ ಯಾರೂ ವಿಶೇಷ ನಿರೀಕ್ಷೆಗಳನ್ನು ಇಟ್ಟುಕೊಳ್ಳುವ ಅಗತ್ಯವಿಲ್ಲ ಬಿಡಿ. ಮತ್ತೊಂದೆಡೆ ಮುಂಬೈನ ಮುಂಬೈ ಮಿರರ್ ಎಡಿಟರ್ ಮಿನಾಲ್ ಬಗೇಲ್ **Death in Mumbai** ಎನ್ನುವ ಪುಸ್ತಕ ಬರೆಯಲು ಕೂತಿದ್ದಾಳೆ. ಇವೆಲ್ಲಾ ಖಂಡಿತಾ ಇನ್ನೊಂದಷ್ಟು ದಿನ ಸುದ್ದಿಯಲ್ಲಿರುತ್ತದೆ ನಿಜ. ಆದರೆ ಈ ಕೊಲೆಯ ಅರ್ಥವೇನು? ಮರಿಯಾ ಎಂಥವಳು? ಜೆರೋಂ ಆ ಕ್ಷಣದ ಆವೇಶಕ್ಕೆ ಸಿಕ್ಕು ಕೊಲೆ ಮಾಡಿದವನು, ಹಾಗಾಗಿ ಅವನನ್ನು ಮುಗ್ಧ ಬಲಿಪಶು ಅನ್ನಬಹುದಾ? ಇವರ ಗದ್ದಲದಲ್ಲಿ ಸಿಲುಕಿ ಹೆಣವಾದ ನೀರಜ್ ಬಗ್ಗೆ ಏನು ಹೇಳಬಹುದು? ಈ ಎಲ್ಲಾ ಪ್ರಶ್ನೆಗಳು ಹಾಗೆ ಉಳಿದುಬಿಡುತ್ತದೆ.

ಆಧುನಿಕ ಇಂಡಿಯಾದ ನಗರವಾಸಿ ಸುಶಿಕ್ಷಿತ ಯುವಜನರ ಕನಸು, ಭ್ರಮೆ ಹುಚ್ಚಾಟಗಳಿಗೆ ಸಾಕ್ಷಿಯಾಗಿರುವ ಮರಿಯಾ-ನೀರಜ್-ಜೆರೋಂ ತ್ರಿಕೋನ ಪ್ರೇಮ ಪ್ರಸಂಗ ಒಂದು ದುರಂತ ಘಟನೆಯೇನೊ ನಿಜ.


ನ್ಯಾಯಾಲಯದ ಮುಂದೆ ಜೆರೋಮ್ ಮತ್ತು ಮೋನಿಕಾ

ಆದರೆ ಮರಿಯಾಳ ವರ್ತನೆ ಈ ದುರಂತ ಅವಳಿಗೆ ಸಂಬಂಧಿಸಿದ್ದಲ್ಲ ಎನ್ನುವಂತಿರುವುದೇ ಆಶ್ಚರ್ಯಕರ.

ಅವಳು ಜೈಲಿನಿಂದ ಹೊರಟು ವಿಚಾರಣೆಗೆಂದು ಕೋರ್ಟಿಗೆ ಬರುತ್ತಿದ್ದಾಗ ಡಿಸೈನರ್ ಡ್ರೆಸ್ ಹಾಕದೆ ಹೊರಬರುತ್ತಿರಲಿಲ್ಲ, ಇನ್ನೇನು ತೀರ್ಪು ಬರುತ್ತಿದೆ ಎನ್ನುವ ದಿನವೂ ತನ್ನ ಮುಖ ಸೌಂದರ್ಯ, ಚರ್ಮದ ಹೊಳಪಿನ ಬಗ್ಗೆ ಯೋಚಿಸಿ ಚಿಕಿತ್ಸೆ ಪಡೆಯಲು ಹೋಗಿದ್ದಳು. ಜೈಲಿನಲ್ಲಿದ್ದಾಗಲೂ ಖುಷ್‌ಖುಷಿಯಾಗಿ ಓಡಾಡಿಕೊಂಡಿದ್ದಳು. ಒಂದು ಸಾರಿ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಗೆದ್ದೂ ಗೆದ್ದಿದ್ದಳು. ಜೈಲಿನದ್ದಾಗಲೂ ಇಂಡಿಯಾದ ಸ್ಥಳೀಯ ಮಹಿಳಾ ಕೈದಿಗಳೊಂದಿಗೆ ಸೇರದೆ ಮೆಕ್ಸಿಕೋದ ವಂಚಕಿ ಗುಯೆರೋ ಉಗೊ ಎಲ್‌ವಿಯಾ ಎಂಬುವಳೊಂದಿಗೆ ಮಾತ್ರ ಸ್ನೇಹ ಇಟ್ಟುಕೊಂಡಿದ್ದಳು. ಈ ಎಲ್‌ವಿಯಾ ಮುಂಬೈ ಜನರಿಗೆ 8 ಕೋಟಿ ರೂಪಾಯಿ ವಂಚಿಸಿ ಸಿಕ್ಕಿಬಿದ್ದು ಜೈಲುಪಾಲಾಗಿದ್ದಳು. ಇದರರ್ಥ ಇಷ್ಟೆ. ಜೈಲಿನಲ್ಲಿದ್ದಾಗಲೂ ಮರಿಯಾ **low profile criminal** ಮಹಿಳೆಯರೊಂದಿಗೆ ಸ್ನೇಹ ಬೆಳೆಸಲಿಲ್ಲ, ಬದಲಾಗಿ ವೈಯ್ಯಾರ-ವಂಚನೆಗಳ ಕಾಂಬಿನೇಷನ್ನಿನಂತಿದ್ದ ಎಲ್‌ವಿಯಾ ಅವಳಿಗೆ ಇಂಟರೆಸ್ಟಿಂಗ್‌ಆಗಿ ಕಂಡಿದ್ದಾಳೆ.


ರಂಗೋಲಿ ಸ್ಪರ್ಧೆಯಲ್ಲಿ....

ಮರಿಯಾ ವ್ಯಕ್ತಿತ್ವ ಏನೆಂಬುದಕ್ಕೆ ಇದೇ ಸಾಕ್ಷಿ.

## ಗ್ರೋವರ್ ಕೊಲೆ : ಪೊಲೀಸರ ನೆನಪುಗಳು

ಮುಂಬೈನ ಮಲಾಡ್ ಪೊಲೀಸರು ಮೊದಲು ಇದರ ತನಿಖೆ ನಡೆಸಿದವರು. 2008 ರ ಮೇ 7 ರ ಬೆಳಗ್ಗೆ ನೀರಜ್ ಗ್ರೋವರ್‌ನ ಕೊಲೆಯಾಯಿತು. ಅದೇ ದಿನ ಸಂಜೆಯ ಹೊತ್ತಿಗೆ ಸುಂದರಿ ಮೋನಿಕಾ ಮತ್ತವಳ ಮೊದಲನೇ ಪ್ರಿಯಕರ ಎಮಿಲಿ ಜೆರೋಮ್ ಚಕ್ಕಳಮಕ್ಕಳ ಕುಳಿತು ನೀರಜ್‌ನ ಮೃತದೇಹವನ್ನು ಕತ್ತರಿಸಿ ಮುನ್ನೂರು ತುಂಡು ಮಾಡಿಟ್ಟಿದ್ದರು. ಹಿಂದಿನ ರಾತ್ರಿಯಷ್ಟೇ ತನ್ನೊಂದಿಗೆ ಬೆಡ್‌ರೂಂನಲ್ಲಿ ಮಲಗಿದ್ದ ನೀರಜ್‌ನ ದೇಹವನ್ನು ಚೂರುಚೂರು ಮಾಡುತ್ತಾ ಕುಳಿತಿದ್ದಾಗ ಮೋನಿಕಾ ಅಲಿಯಾಸ್ ಮರಿಯಾ ಮೋನಿಕಾ ಸೂಸೈರಾಜ್‌ಳ ಮನಸ್ಥಿತಿ ಹೇಗಿತ್ತು? ಪೊಲೀಸರ ಪ್ರಕಾರ ಮೋನಿಕಾ ತಣ್ಣಗಿದ್ದಳು. ಅಥವಾ ತೀರಾ **panic** ಆಗಿರಲಿಲ್ಲ. ಮೇ 7ರ ಬೆಳ್ಳಂಬೆಳಗ್ಗೆ ತನ್ನ ಫ್ಲಾಟ್‌ಗೆ ಭಾವಿ ಗಂಡ ಎಮಿಲಿ ಜೆರೋಮ್ ನುಗ್ಗಿ ಬಂದಾಗ ಅವಳಿಗೊಂದಷ್ಟು ಗಾಬರಿಯಾಗಿತ್ತು, ಯಾಕೆಂದರೆ ಆಗ ಮೋನಿಕಾ ತುಂಡುಡುಗೆಯಲ್ಲಿದ್ದಳು. ಒಳಗೆ ಬೆಡ್‌ರೂಂನಲ್ಲಿ ಅವಳ ಟೆಂಪರರಿ ಲವರ್ ನೀರಜ್ ಪೂರಾ ಬೆತ್ತಲಾಗಿ ಇನ್ನೂ ಮಲಗಿದ್ದ. ಜೆರೋಮ್ ಇದನ್ನು ನೋಡಿ ಗ್ರೋವರ್‌ನಿಗೆ ಒದ್ದು ಬೀಳಿಸಿ ಕಿಚನ್‌ನಿಂದ ಚಾಕು ತಂದು ನೀರಜ್‌ನ ಕರುಳು ಬಗೆದು ಹಾಕಿಬಿಟ್ಟ. ಎರಡು ನಿಮಿಷಗಳ ಹೋರಾಟ ಅಷ್ಟೆ ಅದು.


ನಯನಾ ಕೃಷ್ಣ

ಆಮೇಲಾದದ್ದು ಕೇವಲ ಜನಸಾಮಾನ್ಯರನ್ನಷ್ಟೇ ಅಲ್ಲ, ಪೊಲೀಸರು, ಪತ್ರಕರ್ತರು, ಸೈಕಾಲಜಿಸ್ಟರ ಗಮನವನ್ನೂ ಸೆಳೆಯಿತು.

ಪಕ್ಕದಲ್ಲಿ ಗ್ರೋವರ್‌ನ ಹೆಣವಿದ್ದಾಗಲೇ ಮೋನಿಕಾ ಅಂಡ್ ಜೆರೋಮ್ ಎರಡು ಬಾರಿ ಸೆಕ್ಸ್ ನಡೆಸುತ್ತಾರೆ. ಅದಕ್ಕೆ ಕೇವಲ ಆರೆಂಟು ಗಂಟೆಗಳ ಮುನ್ನ ತಾನು ಯಾವನೊಂದಿಗೆ ಮಲಗಿದ್ದಳೋ ಅದೇ ನೀರಜ್ ಗ್ರೋವರ್‌ನನ್ನು ಕೊಂದ ಜೆರೋಮ್‌ನೊಂದಿಗೂ ಮೋನಿ ಮಲಗುತ್ತಾಳೆ.

ಇದರಲ್ಲಿ ಪ್ರಾಣಭೀತಿ ಇದ್ದಿರಬಹುದಾ-

ದಿಗ್ಭ್ರಾಂತಿಯಿಂದಾಗಿ ಹಾಗೆ ವರ್ತಿಸಿರಬಹುದು.

ಭರಿಸಲಾಗದ ಶಾಕ್‌ನಿಂದ ಹೊರಬರಲು ಜನ ತಕ್ಷಣ ಸೆಕ್ಸ್‌ನಲ್ಲಿ ತೊಡಗು ಬಗ್ಗೆ ಮನಶಾಸ್ತ್ರೀಯ ಉಲ್ಲೇಖಗಳೇನೋ ಇವೆ. ಆದರೆ ಈ ಮೋನಿಕಾ ತರದ ತರ್ಕಗಳಿಗೆ ಸಿಗುವ ಮಾಯಾಂಗನೆಯಲ್ಲ, ಅತಿಯಾದ ಆತ್ಮವಿಶ್ವಾ ತಾನು ಏನನ್ನು ಮಾಡಿದರೂ ದಕ್ಕಿಸಿಕೊಳ್ಳಬಲ್ಲೆನೆಂಬ ಮೂರ್ಖತನ ಅವಳಿಗಿತ್ತು

ಅವಳಲ್ಲಿದ್ದ ಹಣ, ಸೌಂದರ್ಯ, ಹೆಸರೇ ಇದಕ್ಕೆ ಪುಷ್ಟಿ ನೀಡಿದ್ದಿರಬೇಕು

ಮೇ 7ರ ಬೆಳಗ್ಗೆ ನೀರಜ್ ಕೊಲೆಯಾದ ನಂತರ ಅದೇ ದಿನ ರಾ ಗೆಳೆಯನೊಬ್ಬನ ಕಾರ್ ತಂದು ನೀರಜ್ ದೇಹದ ತುಂಡುಗಳಿದ್ದ ಚೀ ತುಂಬಿಕೊಂಡು ನಗರದಾಚೆಗೆ ಹೋಗಿ ಎಸೆದು ಪೆಟ್ರೋಲ್ ಸುರಿದು ಬೆಂ ಹಾಕಿ ಮನೆಗೆ ಬಂದ ಮೋನಿಕಾ ಅದರ ಮಾರನೆ ದಿನದಿಂದಲೇ ಸ ನೀರಜ್‌ಗಾಗಿ ಸ್ವತಃ ತಾನೇ ಮುಂದೆ ನಿಂತು ಹುಡುಕಾಡಲು ಶುರು ಮಾಡಿದ್ದಳು ಹತ್ತಿರದ ಮಲಾಡ್ ಪೊಲೀಸ್ ಸ್ಟೇಷನ್ನಿಗೆ ಹೋಗಿ 'ನೀರಜ್ ಮಿಸ್ಸಿಂಗ್' ಅಂತ ಒಂದು ಕಂಪ್ಲೇಂಟೂ ಕೊಟ್ಟುಬಂದಳು. ಠಾಣಾಧಿಕಾರಿ ಹೊಸಲೇಕರ್‌ ಮೊದಮೊದಲು ಕೊಂಚ ಗೊಂದಲವಾಯಿತು. ಆದರೆ ಕೇಸು ದೊಡ್ಡದಾ ಬಿಂಬಿತವಾದ ಕಾರಣ ಮುಂಬೈ ಕ್ರೈಂ ಬ್ರಾಂಚ್‌ನ 'ಯುನಿಟ್ 9' ಅಖಾಡಕ್ಕಿಳಿದರು. ಪೊಲೀಸ್ ಆಫೀಸರ್ ರಾವ್‌ರಾಣೆ ಮೋನಿಕಾಳ ಮೇ ಕಣ್ಣಿಟ್ಟರು. ವಿಚಾರಣೆಗೆಂದು ಬರಹೇಳಿ ಮೋನಿಕಾಳನ್ನು ಗಂಟೆಗಟ್ಟಲೆ ಕಾಯಿಸಲಾಗುತ್ತಿತ್ತು. ಪೊಲೀಸರು ಮೋನಿಕಾಳ ಮೇಲೆ ಥರ್ಡ್ ಡಿಗ್ ಪ್ರಯೋಗಿಸುವಂತಿರಲಿಲ್ಲ, ಏಕೆಂದರೆ ಮೀಡಿಯಾಗಳೂ ಈ ಕೇಸನ್ನು ಬೆನ್ನು ಹತ್ತಿದ್ದರಲ್ಲ, ಇಂತಹ ಘಟನೆಗಳಲ್ಲಿ ಪೊಲೀಸರು ಶಂಕಿತ ಆರೋಪಿಗಳ profile ಸ್ಟಡಿ ಮಾಡುತ್ತಾರೆ. ಇಲ್ಲೂ ಪೊಲೀಸರು ಅದನ್ನೇ ಮಾಡಿದರು. ಮೋನಿಕಾಳ ಪರಿಚಿತರು, ಕುಟುಂಬದವರು, ಕ್ಲಾಸ್‌ಮೇಟ್‌ಗಳು, ಗ್ಲಾಸ್‌ಮೇಟ್‌ಗಳು, ಮಾಜಿ ಬಾಯ್‌ಫ್ರೆಂಡ್‌ಗಳನ್ನು ಭೇಟಿಯಾಗಿ ಅವಳ ಹಿನ್ನೆಲೆ, ವ್ಯಕ್ತಿತ್ವ, ಮಹತ್ವಾಕಾಂಕ್ಷೆಗಳ ಬಗ್ಗೆ ತಿಳಿದುಕೊಂಡು 'ಓಹೋ... ಇವಳು ಹೀಗಿದ್ದಳಾ!' ಅಂತಂದು ಟಿಪ್ಪಣಿ ಮಾಡಿಕೊಂಡರು. ಮೋನಿಕಾ ತನಿಖಾ ಚೇಂಬರಿನೊಳಗೆ ಬಂದಾಗ ನಗುತಾ ಆರಾಮಾಗಿ ಹರಟೆ ಸೆಷನ್ ರೀತಿ ಮಾತಾಡಲು ಶುರು ಮಾಡಿದರು. 'ಈ ನೀರಜ್ ಅದೆಲ್ಲಿ ಹಾಳಾಗಿಹೋದನೋ ಏನೊ? ನಮಗೊಳ್ಳೆ ತಲೆನೋವಾದ ಅನ್ನುತ್ತಿದ್ದರು. ವಿಚಾರಣೆಯ ಸಮಯದಲ್ಲಿ ಮೋನಿಕಾಳಿಗೆ ಫೋನ್ ಬಂದರೆ ಮಾತಾಡಲು ಬಿಡುತ್ತಿದ್ದರು. ಅವಳೋ ತನ್ನದೇ ಮನೆಯಲ್ಲಿದ್ದಂತೆ, ಎಲ್ಲವೂ ಎಲ್ಲರೂ ತನ್ನ ಕಂಟ್ರೋಲಿನಲ್ಲಿಯೇ ಇದ್ದಾರೆಂಬಂತೆ ವರ್ತಿಸುತ್ತಿದ್ದಳು. ಮತ್ತು ಒಂದಲ್ಲಾ ಹತ್ತು ಬಾರಿ ಪೊಲೀಸರೆದುರು ಕುಳಿತಾಗಲೂ ನಿರುಮ್ಮಳವಾಗಿಯೇ ಇರುತ್ತಿದ್ದಳು. ಕೊನೆಗೆ ಪೊಲೀಸರೇ ಸುಸ್ತಾಗಿ ಮೋನಿಕಾಳ ತಂಗಿ ವೆರೋನಿಕಾಳನ್ನು ಕರೆಸಿ 'ನಮಗೆಲ್ಲಾ ಗೊತ್ತಾಗಿದೆ ನಿಜ ಏನಂತ ಹೇಳಲು ನಿಮ್ಮಕ್ಕನಿಗೆ ಹೇಳು' ಅಂದರು. ಆದರೆ ಮೋನಿಕಾ 'ನಿಜ ಆ ದೇವರಿಗೆ ಗೊತ್ತು' ಅಂದಳು ತಣ್ಣಗೆ. ತನಿಖೆಯ ಮಧ್ಯೆ ದೇವರ ಬಗ್ಗೆ ಮಾತನಾಡಿದಳು. ತಾನು ಓದಿದ ಸಸ್ಪೆನ್ಸ್ ಥ್ರಿಲ್ಲರ್ ಕಾದಂಬರಿಗಳ ಬಗ್ಗೆಯೂ ಮಾತನಾಡಿದಳು. ಅದರ ನಡುವೆ ಒಮ್ಮೆ ನೀರಜ್ ಗ್ರೋವರ್ ಕೊಲೆಯಾದ ಹಿಂದಿನ ದಿನ ರಾತ್ರಿ ನಿಷಾ ಎನ್ನುವ ಹುಡುಗಿ ಫೋನ್ ಮಾಡಿ ಕರೆಸಿಕೊಂಡಳೆಂದು ಸುಳ್ಳು ಹೇಳಿ ಸಿಕ್ಕಿಸಲು ನೋಡಿದ್ದಳು. ಈ ಮಧ್ಯೆ ನೀರಜ್ ತಂದೆ ಗಿಣಿಶಾಸ್ತ್ರ ಕೇಳಿಬಂದು 'ನನಗೆ ನಿಶಾಂತ್ ಲಾಲ್ ಬಗ್ಗೆ ಅನುಮಾನ' ಎಂದು ಹೇಳಿಕೆ ಕೊಟ್ಟ. ಈ ನಿಶಾಂತ್ ಎಂಬುವನೊಂದಿಗೆ ನೀರಜ್ ಜೊತೆ ಜಗಳವಾಗಿದ್ದೇ ಇದಕ್ಕೆ ಕಾರಣವಾಗಿತ್ತು, ಪೊಲೀಸರು ನಿಶಾಂತ್‌ನನ್ನು ಎಳೆತಂದು ವಿಚಾರಿಸಿದರಾದರೂ ನೀರಜ್ ಬಗ್ಗೆ ಸುಳಿವು ಸಿಗಲಿಲ್ಲ.

ಇನ್ನು ಈ ಕೇಸನ್ನು ಹಗುರವಾಗಿ ನೋಡಬಾರದೆಂದು ತನಿಖೆ ತೀವ್ರಗೊಳಿಸಿದಾಗ ಪೊಲೀಸರಿಗೆ ಹೊಸ ವಿಚಾರಗಳು ಗೊತ್ತಾಯಿತು. ಮೋನಿಕಾಳ ಫ್ಲಾಟ್ ಕಟ್ಟಡದ ವಾಚ್‌ಮೆನ್ ಎಮಿಲಿ ಜೆರೋಮ್ ಬಂದಿದ್ದ ಬಗ್ಗೆ ಹೇಳಿದ. ಮೋನಿಕಾಳ ಗೆಳೆಯ ತನ್ನ ಸ್ಯಾಂಟ್ರೋ ಕಾರ್ ಒಂದು ದಿನ ಕೊಟ್ಟಿದ್ದೆ ಅಂದ.

ಪಕ್ಕದ ಅಂಗಡಿಯವನೊಬ್ಬ ಮೋನಿಕಾ ಒಂದು ಚೂರಿ ಹಾಗೂ ಎರಡು ದೊಡ್ಡ ಬ್ಯಾಗ್ ಖರೀದಿಸಿ ಹೋದ ಸಂಗತಿ ಹೇಳಿದ. ಈ ನಡುವೆ ಮೋನಿಕಾಳ ಕೈಗಾಗಿದ್ದ ಗಾಯ ಏನೆಂದು ಕೇಳಿದರೆ ತರಕಾರಿ ಕಟ್ ಮಾಡುವಾಗ ಆಗಿದೆಂದಿದ್ದಳು. ಮೈ ಗಾಯ ಯಾಕೆಂದಾಗ ಅದು `**love bite**' ಅಂತ ಉಲಿದಿದ್ದಳು.

ಆದರೆ ಯಾವ ನಾಟಕವೂ ಹೆಚ್ಚು ನಡೆಯಲಿಲ್ಲ. ಪೊಲೀಸರ ಪ್ರಶ್ನೆಗಳು ಹತ್ತೂ ದಿಕ್ಕಿನಿಂದ ಬಾಣದಂತೆ ಬರತೊಡಗಿದಾಗ ಮೋನಿಕಾಳ ಕಣ್ಣಾಮುಚ್ಚಾಲೆಗೆ ತೆರೆಬಿತ್ತು.

'ನನ್ನ ಇಡೀ ಸರ್ವೀಸ್‌ನಲ್ಲಿ ನಾನು ಇಂತಹ ಕೊಲೆ ನೋಡಿರಲಿಲ್ಲ' ಅಂದರು ಆಗಿನ ಮುಂಬೈ ಪೊಲೀಸ್ ಕಮೀಷನರ್ ಮಾರಿಯಾ. ಇತ್ತ ಮೋನಿಕಾ ಕೊಲೆ ಆರೋಪವನ್ನು ತನ್ನ ಗಂಡನಾಗಬೇಕಿದ್ದ ಎಮಿಲಿ ಜೆರೋಮ್ ಮೇಲೆ ಹೊರಿಸಿ ತಣ್ಣಗೆ ತನ್ನ ರಕ್ಷಣೆಗೆ ಗಮನ ಕೊಟ್ಟಳು. ಪೊಲೀಸರು ನೀರಜ್ ಗ್ರೋವರ್ ಕೊಲೆ ಕೇಸನ್ನು ಭೇದಿಸಿದರಾದರೂ ಮರಿಯಾ ಮೋನಿಕಾಳನ್ನು ಹೆಚ್ಚುಕಾಲ ಜೈಲಿನಲ್ಲಿರಿಸಲು ಅಸಾಧ್ಯವಾಯಿತು.

ಇಲ್ಲೊಂದು ಹೋಲಿಕೆ ನೋಡಿ ಬೆಂಗಳೂರಿನ ಸ್ಯಾಂಕಿ ರಸ್ತೆಯ ಎರಡೂ ಬದಿಯಿದ್ದ ಮರಗಳನ್ನು ಕತ್ತರಿಸಬೇಡಿರೆಂದು ಪ್ರತಿಭಟಿಸಿದ ಜನರನ್ನು ಪೊಲೀಸರು ಹಿಡಿದು ಲಾಕಪ್‌ನಲ್ಲಿಟ್ಟರು. ಆದರೆ ಮನುಷ್ಯನನ್ನೇ ಕತ್ತರಿಸಿ ಕೊಂದ ಮರಿಯಾ...

ಈ ಕೊಲೆಪಾತಕಿ ಈಗ ಸ್ವತಂತ್ರ ಹಕ್ಕಿ.




# ಗದಗ ಕೋಟಿ ಕೊಟ್ಟರೂ ಒಂದಿಂಚು ಭೂಮಿ ಕೊಡಲ್ಲಾ...

ಹಸಿರು ಶಾಲು ಹೊದ್ದು ಗದ್ದುಗೆ ಏರಿದ ಯಡ್ಡಿಯ ಅಸಲಿ ಬಣ್ಣ ಈಗ ಬೆತ್ತಲಾಗುತ್ತಿದೆ. ಬಂಡವಾಳಶಾಹಿಗಳೆದುರು ಜೋಳಿಗೆ ಹಿಡಿದಿರುವ ಮೂರ್ಖ ಮುಖ್ಯಮಂತ್ರಿ ಯಡ್ಡಿ ಸಾವಿರಾರು ಎಕರೆ ಫಲವತ್ತಾದ ಭೂಮಿಯನ್ನು ಕಬಳಿಸಲು ಮುಂದಾಗಿದ್ದಾರೆ. ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಸುಂದರ ರಮಣೀಯ ಪ್ರದೇಶವಾದ ಕಪ್ಪತಗುಡ್ಡಕ್ಕೆ ಹೊಂದಿಕೊಂಡಂತಿರುವ ಹಳ್ಳಿಗುಡಿ ಎಂಬ ಪುಟ್ಟ ಗ್ರಾಮದ ರೈತರ ಶೇ 90 ರಷ್ಟು ಜಮೀನನ್ನು ಉಳ್ಳವರ ಪಾಲಾಗಿಸುವ ಸರ್ಕಾರದ ಸಂಚು ಈಗ ಬಯಲಾಗಿದೆ. ಸಿಂಗಟಾಲೂರು ಏತ ನೀರಾವರಿಯ ಯೋಜನೆಯಿಂದ ನೀರಾವರಿಯ ಲಾಭ ಪಡೆದು ಈಗ ಕೋಟಿ ಬೆಲೆಬಾಳುವ ಫಲವತ್ತಾದ ಸಾವಿರಾರು ಎಕರೆ ಜಮೀನನ್ನು ಪೋಸ್ಕೊ ಸ್ಟೀಲ್ ಇಂಡಿಯಾ ಪ್ರೈ.ಲಿ. ಎಂಬ ಕಂಪನಿಗೆ ಕೊಡಲು ಹೊರಟಿರುವ ಸರ್ಕಾರದ ಈ ಕ್ರಮದ ವಿರುದ್ಧ ಸಿಡಿದೆದ್ದಿರುವ ಇಲ್ಲಿಯ ನೂರಾರು ರೈತರು ಕೋಟಿ ಕೊಟ್ಟರೂ ಒಂದಿಂಚು ಭೂಮಿ ನೀಡಲ್ಲ ಎಂದು ಯಡ್ಡಿಗೆ ಎಚ್ಚರಿಸಿದ್ದಾರೆ. ಭಂಡ ಯಡ್ಡಿಗೆ ಪಾಠ ಕಲಿಸಲು ರೈತರೊಂದಿಗೆ ಹತ್ತಾರು ಪ್ರಗತಿಪರ ಸಂಘಟನೆಗಳು ಆಖಾಡಕ್ಕಿಳಿದಿವೆ.

## ರೈತರ ನಿದ್ದೆಗೆಡಿಸಿದ ಪೋಸ್ಕೊ

ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆ ಎಂಬ ನಾಟಕ ನಾಡಿನ ಅನ್ನದಾತನ ನೆಮ್ಮದಿಗೆ ಕೊಳ್ಳಿಯಿಟ್ಟಿದೆ. ಇದಕ್ಕೆ ಹಳ್ಳಿಗುಡಿ ಗ್ರಾಮ ಕೂಡ ಹೊರತಾಗಿಲ್ಲ. ರೈತರ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದ ಚಿಡ್ಡಿಗಳ ಬತ್ತಳಿಕೆಯಲ್ಲಿನ ಒಂದೊಂದೇ ಜನಕಂಟಕ ಅಸ್ತ್ರಗಳಿಗೆ ಇಡೀ ರೈತಸಮುದಾಯ ಕಂಗಾಲಾಗಿದೆ.

"ಇಡೀ ಊರಿಗೇ ವಿಷ ಹಾಕಬಿಡಲಿ. ನಾವೆಲ್ಲಾ ಸತ್ತ ನಂತರ ನಮ್ಮಲ್ಲರ ಹೆಣಗಳ ರಾಶಿ ಮೇಲೆ ಫ್ಯಾಕ್ಟರಿ ಕಟ್ಟರಿ ಯಡಿಯೂರಪ್ಪನವರೆ. ಐದು ವರ್ಷದ ಕುರ್ಚಿಗೆ ದ್ಯಾವರ ಮೇಲೆ ಆಣೆ ಮಾಡ್ತೀರಿ. ಅದೆಷ್ಟೋ ತಲೆಮಾರಿನಿಂದ ನಮಗೆಲ್ಲಾ ಅನ್ನ ಹಾಕಿರೋ ನಮ್ಮ ಭೂಮಿಯನ್ನು ಹ್ಯಾಂಗ ಬಿಡ್ತೀವಿ. ಭೂಮಿ ಕೇಳಕೆ ಊರಿಗ್ಗರ ಕಾಲಿಡಿರಿ ಆವಾಗ ಹೇಳ್ತೇವಿ ನಾವ್ಯಾರು ಅಂತ." ಹೀಗೆ ಹಳ್ಳಿಗುಡಿ ಗ್ರಾಮದ ರೈತರು ಆಕ್ರೋಶದಿಂದ ಚಿಡ್ಡಿ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸುತ್ತಾರೆ.



ಒಂದು ತಿಂಗಳಿನ ಹಿಂದೆ ಈ ಭಾಗದಲ್ಲಿ ಮೂರು ಕೈಗಾರಿಕೆಗಳ ಸ್ಥಾಪನೆಗಾಗಿ "ನಿಮ್ಮ ಭೂಮಿಯನ್ನೇಕೆ ಸ್ವಾಧೀನಪಡಿಸಿಕೊಳ್ಳಬಾರದು" ಎಂದು ಕೆ.ಐ.ಎ.ಡಿ.ಬಿ. ನೋಟಿಸು ನೀಡಿದಾಗಿನಿಂದ ಇಡೀ ಗ್ರಾಮ ಆತಂಕಕ್ಕೊಳಗಾಗಿದೆ. ತಮ್ಮ ಪೂರ್ವಜರ ಈ ಭೂಮಿಯಲ್ಲಿ ಬದುಕು ರೂಪಿಸಿಕೊಂಡಿರುವ 353 ಕುಟುಂಬಗಳು ಬೀದಿಗೆ ಬೀಳುವ ಸ್ಥಿತಿಯಲ್ಲಿವೆ.


ಗದಗ ಜಿಲ್ಲೆಯ ಗಡಿ ಗ್ರಾಮವಾದ ಹಳ್ಳಿಗುಡಿ ಗದಗ-ಹೊಸಪೇಟೆ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದೆ. ಇಲ್ಲಿಯ ಜನರು ಕೃಷಿಯಿಂದಲೇ ಬದುಕು ರೂಪಿಸಿಕೊಂಡಿದ್ದಾರೆ. ಗ್ರಾಮದಲ್ಲಿ 1235 ಕೃಷಿ ಖಾತೆಗಳಿದ್ದು ಸುಮಾರು ಎಂಟು ಸಾವಿರ ಎಕರೆ ಸಾಗುವಳಿ ಕೃಷಿ ಭೂಮಿಯಿದೆ. ಅದರಲ್ಲೀಗ ಕೆ.ಐ.ಎ.ಡಿ.ಬಿ. 7182 ಎಕರೆ ಭೂಸ್ವಾಧೀನಕ್ಕೆ ಸಿದ್ಧತೆ ನಡೆಸಿದೆ. ಈ ಪ್ರಕ್ರಿಯೆ ಫಲಿಸಿದ್ದೇ ಆದರೆ, ಗ್ರಾಮದ 90%ರಷ್ಟು ಭೂಮಿ ಫ್ಯಾಕ್ಟರಿ ಪಾಲಾಗಲಿದೆ. ಹೀಗಾದರೆ ರೈತರ ಗತಿಯೇನು?

## ಕೈಗಾರಿಕೆಗೆ ಕೃಷಿ ಭೂಮಿಯೇ ಬೇಕಾ?

ಸುಮಾರು 400 ಕೋಟಿ ರೂಪಾಯಿ ಹಾಕಿ ಸಿಂಗಟಾಲೂರು ಏತ ನೀರಾವರಿ ಯೋಜನೆ ಅನುಷ್ಠಾನ ಮಾಡುತ್ತಿರುವ ರಾಜ್ಯ ಸರ್ಕಾರ ಈಗ ಅದೇ ಯೋಜನೆಯ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ 7182 ಎಕರೆ ಫಲವತ್ತಾದ ನೀರಾವರಿ ಭೂಮಿಯನ್ನು ಕೈಗಾರಿಕೆಗಾಗಿ ಸ್ವಾಧೀನಪಡಿಸಿಕೊಳ್ಳುತ್ತಿರುವುದು ನಾಡಿನ ಆಹಾರ ಭದ್ರತೆಯ ಮೇಲೆ ತೀವ್ರ ಪರಿಣಾಮವನ್ನುಂಟುಮಾಡುವ ಮುನ್ಸೂಚನೆಯಾಗಿದೆ.

ಕಳೆದ ತಿಂಗಳಷ್ಟೇ ಜಲಸಂಪನ್ಮೂಲ ಮಂತ್ರಿ ಬಸವರಾಜ ಬೊಮ್ಮಾಯಿ ಈ ಪ್ರದೇಶಕ್ಕೆ ಭೇಟಿಕೊಟ್ಟು ಮುಂದಿನ ಮುಂಗಾರಿನ ವೇಳೆಗೆ ಈ ಭಾಗದ ರೈತರ ಭೂಮಿಗೆ ನೀರು ಹರಿಸುತ್ತೇವೆ ಎಂದು ಮೂರು ತಾಸಿನ ಸಿನಿಮಾ ತೋರಿಸಿ ಹೋಗಿದ್ದ. ಇದನ್ನೇ ನಂಬಿದ್ದ ಇಲ್ಲಿಯ ರೈತರು ಹೊಸ ಕನಸು ಕಾಣುತ್ತಿರುವಾಗಲೇ ಕೆ.ಐ.ಎ.ಡಿ.ಬಿ. ಮೂಲಕ ಖಾಸಗಿ ಕೈಗಾರಿಕೆಗೆ ಭೂಸ್ವಾಧೀನ ನೋಟಿಸು ನೀಡಿರುವುದು ಅನ್ನದಾತನ ಆಕ್ರೋಶ ಭುಗಿಲೇಳು ವಂತೆ ಮಾಡಿದೆ.

ಇನ್ನೊಂದು ವಿಚಿತ್ರವೆಂದರೆ, 2007ರಲ್ಲಿ ಈ ಭೂಮಿಯನ್ನ ಯಾವುದೇ ಕಾರಣಕ್ಕೂ ಕೃಷಿಯೇತರ ಚಟುವಟಿಕೆಗಳಿಗೆ ಬಳಸಬಾರದು ಎಂದು ರಾಜ್ಯ ಸರ್ಕಾರ ಕಟ್ಟಾಜ್ಞೆ ಹೊರಡಿಸಿತ್ತು. ಪೋಸ್ಕೊ ಇಂಡಿಯಾ ಪ್ರೈ.ಲಿ., ಎಸ್.ಆರ್. ಗ್ರೂಪ್ ಮತ್ತು ಆಧುನಿಕ್ ಮೆಟಾಲಿಕ್ ಕಂಪನಿಗಳಿಗೆ ಸರ್ಕಾರವೇ ಭೂಮಿ ನೀಡಲು ಮುಂದಾಗಿರುವುದು ವ್ಯವಸ್ಥೆಯ ದ್ವಂದ್ವ ನಿಲುವನ್ನು ಪ್ರದರ್ಶಿಸುತ್ತದೆ.




ಸಿ.ಸಿ. ಪಾಟೀಲ

ಇಲ್ಲಿಯ ಕೃಷಿ ಭೂಮಿಯಲ್ಲಿ ರೈತರು ಪ್ರತಿವರ್ಷ ಎರಡು ಬೆಳೆಗಳನ್ನು ಯಾವ ಆತಂಕವಿಲ್ಲದೆ ಬೆಳೆಯುತ್ತಾರೆ. ಅಷ್ಟೊಂದು ಅನುಕೂಲಕರ ಹವಾಗುಣ ಇಲ್ಲಿಯದಾಗಿದೆ. ಎರಿ (ಕಪ್ಪು) ಮಣ್ಣಿನ ಗುಣ ಹೊಂದಿರುವ ಇಲ್ಲಿಯ ಫಲವತ್ತಾದ ಭೂಮಿಯಲ್ಲಿ ಶೇಂಗಾ, ಜೋಳ, ಹೆಸರು, ಕಡಲೆ, ಮೆಣಸಿನಕಾಯಿ, ಹತ್ತಿ ಸೂರ್ಯಕಾಂತಿ, ಈರುಳ್ಳಿಯಂತಹ ಪ್ರಮುಖ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಹೀಗಿರುವಾಗ ಕೈಗಾರಿಕೆ ಸ್ಥಾಪನೆಗೆ ಫಲವತ್ತಾದ ಭೂಮಿಯೇ ಬೇಕೇ? ಗದಗ ಜಿಲ್ಲೆಯಲ್ಲಿ ಸಾವಿರಾರು ಎಕರೆ ಪಾಳುಬಿದ್ದಿರುವ ಬಂಜರು ಭೂಮಿಯಲ್ಲಿ ಏಕೆ ಕೈಗಾರಿಕೆ ಸ್ಥಾಪಿಸಲು ಸರ್ಕಾರ ಮುಂದಾಗುತ್ತಿಲ್ಲ ಎಂಬ ಪ್ರಶ್ನೆ ಇಲ್ಲಿಯ ರೈತರದಾಗಿದೆ.



## ಹಳ್ಳಿಗುಡಿ ಭೂಮಿ ಏಕೆ?

ಸಿಂಗಟಾಲೂರು ಏತ ನೀರಾವರಿಯ ಅಚ್ಚುಕಟ್ಟು ಪ್ರದೇಶವಾಗಿರುವ ಹಳ್ಳಿಗುಡಿ ಮತ್ತು ಅದರ ಸುತ್ತಮುತ್ತಲಿನ ಭಾಗ ಬಂಪರ್ ಬೆಳೆ ತರುವ ಬಂಗಾರದ ಭೂಮಿ. ಹೀಗಾಗಿ ಇಲ್ಲಿ ಕೈಗಾರಿಕೆ ಸ್ಥಾಪನೆ ಬೇಡ ಎಂದು ರೈತರು ಸೇರಿದಂತೆ ಪ್ರಗತಿಪರ ಚಿಂತಕರು ಮತ್ತು ಧಾರ್ಮಿಕ ಮುಖಂಡರು ವಿರೋಧ ವ್ಯಕ್ತ ಪಡಿಸಿದರೂ, ಸರ್ಕಾರ ಪೋಸ್ಕೊ ಸೇರಿದಂತೆ ಇನ್ನೆರಡು ದೈತ್ಯ ಖಾಸಗಿ ಕೈಗಾರಿಕೋದ್ಯಮಿಗಳಿಗೆ ಭೂಮಿ ನೀಡುತ್ತಿರುವುದರಲ್ಲಿ ದೊಡ್ಡ ಮಟ್ಟದ ವಂಚನೆಯಿರುವುದಂತೂ ಸತ್ಯ. ಯಾಕೆಂದರೆ, ಕೈಗಾರಿಕೆ ಸ್ಥಾಪನೆಗೆ ಹಳ್ಳಿಗುಡಿ ಮತ್ತದರ ಸುತ್ತಲಿನ ಗ್ರಾಮ ಹೇಳಿಮಾಡಿಸಿದ ಜಾಗವಾಗಿದೆ. ಪೋಸ್ಕೊ ಸ್ಟೀಲ್ ಮತ್ತು ಉಕ್ಕು ತಯಾರಿಸುವ ಕಾರ್ಖಾನೆಯಾಗಿದ್ದು ಅದಕ್ಕೆ ಹತ್ತಿರದಲ್ಲೇ ಕಪ್ಪತಗುಡ್ಡವಿದೆ. ಇಲ್ಲಿ ಸ್ಟೀಲ್ ಫ್ಯಾಕ್ಟರಿಗೆ ಅವಶ್ಯಕವಾದ ಕಬ್ಬಿಣದ ಅದಿರು ಹೇರಳವಾಗಿ ಸಿಗುತ್ತದೆ. ಇದರ ಮೇಲೆ ಕಣ್ಣು ಹಾಕಿರುವ ಪೋಸ್ಕೊ ಕಂಪನಿಯು ರೈತರ ಬೇಡಿಕೆಗಿಂತ ದುಪ್ಪಟ್ಟು ಹಣ ಕೊಟ್ಟು ಜಮೀನು ಕಬಳಿಸಲು ಸಜ್ಜಾಗಿ ನಿಂತಿದೆ. ಅಲ್ಲದೆ, ಕಾರ್ಖಾನೆಗೆ ಅವಶ್ಯಕವಿರುವ ವಿದ್ಯುತ್ತನ್ನು ಇಲ್ಲಿ ಸುಲಭವಾಗಿ ಉತ್ಪಾದಿಸಲು ಅವಕಾಶವಿದೆ. ಇಲ್ಲಿ ಬೀಸುವ ಗಾಳಿಯ ವೇಗ ಪ್ರತಿ ಸೆಕೆಂಡಿಗೆ 6.2 ನಿಂದ 7 ಮೀ ವರೆಗೆ ಇರುವುದರಿಂದ ಕಾರ್ಖಾನೆಗೆ ಬೇಕಾದ ವಿದ್ಯುತ್ತನ್ನು ಗಾಳಿಯ ವೇಗದ ಮೂಲಕ ಪಡೆಯಬಹುದಾಗಿದೆ. ಅಲ್ಲದೆ, ಮೈನಿಂಗ್ ದಂಧೆಯ ಕೇಂದ್ರ ಸ್ಥಾನವಾಗಿರುವ ಬಳ್ಳಾರಿಯಿಂದ ಅದಿರನ್ನು ತರಲು ರಾಷ್ಟ್ರೀಯ ಹೆದ್ದಾರಿ ಕೂಡ ಈ ಜಮೀನಿನ ಪಕ್ಕದಲ್ಲೇ ಹಾದುಹೋಗಿದೆ. ಈಗಿರುವ ದ್ವಿಪಥದ ರಾಷ್ಟ್ರೀಯ ಹೆದ್ದಾರಿ ಬರುವ ವರ್ಷದಿಂದ ಚತುಷ್ಪಥ ರಸ್ತೆಯಾಗಲಿದೆ. ಕಾರ್ಖಾನೆಗೆ ಅವಶ್ಯವಿರುವ ನೀರು ಕೂಡ ಇವರಿಗೆ ಪಕ್ಕದಲ್ಲೇ ಹರಿಯುವ ತುಂಗಭದ್ರಾ ನದಿಯ ಮೂಲಕ ದೊರೆಯಲಿದೆ. ಇಷ್ಟೆಲ್ಲಾ ಅನುಕೂಲವಿರುವ ಜಾಗೆ ಇದಾಗಿರುವುದರಿಂದ ಪೋಸ್ಕೊ ಸೇರಿದಂತೆ ಇನ್ನೆರಡು ಖಾಸಗಿ ಕಂಪನಿಗಳು ಹಳ್ಳಿಗುಡಿಯಲ್ಲಿ ಫ್ಯಾಕ್ಟರಿ ಸ್ಥಾಪನೆಗೆ ಯಡ್ಡಿಗೆ ಸುಪಾರಿ ಕೊಡುವುದರ ಮೂಲಕ ಸ್ಕೆಚ್ ಹಾಕಿ ನಿಂತಿವೆ.




ಮುರುಗೇಶ ನಿರಾಣಿ

## ಯಾರಿಗೆ ಎಷ್ಟು ಜಾಗ...

ಹಳ್ಳಿಗುಡಿ ಗ್ರಾಮದ ಸುತ್ತಲಿರುವ ಸುಮಾರು ಎಂಟು ಸಾವಿರ ಎಕರೆ ಭೂಪ್ರದೇಶದಲ್ಲಿ 7182 ಎಕರೆ ಭೂಮಿ ಪಡೆಯಲು ಸ್ಕೆಚ್ ಹಾಕಿರುವ ಮೂರು ಕಂಪನಿಗಳ ಕಡೆಯಿಂದ ಕೇಳಿದಷ್ಟು ಜಾಗ ಕೊಡಲು ಕೈಗಾರಿಕಾ ಮಂತ್ರಿ ನಿರಾಣಿ ಸೇರಿದಂತೆ ಜಿಲ್ಲಾ ಮಂತ್ರಿ ಸಿ.ಸಿ.ಪಾಟೀಲ, ಕೆ.ಐ.ಎ.ಡಿ.ಬಿ. ವಿಶೇಷ ಅಧಿಕಾರಿ ಮಹಾಂತೇಶ ಬೀಳಗಿಗೆ ಈಗಾಗಲೇ ಪೇಮೆಂಟ್ ಆದಂತಿದೆ. ಅಂತೆಯೇ ಅರೆ ಹುಚ್ಚನಂತೆ ಆಡುತ್ತಿರುವ ಬೀಳಗಿ ಜಿಲ್ಲಾ ಕೇಂದ್ರ ಗದಗಿನಲ್ಲಿ ಕುಳಿತೇ ಕಾರುಬಾರು ಶುರುಹಚ್ಚಿದ್ದಾನೆ. ಗ್ರಾಮಸೇವಕರ ಮೂಲಕ ನೋಟಿಸು ಕಳಿಸಿ ರೈತರಲ್ಲೇ ಎರಡು ಗುಂಪು ಮಾಡಿ ಒಡೆದಾಳುವ ತಂತ್ರ ಶುರುಹಚ್ಚಿಕೊಂಡಿದ್ದಾನೆ.

ಉಕ್ಕು ಉತ್ಪಾದನೆಯಲ್ಲಿ ಜಾಗತಿಕ ದೈತ್ಯ ಎನಿಸಿರುವ ದಕ್ಷಿಣ ಕೊರಿಯಾ ಮೂಲದ ಪೋಸ್ಕೊ ಇಂಡಿಯಾ ಪ್ರೈ.ಲಿ. ಗೆ 3382 ಎಕರೆ, ಆಧುನಿಕ್ ಮೆಟಾಲಿಕ್‌ಗೆ 800 ಎಕರೆ ಹಾಗೂ ಹರ್ಲಾಪುರ ಗ್ರಾಮದ ಬಳಿ ಎಸ್.ಆರ್. ಗ್ರೂಪ್‌ಗೆ 3000 ಎಕರೆ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲು ಕೆ.ಐ.ಎ.ಡಿ.ಬಿ. ತನ್ನ ಡಿಸ್ಟ್ರಿಕ್ಟ್ ಲ್ಯಾಂಡ್ ಬ್ಯಾಂಕ್ ಯೋಜನೆಯಡಿ 536 ರೈತರಿಗೆ ಎರಡನೇ ನೋಟಿಸು ಜಾರಿಮಾಡಿದೆ.

ಈಗಾಗಲೇ 5685.27 ಎಕರೆ ಭೂಮಿ ಮೇಲೆ ಪ್ರಾಥಮಿಕ ಅಧಿಸೂಚನೆ ಕೂಡ ಹೊರಡಿಸಲಾಗಿದೆ. ಶಿರೂರ ಹದ್ದಿನ ಜಂತಲಿ, ಶಿರೂರ, ಗದಗ ತಾಲೂಕಿನ ಹರ್ಲಾಪುರ, ಲಕ್ಕುಂಡಿ ಸೇರಿದಂತೆ ಒಟ್ಟು 1570 ಎಕರೆ ಭೂಮಿ ಇಲ್ಲಿಯದಾದರೆ, ಹಳ್ಳಿಗುಡಿ ಹದ್ದಿನಲ್ಲಿ 300 ಕುಟುಂಬಗಳ 3382 ಎಕರೆ ಭೂಮಿ, ಮೇವುಂಡಿ ಹದ್ದಿನ ಬರದೂರು, ಮೇವುಂಡಿ ಗ್ರಾಮಗಳ 733 ಎಕರೆ ಪ್ರದೇಶ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಡುತ್ತಿದೆ. ಈ ಭಾಗದ ರೈತರನ್ನು ವಿಚಾರಿಸದೆ, ತನ್ನದೇ ಸ್ವಂತ ಜಮೀನನ್ನು ಮಾರಾಟಕ್ಕೆ ಹಚ್ಚಿದ ಹಾಗೆ ಯಾರು ಏನೇ ಮಾಡಿದರೂ ಭೂಮಿ ಮಾತ್ರ ಖಾಸಗಿ ಕಂಪನಿಯವರಿಗೆ ಮಾರಿಸಿಯೇ ತೀರುತ್ತೇನೆ ಎಂದು ಬೀಳಗಿ ದಲ್ಲಾಳಿಗಳಂತೆ ಮೀಡಿಯಾಗಳ ಮುಂದೆ ಹೇಳಿಕೆ ನೀಡುತ್ತಿದ್ದಾನೆ. ಅಲ್ಲದೆ, ಪ್ರತಿ ಎಕರೆಗೆ 25 ಲಕ್ಷ ಹಣ ಹಾಗೂ ಕುಟುಂಬದಲ್ಲೊಬ್ಬರಿಗೆ ಕಂಪನಿಯಲ್ಲಿ ನೌಕರಿ ಕೊಡಿಸುವ ಭರವಸೆ ನೀಡುತ್ತಿದ್ದಾನೆ.



## ನಿಯಮ ಮೀರಿದ ಕೆ.ಐ.ಎ.ಡಿ.ಬಿ

ಸದ್ಯ ಮುಂಡರಗಿ ತಾಲೂಕಿನ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಕೆ.ಐ.ಎ.ಡಿ.ಬಿ. ಎಲ್ಲಾ ನಿಯಮಗಳನ್ನ ಗಾಳಿಗೆ ತೂರಿ ತನ್ನ ಅಂಧಾದರ್ಬಾರ್ ನಡೆಸುತ್ತಿದೆ. ರೈತರಿಗೆ ನೋಟಿಸು ನೀಡುವುದರಿಂದ ಹಿಡಿದು ಇಲ್ಲಿಯವರೆಗೆ ಈ ಎಲ್ಲ ಗ್ರಾಮಗಳಲ್ಲಿ ಕೆ.ಐ.ಎ.ಡಿ.ಬಿ. ನಡೆಸಿರುವುದೆಲ್ಲಾ ಕಾನೂನುಬಾಹಿರ. ಕೈಗಾರಿಕೆ ಸ್ಥಾಪನೆಗೆ ತೋಟಗಳು, ಫಲವತ್ತಾದ ಜಮೀನು ಹಾಗೂ ವರ್ಷಕ್ಕೆ ಎರಡು ಬೆಳೆಗಳನ್ನು ಬೆಳೆಯುವ ಭೂಮಿ ಸೇರಿದಂತೆ ತರೀ ಜಮೀನನ್ನು ವಶಪಡಿಸಿಕೊಳ್ಳಬಾರದು. ಅಲ್ಲದೆ, ಗ್ರಾಮದ ಸರಹದ್ದಿನ ಸುತ್ತಲೂ 100 ಮೀ. ಜಮೀನುಗಳನ್ನು ಪಡೆಯಲು ಅವಕಾಶವಿಲ್ಲ. ಇನ್ನೊಂದು ಅಂಶವೆಂದರೆ, ಪ್ರಾಥಮಿಕ ಅಧಿಸೂಚನೆಯನ್ನು ತಯಾರಿಸುವ ಮೊದಲು ಭೂಮಾಪಕರಿಂದ ಸರ್ವೇ ನಂ.ನಂತೆ ಅಳತೆ ಮಾಡಿಸಿ ಜಂಟಿ ಅಳತೆ ಕಾರ್ಯವನ್ನು ನಿರ್ವಹಿಸಿದ ನಂತರವೇ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಬೇಕು. ಸ್ಥಳೀಯ ಯೋಜನಾ ಆಯಕಟ್ಟಿಗೆ ಧಕ್ಕೆಯಾಗುವ ಜಮೀನುಗಳನ್ನು ಕೈಬಿಡಬೇಕು. ಪೆಟ್ರೋಲ್ ಬಂಕು, ಆಸ್ಪತ್ರೆ ಸೇರಿದಂತೆ ಇನ್ನಿತರೆ ಮೂಲಭೂತ ಸೌಲಭ್ಯಗಳ ಪ್ರದೇಶಗಳನ್ನು ಹೊರತುಪಡಿಸಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂದು ಕೆ.ಐ.ಎ.ಡಿ.ಬಿ. 28(4)ನೇ ಕಲಂ ತಿಳಿಸುತ್ತದೆ. ಆದರೆ, ಇಲಾಖೆಯ ಕಾಯ್ದೆಗಳನ್ನೇ ಗಾಳಿಗೆ ತೂರಿರುವ ಚಿಡ್ಡಿ ಸರ್ಕಾರದ ಭ್ರಷ್ಟ ಅಧಿಕಾರಿಗಳು ಇಲ್ಲಿಯ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವುದು ವಂಚನೆಯಲ್ಲದೇ ಮತ್ತೇನು?

## ಪೋಸ್ಕೊ ಕಂಪನಿಯನ್ನೇ ಖರೀದಿಸ್ತೀವಿ


"ಒಂದು ವರ್ಷ ಸರಿಯಾಗಿ ಬೆಳೆದರೆ ನಾಲ್ಕು ವರ್ಷ ಕೂತ್ಕೊಂಡು ಊಟ ಮಾಡುವಂತಹ ಫಲವತ್ತಾದ ಜಮೀನು ನಮ್ಮದು. ಪ್ರತಿವರ್ಷ ಕಾಲಕಾಲಕ್ಕೆ ಮಳೆ ಬಂದರೆ, ನಮ್ಮೂರ್ನೋರೆಲ್ಲಾ ಸೇರಿ ಪೋಸ್ಕೊ ಕಂಪನಿ ಖರೀದಿ ಮಾಡುವಷ್ಟು ಬೆಳೆ ತೆಗೀತೀವಿ. ಮುಖ್ಯಮಂತ್ರಿ ಯಡಿಯೂರಪ್ಪನವರೇ ಕಂಪನಿಯವರನ್ನ ಕೇಳಿ 'ಮಾರಲು ತಯಾರಿದ್ದಾರಾ ಅಂತ..'" ಈ ರೀತಿ ಆಕ್ರೋಶದ ಮಾತುಗಳನ್ನಾಡಿದ ಭೂಮಿ ಕಳೆದುಕೊಳ್ಳುವ ಭೀತಿಯಲ್ಲಿರುವ ರೈತರು ಮುಂಡರಗಿಯ ಡಾ. ಅನ್ನದಾನೇಶ್ವರ ಸ್ವಾಮಿಗಳು, ಗದುಗಿನ ಡಾ. ಸಿದ್ದಲಿಂಗ ಸ್ವಾಮಿಗಳು ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಹೆಚ್.ಕೆ. ಪಾಟೀಲರ ಮುಖಂಡತ್ವದಲ್ಲಿ ಹೋರಾಟದ ರೂಪುರೇಷೆ ಕುರಿತು ಕರೆಯಲಾಗಿದ್ದ ಸಭೆಯಲ್ಲಿ ತಮ್ಮ ಸಂಕಟವನ್ನ ತೋಡಿಕೊಂಡರು. ದುರಂತವೆಂದರೆ ಒಂದೇ ಗ್ರಾಮದಲ್ಲಿ 120 ಕುಟುಂಬಗಳು ಸಂಪೂರ್ಣ ಭೂರಹಿತವಾಗಿ ಹೋಗುತ್ತವೆ. ಈ ಜಮೀನನ್ನೇ ನಂಬಿ ಬದುಕು ಕಟ್ಟಿಕೊಂಡಿರುವ ರೈತನ ಕುಟುಂಬ ಅಲ್ಲಿ ಕೆಲಸ ಮಾಡುವ ಕೂಲಿಕಾರರು ಸೇರಿದಂತೆ ಭೂಮಿಯನ್ನೇ ಆಸರೆಯಾಗಿಟ್ಟುಕೊಂಡಿರುವ ಜಾನುವಾರುಗಳು ಕಸಾಯಿಖಾನೆ ಸೇರುವುದಂತೂ ಸತ್ಯ.

ಮುಖ್ಯಮಂತ್ರಿಯಾಗಿ ವಿಧಾನಸೌಧದ ಮೆಟ್ಟಿಲೇರುತ್ತಲೇ ಗೊಬ್ಬರ ಕೇಳಿದ ಹಾವೇರಿಯ ರೈತರಿಬ್ಬರ ಪ್ರಾಣ ತೆಗೆದ ಯಡಿಯೂರಪ್ಪ ಈಗ ಕೆ.ಐ.ಎ.ಡಿ.ಬಿ. ಎಂಬ ಸರ್ಕಾರಿ ವಿಷದ ಮೂಲಕ ಸಾವಿರಾರು ರೈತರನ್ನ ಮತ್ತು ಅವರ ಕುಟುಂಬದವರನ್ನ ಸೇರಿದಂತೆ ಮುಗ್ಧ ಜಾನುವಾರುಗಳನ್ನ ಕೊಲ್ಲಲು ಅಣಿಯಾಗಿದ್ದಾರೆ. ಈ ಸೋಗಲಾಡಿತನಕ್ಕೆ ತಕ್ಕ ಬೆಲೆ ತೆರಬೇಕಾಗುವುದು ನಿಶ್ಚಿತ.

• ಹುರುಳಿಕುಪ್ಪಿ ವಿನಯ

ದಗಲುಬಾಜಿ ಪರಿಸರವಾದಿಗಳು-ಆಳುವ ಖಳರು ಮತ್ತು ಸ್ಥಳೀಯ ಮೂಲನಿವಾಸಿಗಳ ಸ್ಥಿತಿ-ಗತಿ ಗೊತ್ತಿಲ್ಲದ ಕೇಂದ್ರ ಪರಿಸರ ಮಂತ್ರಾಲಯ ಹಾಗು ಯುನೆಸ್ಕೋ ತಂಡದ ಹುಚ್ಚಾಟದಿಂದ ಕಾಡಿನ ಮಕ್ಕಳು ಕಷ್ಟಕ್ಕೆ ಬಿದ್ದಿದ್ದಾರೆ. ಪಶ್ಚಿಮ ಘಟ್ಟ ವಿಶ್ವಪರಂಪರೆಯ ತಾಣವಾದರೆ ವನವಾಸಿಗಳ ಸುತ್ತ ರೆಸಾರ್ಟ್ ಹಾವಳಿ ಏಳುತ್ತದೆ; ಮೂಲಭೂತ ಸೌಕರ್ಯವೂ ಸಿಗದೆ ಬದುಕು ಅತಂತ್ರವಾಗುತ್ತದೆ! ಯುನೆಸ್ಕೋದ ಕಬ್ಜಾಕ್ಕೆ ಒಳಪಡದಿದ್ದರೆ, ಸರ್ಕಾರಿ ರಕ್ಷಣೆಯಲ್ಲಿ ಲೂಟಿಕೋರ ಉದ್ಯಮಿಗಳ ಪ್ಲಾನ್-ಪ್ರಾಜೆಕ್ಟ್‌ಗೆ ಅರಣ್ಯ-ಪರಿಸರ ಧ್ವಂಸವಾಗುತ್ತದೆ!


# ಪಶ್ಚಿಮ ಘಟ್ಟಕ್ಕೆ ಪರಿಸರ ವ್ಯಾಧಿ!!



ಕರ್ನಾಟಕದ ಸಮೃದ್ಧ ಪಶ್ಚಿಮ ಘಟ್ಟವನ್ನು ಪರಿಸರ ರೋಗ ಬಿಟ್ಟೂಬಿಡದೆ ಬಾಧಿಸುತ್ತಿದೆ! "ಪರಿಸರವಾದಿ" ವೇಷದ ಈ ವೈರಾಣುಗಳು ಕಳೆದ ಎರಡೂವರೆ ದಶಕದಿಂದ ಪಶ್ಚಿಮ ಘಟ್ಟದ ವೈವಿಧ್ಯಮಯ ಕಾಡು-ನೆಲ-ಜೀವರಾಶಿಗೆ ಅಂಟಿಕೊಂಡು ಸತಾಯಿಸುತ್ತಿವೆ. ವಿದೇಶಿ ಹಣ, ಸ್ವದೇಶಿ ಪ್ರಚಾರ-ಪ್ರಸಿದ್ಧಿ- ಪ್ರಶಸ್ತಿಗಾಗಿ ಪಶ್ಚಿಮ ಘಟ್ಟಕ್ಕೆ ಗಂಟುಬಿದ್ದಿದ್ದ ಮೇಲ್ವರ್ಗದ ಸಾಂಸ್ಕೃತಿಕ ಪುಢಾರಿಗಳ ಹಾವಳಿ ಮಿತಿಮೀರಿ ಹೋಗಿದೆ. ಪರಿಸರಕ್ಕೆ ಮತ್ತು ಜನಸಾಮಾನ್ಯರಿಗೆ ಮಾರಕವಾಗಿ ಪರಿಣಮಿಸಿರುವ ಈ ಪೊಳ್ಳು ಪರಿಸರ ಚಳವಳಿಗಳೀವತ್ತು ಉಳ್ಳವರ ಸಾಂಸ್ಕೃತಿಕ ರಾಜಕೀಯದ ಆಟ ಎಂಬಂತಾಗಿಹೋಗಿದೆ!

ಪ್ರಳಯಾಂತಕ ಸರ್ಕಾರಿ ಯೋಜನೆಗಳು ಪಶ್ಚಿಮ ಘಟ್ಟದ ವಿವಿಧೆಡೆ ವಕ್ಕರಿಸಿದಾಗ ಪರಿಸರ ಕಾಪಾಡಲು, ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಜೀವದ ಹಂಗು ತೊರೆದು ಹೋರಾಡಿದ್ದು ಸ್ಥಳೀಯರು ಮತ್ತು ವನವಾಸಿ ಬುಡಕಟ್ಟು ಸಮುದಾಯದವರು. ಆದರೆ ಈ ಹೋರಾಟದಲ್ಲಿ ನುಸುಳಿಕೊಂಡ ಸೋಕಾಲ್ಡ್ ಪರಿಸರ ಪ್ರೇಮಿಗಳು ಪರಾಕ್ರಮಿಗಳಂತೆ ಪೋಸು ಕೊಟ್ಟರು; ಪ್ರಭುತ್ವದ ಪಾತಕ ಎದುರಿಸಿ ಜೈಲು ಸೇರಿದವರ ಜೊತೆ ಫೋಟೋ ತೆಗೆಸಿಕೊಂಡರು. ಆ ಫೋಟೋ ಹಿಡಿದುಕೊಂಡು ಮಹಾನ್ ಪರಿಸರ ವಾದಿಗಳ ಪೋಸಿನಲ್ಲಿ ಜಗತ್ತು ಸುತ್ತಿದರು. ತಾವೇ ಕೊಡಗಿನ ನಿತ್ಯ ಹರಿದ್ವರ್ಣ ಕಾಡು ಉಳಿಸಿದವರು, ಬೇಡ್ತಿ ನದಿಕೊಳ್ಳ ಕಾಪಾಡಿದವರು, ಕೈಗಾ ಅಣುಸ್ಥಾವರದ ವಿರುದ್ಧ ದಂಗೆ ಎದ್ದವರೆಂದು ಬೋಂಗುಬಿಟ್ಟು ಕಾಸು ಕಿರೀಟ ಗಿಟ್ಟಿಸಿಕೊಂಡರು. ಸ್ವದೇಶದಲ್ಲೂ ಪ್ರಶಸ್ತಿ ಗೂಟದ ಕಾರು ಪಡೆದು ಬೀಗಿದರು. ಜಾಗತಿಕ ಪರಿಸರ ಸಮ್ಮೇಳನಗಳಲ್ಲೆಲ್ಲ ಠಳಾಯಿಸಿ ಒಳಉದ್ದೇಶ ಈಡೇರಿದಾಗ ಪರಿಸರ ಮರೆತು ಬಿಟ್ಟರು.....

ಪರಿಸರದ ಬಗ್ಗೆ ನಿಜ ಕಾಳಜಿ ಇರುವ ವನವಾಸಿಗಳಾಗಲಿ ಅಥವಾ ಸರ್ಕಾರಿ ಪ್ರಾಜೆಕ್ಟ್‌ಗಳಿಂದ ನೆಲೆ ಕಳೆದುಕೊಂಡು ಬೀದಿಗೆ ಬಿದ್ದಿರುವ ಸಂತ್ರಸ್ತರಾಗಲಿ ಇವತ್ತು ಪರಿಸರವಾದಿಗಳನ್ನು ಮತ್ತವರ ಖೋಟಾ ಚಳವಳಿಗಳನ್ನು ನಂಬುವ ಸ್ಥಿತಿಯಲ್ಲಿಲ್ಲ. ಪರಿಸರ ಕಾಳಜಿ ಪ್ರಬಲವಾಗಿರುವ ಉತ್ತರಕನ್ನಡ, ಕೊಡಗು, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು ಸೀಮೆಯ ಜನರಿಗೆ ಪರಿಸರ ಸಂರಕ್ಷಣೆಯ ನೆಪದಲ್ಲಿ ಜನರ ನಡುವೆ ಓಡಾಡುವ ಪರಿಸರ ನೇತಾರರ, ಕಾವಿ ಸಾಧು-ಸಂತರ ಅಷ್ಟೂ ಅವತಾರಗಳು ಅರ್ಥವಾಗಿ ಹೋಗಿದೆ! ಈ ಸ್ವಯಂಘೋಷಿತ ಪರಿಸರ ಪ್ರೇಮಿಗಳ ಕಾರ್ಯಾಚರಣೆ, ವ್ಯವಹಾರ, ಹುದ್ದೆ ಸನ್ಮಾನಕ್ಕಾಗಿ ಮಾಡುವ ಕಸರತ್ತುಗಳೆಲ್ಲ ಬಹಿರಂಗ ರಹಸ್ಯದಂತಾಗಿ ಹೋಗಿದೆ.




ಸ್ವರ್ಣವಲ್ಲಿ ಸ್ವಾಮಿ

'ಪರಿಸರ ಹಾರಾಟ'ವನ್ನೇ ದಂಧೆ ಮಾಡಿಕೊಂಡವರಿದ್ದಾರೆ. ಮಲೆನಾಡಿನಲ್ಲಿ ಯಾವುದಾದರೂ ಯೋಜನೆ ಸ್ಥಾಪನೆಯಾಗುವ ಸಣ್ಣ ಸುಳಿವು ಸಿಕ್ಕರೂ ಸಾಕು, 'ವಿರೋಧಿ ಧ್ವನಿ' ಹೊರಡಿಸುವ ಪೇಪರ್-ಟಿವಿ ಟೈಗರ್‌ಗಳಿದ್ದಾರೆ. ಸ್ಥಳೀಯ ಅಮಾಯಕರನ್ನು ಸೇರಿಸಿ ಒಂದೆರಡು ಹಾರಾಟ ನಡೆಸಿ "ಆಸೆ ಪೂರೈಸಿದಾಗ" ತಂತಾನೆ ನಾಪತ್ತೆಯಾಗಿಬಿಡುತ್ತಾರೆ. ಪರಿಸರ ಜಾಗೃತಿ, ನೀರು ಜಾಗೃತಿ, ತಳಿ ಸಂರಕ್ಷಣೆ, ಕಾಡಿನ ಜೀವ ವೈವಿಧ್ಯತೆ ಅಧ್ಯಯನವನ್ನೇ ವೃತ್ತಿ ಮಾಡಿಕೊಂಡವರೂ ಇದ್ದಾರೆ. ವಿದ್ಯಾಮಂತ್ರಿ ಕಾಗೇರಿಯ ನೆಂಟರೇ ಪರಿಸರ-ಪ್ರವಾಸೋದ್ಯಮದ ಹೆಸರಲ್ಲಿ ಲಕ್ಷ-ಲಕ್ಷ ಲೂಟಿ ಮಾಡಿದ್ದಾರೆ. ಹುಟ್ಟು ಪರಿಸರ ಹೋರಾಟಗಾರನೆಂದು ಹೇಳಿಕೊಳ್ಳುವ ಪಕ್ಕಾ ಚೆಡ್ಡಿ ಅನಂತ ಹೆಗಡೆ ಆಶೀಸರ ಸಂಘ ಪರಿವಾರದ ಪ್ರಭಾವದಿಂದ ಗೂಟದ ಕಾರು ಪಡೆದುಕೊಂಡು ಬೊಕ್ಕಸಕ್ಕೆ ಹೊರೆಯಾಗಿದ್ದಾನೆ. ಪರಿಸರದ ಹೆಸರಲ್ಲಿ ನಿತ್ಯನೂತನ 'ವಿಕಾರ' ಸಂಕಿರಣ ನಡೆಸಿ ಲಕ್ಷಾಂತರ ಸ್ವಾಹಾ ಮಾಡುತ್ತಿದ್ದಾನೆ. ಹೆಕ್ಟೇರ್‌ಗಟ್ಟಲೆ ಅರಣ್ಯ ಅತಿಕ್ರಮಿಸಿ ಭರ್ಜರಿ ತೋಟ ಮಾಡಿಕೊಂಡಿದ್ದಾನೆ. ಹಸಿರುಮರಗಳನ್ನೇ ಕಡಿದು ಉರುಳಿಸಿದ್ದಾನೆ. ಇಂಥ ಹಲವು ದಗಾಕೋರ ಪರಿಸರವಾದಿಗಳು ಕಳೆದೆರಡು ದಶಕದಲ್ಲಿ ಅವತರಿಸಿದ್ದಾರೆ. ಇವರೆಲ್ಲ ರಾಜಧಾನಿಯಲ್ಲಿ ಸೈಟು-ಮನೆ, ಕಾರು-ಕಚೇರಿ, ವಿದೇಶ ಪ್ರವಾಸ, ಸಕಲ ಪರಿಸರಘಾತಕ ಉಪಕರಣಗಳ ಸುಖ-ಸೌಲಭ್ಯ ಅನುಭವಿಸುತ್ತಿದ್ದಾರೆ.


ಕೈಗಾ ಅಣುಸ್ಥಾವರ, ಬೇಡ್ತಿ-ಬರಪೋಲೆ ಜಲವಿದ್ಯುತ್ ಯೋಜನೆ, ಕೊಜೆಂಟ್ರಿಕ್ಸ್, ನಂದಿಕೂರು ಥರ್ಮಲ್ ಪ್ರಾಜೆಕ್ಟ್, ಮಂಗಳೂರಿನ ಎಸ್‌ಇಝಡ್, ಶಿವಮೊಗ್ಗ ಚಿಕ್ಕಮಗಳೂರಿನ ಗಣಿಗಾರಿಕೆ, ನ್ಯಾಷನಲ್ ಪಾರ್ಕ್ ಯೋಜನೆ ಸ್ಥಾಪನೆಗೆ ಆಳುವ ಖೂಳರು ಹಠಕ್ಕೆ ಬಿದ್ದಾಗ ಢೋಂಗಿ ಪರಿಸರವಾದಿಗಳ ಹಿಂಡು-ಹಿಂಡೇ ಹುಟ್ಟಿಕೊಂಡಿತ್ತು, ಇವರೆಲ್ಲ ತಮ್ಮ ಬೇಳೆ ಬೇಯಿಸಿಕೊಂಡರೇ ಹೊರತು ಯೋಜನಾ ಬಾಧಿತರ ಸಂಕಷ್ಟದ ಬಗ್ಗೆಯಾಗಲಿ, ಪರಿಸರ ವಿನಾಶದ ಬಗ್ಗೆಯಾಗಲಿ ಎಂದೂ ತಲೆ ಕೆಡಿಸಿಯೇ ಕೊಂಡಿರಲಿಲ್ಲ. ಯಾವ್ಯಾವ ಪರಿಸರ ಹೋರಾಟದಲ್ಲಿ ಈ ನಕಲಿ ಪರಿಸರ ಸಂರಕ್ಷಕರು, ಕಾವಿ ಸ್ವಾಮಿಗಳು ತಲೆ ತೂರಿಸಿದ್ದರೋ ಅಲ್ಲೆಲ್ಲ ಸ್ಥಳೀಯರಿಗೆ ಮೋಸ-ವಂಚನೆಯೇ ಆಗಿದೆ! ಪರಿಸರ ಹೋರಾಟ ಫ್ಲಾಪ್ ಆಗಿದೆ. ಕೈಗಾ ಅಣುಸ್ಥಾವರ, ಮಂಗಳೂರು ಎಸ್‌ಈಝಡ್ ವಿರುದ್ಧದ ಹೋರಾಟ ಹಾಳಾಗಿದ್ದೇ ಸ್ವರ್ಣವಲ್ಲಿ ಸ್ವಾಮಿ ಮತ್ತು ಪೇಜಾವರ ಸ್ವಾಮಿಯ ಎಡಬಿಡಂಗಿತನದಿಂದ! ಕಾವಿಗಳ ಮತ್ತು ಸೋಕಾಲ್ಡ್ ತರಲೆ ಪರಿಸರವಾದಿಗಳ ಎಂಟ್ರಿಯಾಗದ ತದಡಿ ಮತ್ತು ಹಣಕೋಣ ಥರ್ಮಲ್ ಪ್ರಾಜೆಕ್ಟ್ ವಿರೋಧಿ ಆಂದೋಲನ ಪ್ರಭುತ್ವವನ್ನೇ ಮಣಿಸಿತ್ತು, ಬದ್ಧತೆ, ಪ್ರಾಮಾಣಿಕತೆಯ ಅಸಲಿ ಪರಿಸರಪ್ರೇಮಿಗಳ ಬದಿಗೆ ಸರಿಸಿ ನಕಲಿಗಳೇ ಮೆರೆಯುತ್ತಿರುವುದು ಪಶ್ಚಿಮ ಘಟ್ಟದ ಘೋರ ದುರಂತವೇ ಸರಿ!

ಪರಿಸರ ಮುಖವಾಡದ ಸ್ವಾಮಿಗಳು ವಿಶ್ವಾಸಾರ್ಹತೆಯನ್ನೇ ಕಳಕೊಂಡುಬಿಟ್ಟಿದ್ದಾರೆ. ಸರ್ಕಾರಿ ಪ್ರಶಸ್ತಿಗಳು, ಕಾರು, ವಿದೇಶಿ ಅನುದಾನ, ವಿದೇಶಿ ಸೆಮಿನಾರ್ ಟೂರ್‌ಗಳಿಗಾಗಷ್ಟೇ ಪರಿಸರ ಪರಾಕ್ರಮಿಗಳು ಶೋ ಮಾಡುತ್ತಾರೆಂಬುದೀಗ ಜನರಿಗೆ ಖಾತ್ರಿಯಾಗಿ ಹೋಗಿದೆ. ಹಾಗಾಗಿಯೇ ಇವತ್ತು ಪಶ್ಚಿಮ ಘಟ್ಟ ಪ್ರದೇಶವನ್ನು ಯುನೆಸ್ಕೋದ ವಿಶ್ವ ಪರಂಪರೆ ಪಟ್ಟಿಗೆ ಸೇರಿಸುವಂತೆ ಪರಿಸರ ಪುಢಾರಿಗಳು, ಪರಿಸರ ಸ್ವಾಮಿಗಳು ಅದೆಷ್ಟೇ ದೊಡ್ಡದಾಗಿ ಬೊಬ್ಬೆ ಹೊಡೆದರೂ ಸ್ಥಳೀಯರು-ವನವಾಸಿಗಳು ಅದಕ್ಕೆ ಧ್ವನಿ ಗೂಡಿಸುತ್ತಿಲ್ಲ. ತಮಾಷೆ ನೋಡಿ; ಬಿಜೆಪಿ ಸರ್ಕಾರದ ಪಶ್ಚಿಮ ಘಟ್ಟ ಕಾರ್ಯಪಡೆಯ ಅಧ್ಯಕ್ಷ ಆಶೀಸರ ಮಾಣಿ, ಆತನಿಗೆ ಒತ್ತಾಸೆಯಾಗಿರುವ 'ಪರಿಸರ ಸ್ವಾಮಿ' ಎಂಬ ಅಡ್ಡ ಅಭಿದಾನದ ಸರ್ಕಾರಿ ಸ್ವಾಮಿ ಗಂಗಾಧರೇಂದ್ರ (ಸ್ವರ್ಣವಲ್ಲಿ ಶ್ರೀ) ಪಶ್ಚಿಮ ಘಟ್ಟದ ಆಯ್ದ ಭಾಗ ವಿಶ್ವಪರಂಪರೆ ತಾಣ ಆಗಬೇಕೆಂದು ಸರ್ಕಾರಕ್ಕೆ ಒತ್ತಡ ಹೇರುತ್ತಿದ್ದಾರೆ. ಆದರೆ ಯಡ್ಡಿ ಸರ್ಕಾರ ಈ ಪ್ರಸ್ತಾಪವನ್ನು ಸಾರಾಸಗಟಾಗಿ ತಿರಸ್ಕರಿಸಿಬಿಟ್ಟಿದೆ!



ವಿಜಯಶಂಕರ್

"ನಮ್ಮ ಪರಿಸರ-ಅರಣ್ಯದ ರಕ್ಷಣೆ ಹೇಗೆ ಮಾಡಬೇಕೆಂಬುದು ನಮಗೆ ಗೊತ್ತಿದೆ. ರೆಸಾರ್ಟ್‌ಗಳಿಗಾಗಿ, ವಿದೇಶಿ ಅರೆಬೆತ್ತಲೆ ಮಂದಿಗಾಗಿ ಪಶ್ಚಿಮ ಘಟ್ಟದ ಜುಟ್ಟು ಯುನೆಸ್ಕೋ ಕೈಗೆ ಕೊಡಬೇಕಾ?.... ಈ ಲಾಭವಿಲ್ಲದ ಯೋಜನೆ ನಮಗೆ ಬೇಕಾಗಿಲ್ಲ...." ಎಂದು ಒಂದೇ ಉಸಿರಿಗೆ ಉರುಹಚ್ಚಿದ ಸ್ಟೇಟ್‌ಮೆಂಟ್ ಅನ್ನು ಅಬ್ಬೇಪಾರಿ ಅರಣ್ಯ ಮಂತ್ರಿ ವಿಜಯಶಂಕರ್ ಉದುರಿಸಿದ್ದಾರೆ. ಅರಣ್ಯ ಮಂತ್ರಿಯ ಹೇಳಿಕೆ ಹಿಂದೆ ಸಾಕ್ಷಾತ್ ಸಿಎಂ ಯಡ್ಡಿಯೇ ಇದ್ದಾರೆ. ಟಿಂಬರ್, ಗಣಿ ಮತ್ತು ಕಿರು ಜಲವಿದ್ಯುತ್ ವ್ಯಾಪಾರಿ ಲಾಬಿಯ ಹಿಡಿತದಲ್ಲಿರುವ ಯಡ್ಡೀಜಿಗೆ ಪಶ್ಚಿಮ ಘಟ್ಟದ ಪ್ರದೇಶ ಯುನೆಸ್ಕೋ ಲಿಸ್ಟಿಗೆ ಸೇರುವುದು ಬೇಕಾಗಿಲ್ಲ. ಪರಂಪರೆ ತಾಣಗಳ ಆಯ್ಕೆಗೆ ಅವಕಾಶ ಕೊಟ್ಟಿದ್ದ ಬಿಜೆಪಿ ಸರ್ಕಾರ ಹಠಾತ್ ನಿರ್ಧಾರ ಬದಲಿಸಿದ್ದರ ಹಿಂದೆ ಗಣಿ-ಟಿಂಬರ್ ಗ್ಯಾಂಗ್ ಕರಾಮತ್ತಿರುವುದು ಬಹಿರಂಗ ರಹಸ್ಯ. ಈ ಪಶ್ಚಿಮ ಘಟ್ಟದ ಆಯ್ದ ಭಾಗವೇನಾದರೂ ಯುನೆಸ್ಕೋದ ವಿಶ್ವ ಪಾರಂಪರಿಕ ತಾಣಕ್ಕೆ ಸೇರಿದರೆ ಅಲ್ಲಿ ಯಾವುದೇ ಮರ ಕಡಿಯುವಂತಿಲ್ಲ, ಡ್ಯಾಮ್ ಕಟ್ಟುವಂತಿಲ್ಲ, ಗಣಿಗಾರಿಕೆಗೆ ಅವಕಾಶವೇ ಇಲ್ಲ, ಹೀಗಾಗಿ ಸಹ್ಯಾದ್ರಿಯ ಸಮೃದ್ಧ ನೆಲ-ಜಲ-ಅರಣ್ಯದ ಮೇಲೆ ಕಣ್ಣಿಟ್ಟಿರುವ ಲಾಬಿ ಸಿಎಂ ಸಾಹೇಬರನ್ನೇ ಪಳಗಿಸಿಬಿಟ್ಟಿದೆ!



ಅನಂತ ಅಶೀಸರ

ಪಶ್ಚಿಮ ಘಟ್ಟದ ಭಾಗಗಳನ್ನು ವಿಶ್ವಪರಂಪರೆ ತಾಣವೆಂದು ಘೋಷಿಸಿದರೆ ಸ್ಥಳೀಯ ಅಭಿವೃದ್ಧಿಗೆ ತೊಡಕಾಗುತ್ತದೆ ಎಂಬುದು ಯಡ್ಡಿ ಸರ್ಕಾರದ ಸಬೂಬು. ಪ್ರಾಕೃತಿಕ ಸಂಪತ್ತಿನ ಲೂಟಿ ಹೊಡೆವ ಲಾಬಿಯ ಹಿತರಕ್ಷಣೆಗೆ ಈ ನೆಪವಷ್ಟೇ. ಆರಂಭದಲ್ಲಿ ಕೇಂದ್ರ ಪರಿಸರ ಮಂತ್ರಾಲಯ ಮತ್ತು ಯುನೆಸ್ಕೋಗೆ ಪಾರಂಪರಿಕ ತಾಣಗಳ ಆಯ್ಕೆಗೆ ಒಪ್ಪಿಗೆ ಕೊಟ್ಟಿದ್ದ ಯಡ್ಡಿ ಸರ್ಕಾರದ ಪ್ರಭೃತಿಗಳಿಗೆ ಆಗ ಸ್ಥಳೀಯರ ನೆನಪಾಗಲಿಲ್ಲ! ಯುನೆಸ್ಕೋ 'ಒಡೆತನ'ದಿಂದ ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ತಲತಲಾಂತರದಿಂದ ಬದುಕು ಸಾಗಿಸುತ್ತಿರುವ ಮೂಲ ನಿವಾಸಿಗಳ-ಬುಡಕಟ್ಟು ಮಂದಿಯ ಪಾಡೇನಾಗಬಹುದು ಎಂಬ ಸಣ್ಣ ಕಳಕಳಿಯೂ ಜನದ್ರೋಹಿ ಚೆಡ್ಡಿ ಸರ್ಕಾರಕ್ಕೆ ಇರಲಿಲ್ಲ. ಈಗ ಬಲಾಢ್ಯರ 'ಬಿಸಿನೆಸ್'ಗೆ ನೆರವಾಗಲು ಬುಡಕಟ್ಟು ಜನರ ಅಭಿವೃದ್ಧಿಯ ಹುಸಿ ಮಾತಾಡುತ್ತಿದೆ.

ವಿಶ್ವ ಪರಂಪರೆಯ ಕಿರೀಟ ಸಹ್ಯಾದ್ರಿಗೂ ಬೇಕೇ ಬೇಕೆಂದು ಬೊಂಬಡಾ ಬಜಾಯಿಸುತ್ತಿರುವ ಆಶೀಸರನಂಥ ಖೋಟಾ ಪರಿಸರ ಪಂಡಿತರು ಮತ್ತು ಸ್ವರ್ಣವಲ್ಲಿ ಸ್ವಾಮಿ ಯಂಥ ಕಾವಿಗಳು ಗಿರಿಜನರ ಬದುಕು ಈ ಯೋಜನೆ ಯಿಂದ ಬವಣೆ ಆಗುತ್ತದೆಂಬುದನ್ನು ಬುದ್ಧಿಪೂರ್ವಕವಾಗಿ ಮರೆಮಾಚುತ್ತಿದ್ದಾರೆ. ಸ್ವಜಾತಿ ವಿಪ್ರರ ತೋಟ-ಗದ್ದೆ ಮನೆ-ಮಠ ಮುಳುಗುವ ಸರ್ಕಾರಿ ಪ್ಲಾನ್ ಬಂದಾಗಷ್ಟೆ ಮಂತ್ರ ದಂಡ ಎತ್ತಿ ಸಿಡಿದೇಳುವ ಸ್ವರ್ಣವಲ್ಲಿ ಸ್ವಾಮಿ ಮತ್ತವರ ಹಿಂದೆ-ಮುಂದಿರುವ ಬ್ರಾಹ್ಮಣ ಪರಿಸರವಾದಿಗಳ ಮತ್ತು ಮಂತ್ರಿಗಳಿಗೆ ಬುಡಕಟ್ಟು ಹಾಲಕ್ಕಿ, ಕೂರ್ಗಿ, ಕುಂಬ್ರಿ ಮರಾಠಿ, ಸಿದ್ದಿ ಕಣಬಿಗಳಂಥವರ ಜೀವ-ಜೀವನ ಲೆಕ್ಕಕ್ಕೆ ಇಲ್ಲ, ಇದೊಂದು ಸಮಸ್ಯೆ ಎಂದವರಿಗೆ ಅನ್ನಿಸುವುದೂ ಇಲ್ಲ!! ಯಾಕೆಂದರೆ ಅವರೆಲ್ಲ ಆದಿವಾಸಿ ಶೂದ್ರಾದಿಗಳು ತಾನೆ?

ಸಹ್ಯಾದ್ರಿಯ ಆಯ್ದ ಭಾಗಗಳು ಯುನೆಸ್ಕೋದ ಕಬ್ಜಾಕ್ಕೆ ಒಳಪಟ್ಟರೆ ಗಿರಿಜನರ ಹಾಡಿ-ಕೊಪ್ಪಗಳಲ್ಲಿ ರಸ್ತೆ-ವಿದ್ಯುತ್- ದೂರವಾಣಿ ಸಂಪರ್ಕ-ಶಾಲೆಯಂಥ ಮೂಲಭೂತ ಸೌಲಭ್ಯ-ಸೌಕರ್ಯಗಳೇ ಸಿಗಲಾರದು. ಯುನೆಸ್ಕೋ ಪ್ರಣೀತ ಪ್ರವಾಸೋದ್ಯಮದ ಹೆಸರಲ್ಲಿ ಕಾಡಲ್ಲಿ ತಲೆ ಎತ್ತುವ ರೆಸಾರ್ಟ್‌ಗಳಲ್ಲಿ ಸಣ್ಣ-ಪುಟ್ಟ ಚಾಕರಿಯೇ ಗಿರಿಜನರಿಗೆ ಗತಿಯಾಗುತ್ತದೆ. ರೆಸಾರ್ಟ್‌ನಲ್ಲಿ ನಡೆಯುವ ವಿದೇಶಿಗರ-ಸ್ವದೇಶಿ ಹಣವಂತರ ವಿಲಾಸ ದೂರದಿಂದ ನೋಡುವ 'ಭಾಗ್ಯ' ಬಿಟ್ಟರೆ ಇಷ್ಟು ದಿನ ಕಷ್ಟಪಟ್ಟು ಕಟ್ಟಿಕೊಂಡ ಬದುಕು ಬರ್ಬಾದ್ ಆಗುತ್ತದೆ. ಕಾಡಿನ ಒಡಲಲ್ಲಿ ಕೃಷಿ-ತೋಟ -ಮನೆ ಮಾಡಿಕೊಂಡಿದ್ದ ಆದಿವಾಸಿಗಳ ಭವಿಷ್ಯ ಬರಡಾಗುತ್ತದೆ. ಹಾಗೆಯೇ ಈಗಾಗಲೇ ಪಶ್ಚಿಮ ಘಟ್ಟದಲ್ಲಿ ನಡೆಯುತ್ತಿರುವ ರೈಲು ಮಾರ್ಗ ಕಾಮಗಾರಿಗೂ ತಡೆ ಬೀಳಲಿದೆ. ಕರಾವಳಿಯ ಅಭಿವೃದ್ಧಿಗೆ ದೊಡ್ಡ ಹೊಡೆತ ಬೀಳಲಿದೆ. ಇದೆಲ್ಲ ಪರಿಸರವಾದಿ-ಪರಿಸರಸ್ವಾಮಿ ಕಂಡೂ ಕಾಣದಂತಿದ್ದಾರೆ.

ದುರಂತವೆಂದರೆ ಸಹ್ಯಾದ್ರಿ ತಪ್ಪಲನ್ನು ಯುನೆಸ್ಕೋದ ವಿಶ್ವಪಾರಂಪರಿಕ ತಾಣವೆಂದು ಘೋಷಿಸಲು ತಿಪ್ಪರಲಾಗ ಹಾಕುತ್ತಿರುವ ಪರಿಸರ ಸ್ವಾಮಿ-ಪರಿಸರವಾದಿಗಳು, ಇದನ್ನು ತಿರಸ್ಕರಿಸಿರುವ ಸರ್ಕಾರ ಮತ್ತು ಯುನೆಸ್ಕೋ ಎಂಬ ಪರಿಸರ 'ಸಂರಕ್ಷಕ'ರೆಲ್ಲ ಸೇರಿ ಆದಿವಾಸಿ ಬುಡಕಟ್ಟು ಜನರೇ ಅರಣ್ಯ ನಾಶಕರು ಎಂದು ಬಿಂಬಿಸುತ್ತಿದ್ದಾರೆ. ಆದರೆ ಅರಣ್ಯ ಮತ್ತು ಪರಿಸರ ಉಳಿದಿರುವುದೇ ಈ ಮೂಲ ನಿವಾಸಿಗಳಿಂದ. ಪ್ರತಿಫಲಾಪೇಕ್ಷೆಯಿಲ್ಲದೆ ಪ್ರಾಮಾಣಿಕತೆ -ಪ್ರೀತಿಯಿಂದ ಅರಣ್ಯ ರಕ್ಷಣೆಯಲ್ಲಿ ತೊಡಗಿರುವ ಈ ಮಂದಿಯನ್ನು ಗುರುತಿಸುವುದೇ ಇಲ್ಲ. ಈ ಬುಡಕಟ್ಟು ಮಂದಿಯೂ ಪ್ರಚಾರ-ಪ್ರಶಸ್ತಿ ಬಯಸುವುದಿಲ್ಲ. ವಿಪರ್ಯಾಸವೆಂದರೆ, ನಿಜ ಪರಿಸರ ಸಂರಕ್ಷಕರು ಬೆಳಕಿಗೆ ಬಾರದಂತೆ ತಡೆದು ನಕಲಿ ಪರಿಸರವಾದಿ-ಪರಿಸರ ಸ್ವಾಮಿಗಳು ಸುದ್ದಿ ಸದ್ದು ಮಾಡುತ್ತಿದ್ದಾರೆ.

ಇಂಥ ನಯವಂಚಕ ಪರಿಸರವಾದಿಗಳಿಂದಾಗಿಯೇ ಈಗ ಯುನೆಸ್ಕೋದ ಪ್ರಸ್ತಾವನೆ ಪರ-ವಿರುದ್ಧ ಕೂಗೆದ್ದಿದೆ. ವಿಶ್ವಪರಂಪರೆಯ ತಾಣವೆಂದು ಪಶ್ಚಿಮ ಘಟ್ಟವನ್ನು ಘೋಷಿಸಿದರೆ ಕಾಡಿನ ಮಕ್ಕಳೇನೂ ಬೇಡವೆನ್ನಲಾರರು. ಆದರೆ ಅವರನ್ನು ಆಳುವವರು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಷ್ಟೇ. ಅವರ ತಲತಲಾಂತರದ ಕಾಡಿನ ಬದುಕಿಗೆ ಸರ್ಕಾರ ಭದ್ರತೆ ಒದಗಿಸಬೇಕು. ಜೀವ ವೈವಿಧ್ಯತೆಯ ಹಾಟ್‌ಸ್ಪಾಟ್ ಪಶ್ಚಿಮ ಘಟ್ಟದ ಮಹತ್ವ ಗೊತ್ತಿರುವ, ಅಲ್ಲಿಯ ಸಂಪತ್ತು-ಸಮೃದ್ಧಿಯ ರಕ್ಷಣೆಯ ಹೊಣೆಯಿರುವ ಸರ್ಕಾರ ಜಾಗತಿಕ ಮಹತ್ವ ಪಡೆಯುವ ಯುನೆಸ್ಕೋದ ಸ್ಕೀಮ್ ಕಳೆದುಕೊಳ್ಳಬಾರದು. ಇದು ಯಡ್ಡಿಯ ದಡ್ಡ ಸರ್ಕಾರಕ್ಕೆ ಹೇಗೆ ಅರ್ಥವಾದೀತು?

ಒಂದಂತೂ ಖರೆ. ದಗಲುಬಾಜಿ ಪರಿಸರವಾದಿಗಳು-ಆಳುವ ಖಳರು ಮತ್ತು ಸ್ಥಳೀಯ ಮೂಲನಿವಾಸಿಗಳ ಸ್ಥಿತಿ-ಗತಿ ಗೊತ್ತಿಲ್ಲದ ಕೇಂದ್ರ ಪರಿಸರ ಮಂತ್ರಾಲಯ ಹಾಗು ಯುನೆಸ್ಕೋ ತಂಡದ ಹುಚ್ಚಾಟದಿಂದ ಕಾಡಿನ ಮಕ್ಕಳು ಕಷ್ಟಕ್ಕೆ ಬಿದ್ದಿದ್ದಾರೆ. ಪಶ್ಚಿಮ ಘಟ್ಟ ವಿಶ್ವಪರಂಪರೆಯ ತಾಣವಾದರೆ ವನವಾಸಿಗಳ ಸುತ್ತ ರೆಸಾರ್ಟ್ ಹಾವಳಿ ಏಳುತ್ತದೆ; ಮೂಲಭೂತ ಸೌಕರ್ಯವೂ ಸಿಗದೆ ಬದುಕು ಅತಂತ್ರವಾಗುತ್ತದೆ! ಯುನೆಸ್ಕೋದ ಕಬ್ಜಾಕ್ಕೆ ಒಳಪಡದಿದ್ದರೆ, ಸರ್ಕಾರಿ ರಕ್ಷಣೆಯಲ್ಲಿ ಲೂಟಿಕೋರ ಉದ್ಯಮಿಗಳ ಪ್ಲಾನ್-ಪ್ರಾಜೆಕ್ಟ್‌ಗೆ ಅರಣ್ಯ-ಪರಿಸರ ಧ್ವಂಸವಾಗುತ್ತದೆ! ಒಟ್ಟಿನಲ್ಲಿ ಪಾಪಿ ಪರಿಸರವಾದಿಗಳು, ಪರಿಸರಸ್ವಾಮಿ ಮತ್ತು ತಿಕ್ಕಲು ಸರ್ಕಾರಿ ಪಂಡಿತರು ಒಣ ಪ್ರತಿಷ್ಠೆ-ಸ್ವಾರ್ಥಕ್ಕೆ ವನವಾಸಿಗಳ ಬದುಕು ಬವಣೆ ಮಾಡುತ್ತಿರುವುದು ಅಕ್ಷಮ್ಯವೇ ಸರಿ.

• ನಹುಷ



# ಬಿಜಾಪುರ ರೇಷ್ಮಾಳ ಅಂಗೈಲಿ ಅಸುನೀಗುತ್ತಿದೆ ಜೆಡಿಎಸ್!

ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸೂಕ್ತ ಸ್ಥಾನಮಾನ ಬೇಕೆಂಬ ಕೂಗು ಭಾರತದಾದ್ಯಂತ ವ್ಯಾಪಕವಾಗಿದೆ. ಈ ನಲ್ಲಿ ಅವಿರತವಾಗಿ ಹೋರಾಟಗಳೂ ನಡೆಯುತ್ತಿವೆ. ...ಿ ಇಲ್ಲೊಬ್ಬಳು ಮಹಾಮಹಿಳೆ ತನಗೊಂದು ಸ್ಥಾನಮಾನ ...ಕ್ಕ ಪಕ್ಷವನ್ನೇ ಮಣ್ಣುಪಾಲು ಮಾಡಲು ಇನ್ನಿಲ್ಲದಂತೆ ...ಗುತ್ತಿದ್ದಾಳೆ. ಆಕೆ ರೇಷ್ಮಾ ಪಡೇಕನೂರ. ಈಕೆಯ ...ಗೈಲಿ ಅಕ್ಷರಶಃ ಕೋಮಾವಸ್ಥೆಯಲ್ಲಿ ಪಾಚಿಕೊಂಡಿರುವ ... ಜೆಡಿಎಸ್!

ರೇಷ್ಮಾ ಪಡೇಕನೂರ ಸದ್ಯ ಜೆಡಿಎಸ್ ಪಕ್ಷದ ಬಿಜಾಪುರ ...ಮಹಿಳಾ ಘಟಕದ ಅಧ್ಯಕ್ಷೆ. ಅಧ್ಯಕ್ಷಗಿರಿಯನ್ನು ...ದಾಟಿಕ್ಕೇ ಮೀಸಲಿಟ್ಟಿರುವ ಈಕೆ ಯಾರ ನೆತ್ತಿಗೆ ಕಾಲಿಟ್ಟು ...ವ ಪೀಠ ಅಲಂಕರಿಸಬಹುದೆಂಬ ಲೆಕ್ಕಾಚಾರದಲ್ಲಿಯೇ ...ಯಾಗಿರುತ್ತಾಳೆ. ಬಹುಶಃ ಬಿಜಾಪುರ ಜಿಲ್ಲಾ ಜೆಡಿಎಸ್ ...ಈ ಮಹಾಮಹಿಳೆಯ ಪಾದ ಸೋಕದ ನೆತ್ತಿಗಳೇ ...ಕ್ಕಿಲ್ಲ! ಇನ್ನೂ ಆಶ್ಚರ್ಯದ ಸಂಗತಿಯೆಂದರೆ ಈಕೆಯ ...ವ ಮಹಿಳಾ ಘಟಕವನ್ನು ಮೀರಿ ಇಡೀ ಪಕ್ಷವನ್ನೇ ...ಸಿಕೊಂಡಿದೆ. ಇದೆಲ್ಲದರಿಂದಾಗಿ ಹುಲುಸಾಗಿ ಬೆಳೆಯ ... ರಾಜಕೀಯ ಅವಕಾಶಗಳತ್ತ ಜೆಡಿಎಸ್ ಪಕ್ಷ ಕಣ್ಣೆ ...ೂ ನೋಡಲಾರದಷ್ಟು ನಿತ್ರಾಣಗೊಂಡಿದೆ.

ಹಾಗಂತ ರೇಷ್ಮಾಳಿಗೆ ಪ್ರಭಾವೀ ಕೌಟುಂಬಿಕ ಹಿನ್ನೆಲೆಯಿಲ್ಲ. ಈಕೆ ಶಿಕ್ಷಕಿಯೊಬ್ಬರ ಮಗಳು. ಇಂಥವಳು ಅದೊಂದು ದಿನ ಇದ್ದಕ್ಕಿದ್ದಂತೆ ಕಣ್ಮರೆಯಾಗಿದ್ದಳು. ಬಿಜಾಪುರ ನಗರದ ಕಿರಾಣಿ ಅಂಗಡಿಯ ಹುಡುಗನೂ ನಾಪತ್ತೆಯಾಗಿದ್ದ. ಕೊನೆಗೆ ಇವರಿಬ್ಬರೂ ಮುಂಬೈ ಸೇರಿರುವ ವಿಚಾರ ಗುಲ್ಲಾಗಿತ್ತು, ಕೆಲ ಸಮಯದ ಬಳಿಕ ರೇಷ್ಮಾ ಕಿರಾಣಿ ಅಂಗಡಿಯವನೊಂದಿಗೇ ಊರಿಗೆ ವಾಪಸಾದಳು. ತದನಂತರ ಬ್ಯೂಟಿ ಪಾರ್ಲರ್ ಆರಂಭಿಸಿದಳು. ಸ್ಥಳೀಯ ಮಂದಿ ಏನೋ ವಯಸ್ಸಿನ ಹುಚ್ಚಾಟಕ್ಕೆ ಬಿದ್ದು ಯಡವಟ್ಟು ಮಾಡಿಕೊಂಡ ಹುಡುಗಿ ನೆಲೆ ಕಂಡುಕೊಂಡಿದೆ ಅಂದುಕೊಂಡಿದ್ದರು. ಆದರೀಕೆ ತನ್ನ ಮುಂಬೈ ಪ್ರವಾಸದ ಪಾರ್ಟ್ನರ್ ಕಿರಾಣಿಅಂಗಡಿಯವನನ್ನು ಬೀದಿಗೆಸೆದು, ಬ್ಯೂಟಿಪಾರ್ಲರ್ ಕೆಲಸವನ್ನು ಕಡೆಗಣಿಸಿ ಏಕಾಏಕಿ ರಾಜಕೀಯದತ್ತ ಮುಖ ಮಾಡಿದಳು.

ರೇಷ್ಮಾಳ ಹಠಾತ್ ರಾಜಕೀಯ ಪ್ರವೇಶಕ್ಕೆ ಅನುವು ಮಾಡಿಕೊಟ್ಟವನು ಸುರೇಶ್ ಗೌಡನೆಂಬ ಅಬ್ಬೇಪಾರಿ. ಈತ ರೇಷ್ಮಾಳನ್ನು ತನ್ನ ಗುರು ಕಂ ಜೆಡಿಎಸ್‌ನ ಆಜೀವ ರಾಜ್ಯಾಧ್ಯಕ್ಷ ಕುಮಾರಸ್ವಾಮಿಗೆ ಪರಿಚಯಿಸಿದ. ತದನಂತರ ಬೆಂಗಳೂರಲ್ಲೊಂದು ಸುತ್ತು ಬೀಟ್ ಹೊಡೆಸಿ ಜಮೀರ್ ಅಹ್ಮದ್ ಮುಂತಾದವರನ್ನೂ ಭೇಟಿಯಾಗಿಸಿದ. ಒಟ್ಟಾರೆಯಾಗಿ ಸುರೇಶ್ ಗೌಡ ರೇಷ್ಮಾಳಿಗೆ ಬೆಂಗಳೂರಲ್ಲೇ ನೆಲೆ ಕಲ್ಪಿಸಲು ಶಕ್ತಿ ಮೀರಿ ಪ್ರಯತ್ನಿಸಿದ್ದ.



ಮನಗೋಳಿ

ಹೀಗೆ ಬೆಂಗಳೂರು ಸೇರಿದ ರೇಷ್ಮಾಳನ್ನು ಮತ್ತೆ ಬಿಜಾಪುರಕ್ಕೇ ಕರೆತಂದವನು ಖಾಸೀಂ ಫೀರ್ ವಾಲೀಕಾರ. ಈತ ಮಾನವ ಹಕ್ಕುಗಳ ಮಂಡಳಿ ಎಂಬ ಹೈಟೆಕ್ ಎತ್ತುವಳಿ ಸ್ಕೀಮೊಂದರ ಜನ್ಮದಾತ. ಸದರಿ ಸಂಘಟನೆಗೆ ಅಧ್ಯಕ್ಷನಿಂದ ಹಿಡಿದು ಎಲ್ಲವೂ ಇವನೆ. ಎಸ್.ಎಂ. ಕೃಷ್ಣ ಸರ್ಕಾರವಿದ್ದಾಗ ಶಿಕ್ಷಕರ ವರ್ಗಾವಣೆ ದಂಧೆಗೆ ಕೈಹಾಕಿದ್ದ ಖಾಸೀಂ ಡಿಡಿಪಿಐ ಮುಂತಾದ ಅಧಿಕಾರಿಗಳ ಸಹಿಗಳನ್ನು ಫೋರ್ಜರಿ ಮಾಡಲು ಹೋಗಿ ತಗುಲಿಕೊಂಡಿದ್ದ. ಈ ಘನ ಕಾರ್ಯಕ್ಕೆ ಆರು ತಿಂಗಳು ಜೈಲುವಾಸವನ್ನೂ ಅನುಭವಿಸಿದ್ದ.

ಇಂಥಾ ಪಾಖಡಾ ಆಸಾಮಿಯ ಬೆಂಬಲದೊಂದಿಗೆ ಮತ್ತೆ ಬಿಜಾಪುರಕ್ಕೆ ಅಟಕಾಯಿಸಿಕೊಂಡ ರೇಷ್ಮಾ ಅಧಿಕೃತವಾಗಿ ಜೆಡಿಎಸ್‌ಗೆ ತೂರಲು ಹವಣಿಸಲಾರಂಭಿಸಿದಳು. ಆಗ ಜೆಡಿಎಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಮಾಬರಿ ಎಂಬ ನಸೀಬು ಗೆಟ್ಟ ಆಸಾಮಿ ರೇಷ್ಮಾಳಿಗೆ ಪಕ್ಷದಲ್ಲೊಂದು ನೆಲೆ ಕೊಟ್ಟ. ಯಾವಾಗ ಪಕ್ಷವೊಂದರಲ್ಲಿ ನೆಲೆ ಸಿಕ್ಕಿತೋ ರೇಷ್ಮಾಳ ಮೆರೆದಾಟಗಳು ಮೇರೆಮೀರತೊಡಗಿದವು. ಕೆಲವೇ ಕೆಲ ಸಮಯದಲ್ಲಿ ಜಮೀರ್ ಅಹ್ಮದ್ ಹಾಗೂ ಸುರೇಶ್ ಗೌಡನ ತಲೆ ತೀಡಿ ತನಗೆ ನೆಲೆ ಕಲ್ಪಿಸಿದ ಮಾಬರಿಯನ್ನು ಪಕ್ಷದಿಂದಲೇ ಹೊರಗಟ್ಟಿದಳು. ಹಗಲಿರುಳೂ ದುಡಿದು ಪ್ರಾಮಾಣಿಕವಾಗಿ ಪಕ್ಷ ಸಂಘಟನೆಗೆ ಶ್ರಮಿಸಿದ್ದ ಮಾಬರಿ ವಿಧಿ ಇಲ್ಲದೆ ಬಿಎಸ್‌ಪಿ ಪಕ್ಷ ಸೇರಿಕೊಂಡ.



ಯತ್ನಾಳ್

ಈ ರೀತಿ ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನೇ ಪಕ್ಷ ಬಿಟ್ಟೋಡಿಸಿದ ರೇಷ್ಮಾ ಜಿಲ್ಲಾ ಜೆಡಿಎಸ್ ಮೇಲೆ ಸಂಪೂರ್ಣ ಹಿಡಿತ ಸಾಧಿಸಲು ತಹತಹಿಸತೊಡಗಿದಳು. ಜಿಲ್ಲಾ ನಾಯಕರ ತಲೆ ತುಳಿಯುವ ಕೆಲಸಕ್ಕೆ ಆಗಿನಿಂದಲೇ ಚಾಲನೆ ಸಿಕ್ಕಿತ್ತು, ನೋಡನೋಡುತ್ತಲೇ ಹೇಗೆ ಬೆಳೆದಳೆಂದರೆ, ಜಿಲ್ಲೆಯ ಅಧಿಕಾರಿಗಳನ್ನೆಲ್ಲಾ ಬೇಕಾದಂತೆ ಆಡಿಸಲಾರಂಭಿಸಿದಳು. ಕೆಲವೇ ಕೆಲವರ್ಷಗಳಲ್ಲಿ ಜೆಡಿಎಸ್ ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷೆಯಾಗಿದ್ದ ಲಕ್ಷ್ಮಿ ದೇಸಾಯಿ ಎಂಬಾಕೆಯನ್ನು ಓಡಿಸಿ ಆ ಜಾಗದಲ್ಲಿ ತಾನೇ ಮೆರೆದಾಡಲಾರಂಭಿಸಿದಳು.


ಅಂದಿನಿಂದ ಇಂದಿನವರೆಗೂ ಈಕೆ ಪಕ್ಷ ಸಂಘಟನೆ, ಕಾರ್ಯಕರ್ತರ ಬಗ್ಗೆ ಕಿಂಚಿತ್ತು ಗಮನ ಹರಿಸಿದ ಉದಾಹರಣೆಗಳಿಲ್ಲ, ರಾಜ್ಯಮಟ್ಟದ ನಾಯಕರ ಸಂಪರ್ಕ ಬಳಸಿ ಇತರೆ ನಾಯಕರನ್ನು ಹಣಿಯುವುದೇ ಈಕೆಯ ಫುಲ್‌ಟೈಂ ಡ್ಯೂಟಿ. ಮಾಜಿ ಸಚಿವ ಎಂ.ಸಿ. ಮನಗೋಳಿ ಸ್ವತಃ ಈಗ ಜೆಡಿಎಸ್ ಜಿಲ್ಲಾಧ್ಯಕ್ಷರಾಗಿದ್ದರೂ ರೇಷ್ಮಾಳ ಹಾರಾಟಕ್ಕೆ ಬ್ರೇಕ್ ಹಾಕಲಾಗುತ್ತಿಲ್ಲ, ಸದ್ಯ ಈಕೆಯ ವಿರುದ್ಧ ವಿಜುಗೌಡ ಪಾಟೀಲ ತೊಡೆ ತಟ್ಟಿದ್ದಾನೆ. ಇದರಿಂದ ಜೆಡಿಎಸ್ ಎರಡು ಹೋಳಾದ ಹೊರತಾಗಿ ಮತ್ಯಾವ ಉಪಯೋಗವೂ ಆದಂತಿಲ್ಲ,

ಈಕೆ ಪಕ್ಷಕ್ಕೆ ವಕ್ಕರಿಸಿದ ಕ್ಷಣದಿಂದಲೂ ಒಳಕಚ್ಚಾಟಗಳು ವಿರಾಟ್ ರೂಪ ಪ್ರದರ್ಶಿಸುತ್ತಿವೆ. ಇದು ಹೇಳಿಕೇಳಿ ಬಸನಗೌಡ ಪಾಟೀಲರ ತವರು ಜಿಲ್ಲೆ, ಆದರೆ ಅವರೂ ಕೂಡಾ ರೇಷ್ಮಾಳ ಅಟಾಟೋಪದ ಮುಂದೆ ಥಂಡಾ ಹೊಡೆಯುವಂತಾಗಿದೆ. ಅದಕ್ಕೆ ಕಾರಣ ರಾಜ್ಯ ನಾಯಕರೊಂದಿಗೆ ಆಕೆಗಿರುವ ನಿಕಟಸಂಪರ್ಕ.

ನಿಜವಾಗಿ ಹೇಳಬೇಕೆಂದರೆ ಜಿಲ್ಲೆಯ ಮಟ್ಟಿಗಿದು ಜೆಡಿಎಸ್ ಜನರಿಗೆ ಹತ್ತಿರಾಗಲು ಪರ್ವಕಾಲ. ಆದರೆ ಪಕ್ಷದ ಯಾರೊಬ್ಬರೂ ಆ ಬಗ್ಗೆ ಯೋಚಿಸುವ ಸ್ಥಿತಿಯಲ್ಲಿಲ್ಲ, ಯಾಕೆಂದರೆ ರೇಷ್ಮಾ ದಣಿವರಿಯದೆ ಕಂಡಕಂಡೋರ ಮೇಲೆ ಕತ್ತಿ ಬೀಸುತ್ತಿದ್ದಾಳೆ; ಇತರೆ ಮಂದಿ ತಪ್ಪಿಸಿಕೊಳ್ಳಲು ಪರದಾಡುತ್ತಿದ್ದಾರೆ!

ಮುಂದಿನ ಚುನಾವಣೆಯ ದೃಷ್ಟಿಯಿಂದಾದರೂ ರೇಷ್ಮಾ ಪಡೇಕನೂರಳ ಹಾರಾಟಕ್ಕೆ ಬ್ರೇಕ್ ಹಾಕುವ ದರ್ದು ಕುಮಾರಸ್ವಾಮಿಯ ಮೇಲಿದೆ. ಯಡ್ಡಿಯನ್ನು ಮಣಿಸುವ ಉಮೇದಿನಲ್ಲಿ ಇಂಥಾ ವಿಚಾರಗಳ ಬಗ್ಗೆ ಗಮನ ಹರಿಸದಿದ್ದರೆ ಜೆಡಿಎಸ್‌ಗೆ ಈಗಿರುವ ಸ್ಥಾನವೇ ಕಾಯಮ್ಮಾಗೋದು ಖಚಿತ. ಕುಮಾರಸ್ವಾಮಿ ಈ ಬಗ್ಗೆ ಯೋಚಿಸಲಿ.

• ಮಹಾಲಿಂಗಪ್ಪ ಆಲಬಾಳ



ಶಿವಾನಂದ

# ಹುಬ್ಬಳ್ಳಿ-ಧಾರವಾಡ: ಹುಸೇನ್ ಹೆಸರಲ್ಲಿ ಬಚಾವಾದ ಬಿಜೆಪಿ ಭಂಡರು!

...ಭಾರತ ದೇಶದ ಹಾದಿಬೀದಿಗಳಲ್ಲಿ ಕಲೆಯ ಗಂಧಗಾಳಿ ...ದ 'ವಿಮರ್ಶಕ'ರ ಹಾವಳಿ ವಿಪರೀತವಾಗಿದೆ. ಈ ...ಕೋಟಿ ಕಲಾವಿದ ಎಂ.ಎಫ್. ಹುಸೇನ್‌ರನ್ನು ಬದುಕಿರು... ಹೀನಾಯವಾಗಿ ಕಾಡಿಸಿತ್ತು, ಇದೀಗ ಆತನ ಸಮಾ... ಮೇಲೂ ವಿಕೃತ ತೆವಲು ತೀರಿಸಿಕೊಳ್ಳಹತ್ತಿವೆ. ...ದ್ದೇ ಸ್ಥಿತಿ ಹುಬ್ಬಳ್ಳಿ-ಧಾರವಾಡ ಮಹಾನಗರ ...ಕೆಯ ಸಾಮಾನ್ಯ ಸಭೆಯಲ್ಲೂ ವಿರಾಟ್ ರೂಪ ...ರ್ಶಿಸಿದೆ. ಇದಕ್ಕೆ ಕಾರಣವಾದದ್ದು ಕೇಸರಿ ಕಾಯಿಲೆ ...ತ ಬಿಜೆಪಿ ಭಂಡರ ದಂಡು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಕಳೆದ ... ನಡೆದ ಸಾಮಾನ್ಯ ಸಭೆ ಎಂದಿನಂತಿರಲಿಲ್ಲ, ಧಾರವಾಡದ ...ಯ ಗಾಂಧಿವಾದಿ ದಿವಂಗತ ಮಲ್ಲಪ್ಪ ನಿಡವಣಿ ...ೂ ಕಲಾವಿದ ಎಂ.ಎಫ್. ಹುಸೇನರಿಗೆ ಶ್ರದ್ಧಾಂಜಲಿ ...ಸಿದ ಬಳಿಕ ಸಭೆ ನಡೆಸುವುದಾಗಿ ತೀರ್ಮಾನವಾಗಿತ್ತು, ...ದ ಜನಾನುರಾಗಿ ಹಿರೀಕರಿಗೆ ಗೌರವ ಸಮರ್ಪಿಸು... ಹೊಸಾ ಪ್ರತೀತಿಯೇನಲ್ಲ, ಆದರೆ ಸಾಕ್ಷಾತ್ ಹೆಂಡ ...ನ ಕಚಿಯಂಥಾ ಬಿಜೆಪಿ ಸದಸ್ಯ ಶಿವಾನಂದ ಮುತ್ತಣ್ಣವರ ...ೇನ್‌ಗೆ ಶ್ರದ್ಧಾಂಜಲಿ ಅರ್ಪಿಸುವುದನ್ನು ಹೀನಾಮಾನ ...ರೋಧಿಸಿದ. ಅಸಂಬದ್ಧ ಮಾತುಗಳಿಂದ ಇಡೀ ಸಭೆಯನ್ನೇ ...ದ ಗುಡಾಣವಾಗಿಸಿದ. ಈ ಘನಕಾರ್ಯಕ್ಕೆ ಮಾಜಿ ...ಯರ್ ವೆಂಕಟೇಶ ಮೇಸ್ತ್ರಿಯೆಂಬ ಮುಖೇಡಿ ...ರ್ಣ ಸಾಥ್ ನೀಡಿದ.

ಸಾಮಾನ್ಯ ಸಭೆಯ ಆರಂಭದಲ್ಲಿಯೇ ಹಲವಾರು ...ದಲ, ಅಪಾಯದ ಮುನ್ಸೂಚನೆಗಳು ಧಾಳಾಗಿ ...ಆರಂಭಿಸಿದ್ದವು. ಇತಿಹಾಸದ ವಿಚಾರ ಒತ್ತಟ್ಟಿಗಿರಲಿ, ...ರಿಸ ವಿದ್ಯಮಾನಗಳನ್ನೇ ಅರ್ಥೈಸಿಕೊಳ್ಳಲಾರದ ...ಕೆ ವೆಂಕಟೇಶ ಮೇಸ್ತ್ರಿ ಗಾಂಧಿವಾದಿ ಮಲ್ಲಪ್ಪನವರಿಗೆ ...ಜಲಿ ಅರ್ಪಿಸುವುದಕ್ಕೂ ವಿರೋಧ ವ್ಯಕ್ತಪಡಿಸಿದ್ದ. ...ಸಂದರ್ಭದಲ್ಲಿ ಸಮಯಪ್ರಜ್ಞೆ ಮೆರೆದ ಹಿರಿಯ ಬಿಜೆಪಿ ... ಪಾಂಡುರಂಗ ಪಾಟೀಲ, ವೀರಣ್ಣ ಸವಡಿ ಮತ್ತಿತರರು ...ತಿ ತಿಳಿಗೊಳಿಸಿದರು. ಇದರಿಂದಾಗಿ ಮಲ್ಲಪ್ಪನವರಿಗೆ ...ಜಲಿ ಅರ್ಪಿಸುವ ಕಾರ್ಯಕ್ರಮ ನಿರ್ವಿಘ್ನವಾಗಿ ...ದಿತು.

ಇದಾದ ಕೆಲಹೊತ್ತಿನಲ್ಲಿ ಸಭೆಗೆ ಎಂಟ್ರಿ ಕೊಟ್ಟವನು ಹುಬ್ಬಳ್ಳಿಯ 57 ನೇ ವಿಭಾಗದ ಬಿಜೆಪಿ ಕಾರ್ಪೊರೇಟರ್ ಶಿವಾನಂದ ಮುತ್ತಣ್ಣವರ. ಈ ಸಮಯಕ್ಕೆ ಸರಿಯಾಗಿ ಎಂ.ಎಫ್. ಹುಸೇನರಿಗೆ ಶ್ರದ್ಧಾಂಜಲಿ ಸಲ್ಲಿಸಲು ಅಣಿಗೊಳ್ಳಲಾಗುತ್ತಿತ್ತು. ಈ ವಿಚಾರ ಪ್ರಸ್ತಾಪವಾಗುತ್ತಲೇ ಕಮಂಗಿಯಂತೆ ಮೈಕ್ ಕಸಿದುಕೊಂಡು ಮಾತಾಡಲು ಶುರುವಿಟ್ಟ ಶಿವಾನಂದ ಹರುಕು ಮುರುಕು ಆರೆಸ್ಸೆಸ್ ಅಜೆಂಡಾಗಳನ್ನು ಓತಪ್ರೋತವಾಗಿ ಉದುರಿಸಿದ. ಹುಸೇನರನ್ನು ಹಿಂದೂ ವಿರೋಧಿ, ಮೋಸ್ಟ್ ವಾಂಟೆಡ್ ಕ್ರಿಮಿನಲ್ ಅಂತೆಲ್ಲಾ ಜರಿದು ವಿಕೃತ ಖುಷಿ ಅನುಭವಿಸಿದ. ಆದರೆ ಯಾರೊಬ್ಬರೂ ಇದನ್ನು ನೇರವಾಗಿ ವಿರೋಧಿಸುವಂಥ ಎದೆಗಾರಿಕೆ ತೋರಲಿಲ್ಲ, ಶಿವಾನಂದನ ಅಶ್ಲೀಲ ಮಾತಿನ ಧಾಟಿಗೆ ಇರುಸುಮುರುಸುಗೊಂಡ ಆಡಳಿತ ಪಕ್ಷದ ಹಿರಿಯರನೇಕರು ಹೊರ ನಡೆದರೇ ವಿನಃ ಮೊಟಕಿ ಬುದ್ಧಿ ಹೇಳುವ ಗೋಜಿಗೆ ಹೋಗಲಿಲ್ಲ. ಮೇಯರ್ ಪೂರ್ಣ ಪಾಟೀಲ್ ಅಂತೂ ಬೆದರಿದ ಗುಬ್ಬಚ್ಚಿಯಂತೆ ಏನೇನೋ ತೊದಲಿ ಸಭೆ ಮುಂದೂಡಿ ಬಚಾವಾದರು.





ಸಭೆಯಲ್ಲಿ ಧರಣಿ-ದಾಂಧಲೆ

ಸೂಕ್ಷ್ಮವಾಗಿ ಗಮನಿಸಿದರೆ ಆಡಳಿತ ಪಕ್ಷ ಬಿಜೆಪಿಯ ಗೂಂಡಾಗಳ ಆರ್ಭಟದ ಹಿಂದೆ ದೊಡ್ಡದೊಂದು ಸಂಚು ಅಡಗಿರುವುದು ಮನದಟ್ಟಾಗುತ್ತದೆ. ಇದೊಂದು ಘಟನೆ ನಡೆಯದೇ ಹೋಗಿದ್ದರೆ ಮೊನ್ನೆ ನಡೆದ ಸಭೆಯಲ್ಲಿ ಇಡೀ ಆಡಳಿತ ಪಕ್ಷ ಬೆತ್ತಲಾಗುವುದರಲ್ಲಿತ್ತು, ಅದರಿಂದ ತಪ್ಪಿಸಿಕೊಳ್ಳಲೆಂದೇ ಪಾಲಿಕೆಯ ಆಡಳಿತ ಪಕ್ಷ ಇಂತಹುದೊಂದು ಸಂಚು ಹೆಣೆದಿರುವುದು ಸ್ಪಷ್ಟವಾಗುತ್ತದೆ.

ಹುಬ್ಬಳ್ಳಿ-ಧಾರವಾಡ ನಗರಗಳಾದ್ಯಂತ ಹಲವಾರು ರೀತಿಯ ಅಕ್ರಮಗಳು ಅವ್ಯಾಹತವಾಗಿ ನಡೆಯುತ್ತಿವೆ. ಅಂಥಾ ಅಡ್ನಾಡಿ ಕೆಲಸಗಳನ್ನೆಲ್ಲಾ ಆಡಳಿತಾರೂಢ ಬಿಜೆಪಿ ಮಂದಿಯೇ ಪೊರೆಯುತ್ತಿದ್ದಾರೆ. ಈ ಅವಳಿನಗರಗಳಲ್ಲಿ ಪಾರ್ಕಿಂಗ್ ಜಾಗಗಳನ್ನೇ ನುಂಗಿ ತಲೆ ಎತ್ತುತ್ತಿರುವ ಕಟ್ಟಡಗಳೂ ಅತಿಯಾಗಿವೆ. ಸದ್ಯ ಕೆಎಲ್‌ಇ ಶಿಕ್ಷಣ ಸಂಸ್ಥೆ ವಿದ್ಯಾನಗರದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳ ಮಾಲೀಕತ್ವ ಹೊಂದಿದೆ. ಈ ಮೂರು ವರ್ಷದ ಅವಧಿಯಲ್ಲೇ ಸರಿಸುಮಾರು 38 ಕಟ್ಟಡಗಳು ಈ ಸಂಸ್ಥೆಯ ವತಿಯಿಂದ ತಲೆ ಎತ್ತಿವೆ. ಇದರಲ್ಲಿ ಪಾಲಿಕೆಗೆ 8 ಕೋಟಿ 80 ಲಕ್ಷದಷ್ಟು ಹಣ ಸಂದಾಯ ಮಾಡುವುದು ಬಾಕಿ ಇದೆ. ಇಂಥಾ ಅಕ್ರಮ ಸಂಸ್ಥೆಗೆ ಅಧ್ಯಕ್ಷನಾಗಿರುವಾತ ಪ್ರಭಾಕರ ಕೋರೆ. ನಿರ್ದೇಶಕ ಶಂಕ್ರಣ್ಣ ಮಸವಳ್ಳಿ. ಇವರು ಆಳುವ ಪಕ್ಷದವರೇ ಆದುದರಿಂದ ಯಡ್ಡಿಗೆ ದುಂಬಾಲು ಬಿದ್ದು ಯಾವುದೇ ರೀತಿಯ ಕ್ರಮ ಕೈಗೊಳ್ಳದಂತೆ ಪಾಲಿಕೆ ಆಯುಕ್ತರ ಮೇಲೆ ಒತ್ತಡ ಹೇರಿಸಿ ಬಚಾವಾಗಿದ್ದಾರೆ.

ಈಗಾಗಲೇ ಈ ವಿಚಾರ ವಿರೋಧ ಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ಪಾಲಿಗೆ ಅಸ್ತ್ರದಂತೆ ಸಿಕ್ಕಿದೆ. ಮೊನ್ನೆ ನಡೆದ ಸಾಮಾನ್ಯ ಸಭೆಯಲ್ಲೂ ಈ ವಿಚಾರವನ್ನೆತ್ತಲು ಎರಡೂ ಪಕ್ಷದ ಸದಸ್ಯರು ತೀರ್ಮಾನಿಸಿಕೊಂಡು ಹೊರಟಿದ್ದರು. ಕಾಂಗ್ರೆಸ್‌ನ ದೀಪಕ್ ಚಿಂಚೋರೆ, ಗಣೇಶ ಟಗರಗುಂಟಿ, ಜೆಡಿಎಸ್‌ನ ಅಲ್ತಾಫ್ ಕಿತ್ತೂರ ಮೊದಲಾದವರು ಈ ಅಕ್ರಮದ ಬಗ್ಗೆ ಇಂಚಿಂಚು ಮಾಹಿತಿ ಇಟ್ಟುಕೊಂಡು ಬಿಜೆಪಿಗೆ ಅಟಕಾಯಿಸಿಕೊಳ್ಳಲು ರೆಡಿಯಾಗಿದ್ದರು. ಈ ವಿಚಾರ ಬಿಜೆಪಿ ಮಂದಿಗೂ ಗೊತ್ತಿತ್ತು, ಹಾಗೊಂದು ವೇಳೆ ಸದರಿ ವಿಚಾರ ಚರ್ಚೆಗೆ ಬಂದರೆ ತೀವ್ರ ಮುಖಭಂಗ ಗ್ಯಾರಂಟಿ ಎಂಬುದೂ ತಿಳಿದಿತ್ತು, ಎಂ.ಎಫ್. ಹುಸೇನರ ವಿರುದ್ಧದ ಅಲೆಯಲ್ಲಿ ಬಿಜೆಪಿ ಮಂದಿ ಅಂತೂ ಪಾರಾಗಿದ್ದಾರೆ.

ಆದರಿದು ತಾತ್ಕಾಲಿಕ ಜೀವ ದಾನವಷ್ಟೆ. ಆಡಳಿತಾರೂಢ ಬಿಜೆಪಿಯ ಮಾನ ಹೋಗಲು ಬೇಕಾದಂಥ ಮೆಟೀರಿಯಲ್ಲುಗಳೆಲ್ಲ ಅವಳಿ ನಗರದ ಹಾದಿಬೀದಿಗಳಲ್ಲಿ ಪಿತಗುಡುತ್ತಿವೆ. ಜನರಿಗಿಲ್ಲಿ ಕುಡಿಯುವ ನೀರೂ ಸರಿಯಾಗಿ ಸಿಗುತ್ತಿಲ್ಲ, ರಸ್ತೆಗಳ ಸ್ಥಿತಿಯಂತೂ ಹೇಳಿ ಪ್ರಯೋಜನವಿಲ್ಲ, ಹಾಗಂತ ಅಭಿವೃದ್ಧಿ ಕೆಲಸಗಳ ಹೆಸರಲ್ಲಿ ಕೋಟಿ ಕೋಟಿ ಹಣ ಹರಿದುಬರುತ್ತಿದೆ. ಆದರೆ ಅಭಿವೃದ್ಧಿ ಕೆಲಸಗಳು ಮಾತ್ರ ಕಷ್ಟಪಟ್ಟು ಹುಡುಕ್ಯಾಡಿದರೂ ಕಣ್ಣಿಗೆ ಬೀಳುವುದಿಲ್ಲ, ಬಹುತೇಕ ಕಾರ್ಪೊರೇಟರ್‌ಗಳು ಪರ್ಸೆಂಟೇಜ್ ವ್ಯವಹಾರದಲ್ಲೇ ಬ್ಯುಸಿಯಾಗಿ ಹೋಗಿದ್ದಾರೆ.


ಇಂಥಾ ನೂರಾರು ಹುಳುಕುಗಳನ್ನು ಎಂ.ಎಫ್. ಹುಸೇನ್‌ಗೆ ಅವಮಾನಿಸುವ ಮೂಲಕ ಬಿಜೆಪಿ ಮಂದಿ ಮುಚ್ಚಿಹಾಕಿದ್ದು ನಾಚಿಕೆಗೇಡಿನ ವಿಚಾರ. ಇದಕ್ಕೆ ಕಾರಣನಾದ ಶಿವಾನಂದನಂಥವರ ಬುಡಕ್ಕೊದ್ದು ಹೊರಗಟ್ಟಬೇಕಿದ್ದ ಕಾಂಗ್ರೆಸ್-ಜೆಡಿಎಸ್‌ನ ಮಂದಿಯ ಅಸಹಾಯಕತೆ ಅದಕ್ಕಿಂತಲೂ ಅಸಹ್ಯ.

• ಹುಬ್ಬಳ್ಳಿಯಾಂವ

## ಶಿವಾನಂದ 'ಎತ್ತುವಳಿ'!

ಎಂ.ಎಫ್. ಹುಸೇನ್ ವಿರುದ್ಧ ಹರಿಹಾಯ್ದ ಶಿವಾನಂದ ಮುತ್ತಣ್ಣವರ ಪಕ್ಕಾ ಗೂಂಡಾ ಮತ್ತು ಅಪ್ಪಟ ಎತ್ತುವಳಿ ಗಿರಾಕಿ. ಈತನ ಕೋಡಂಗಿತನಗಳು ಹುಬ್ಬಳ್ಳಿ-ಧಾರವಾಡದ ಮಂದಿಗೆ ಹೊಸದೇನಲ್ಲ, ಕಾಸು ಸಿಗುತ್ತದೆಂದರೆ ಎಂಥಾ ದುಷ್ಟ ಕೆಲಸಕ್ಕೂ ಹೇಸದ ಮುತ್ತಣ್ಣವರ ಈ ಹಿಂದೆ ತನ್ನದೇ ವಾರ್ಡಿನಲ್ಲಿರುವ ವೃದ್ಧ ದಲಿತ ಮಹಿಳೆಯ ಮನೆ ಕೆಡ್ಡು ಕೆಡವಿ ಕೇಸು ಜಡಿಸಿಕೊಂಡು ನಾಪತ್ತೆಯಾಗಿದ್ದ. ಈ ಪ್ರಕರಣದಲ್ಲಿ ಜಾತಿ ವಿಚಾರ ಮುಂದೆ ಮಾಡಿ ಈಶ್ವರಪ್ಪನ ಆಶೀರ್ವಾದ ಪಡೆದು ಬಚಾವಾಗಿದ್ದ.

ಕೋರ್ಟ್ ಬಳಿ ಸಂಗೊಳ್ಳಿ ರಾಯಣ್ಣನ ಪುತ್ಥಳಿ ಸ್ಥಾಪನೆ ವಿಚಾರದಲ್ಲೂ ವಿನಾಕಾರಣ ಮೂಗು ತೂರಿಸಿದ್ದ ಶಿವಾನಂದ ಎರಡು ಕೋಮುಗಳ ನಡುವೆ ದೊಡ್ಡ ಗಲಾಟೆಯನ್ನೇ ಸೃಷ್ಟಿಸಿದ್ದ. ಇತ್ತೀಚೆಗೆ ಚಕ್ಕ-ಬುಕ್ಕ ಚಿತ್ರದ ಹೆಸರಿನ ಸಂಬಂಧವೂ ಗಲಾಟೆ ಎಬ್ಬಿಸಿ ಭರ್ಜರಿ ಕಮಾಯಿ ನಡೆಸಿದ್ದ. ಇದಲ್ಲದೆ ಕ್ರಿಮಿನಲ್‌ಗಳ ನಡುವೆ ರಾಜಿ ಪಂಚಾಯ್ತಿ ನಡೆಸಿ ಕಮಾಯಿಸುವುದು ಈತನ ದಿನನಿತ್ಯದ ಕೈಂಕರ್ಯ. ಒಟ್ಟಾರೆಯಾಗಿ ಹೇಳಬೇಕೆಂದರೆ ಎಲ್ಲಾ ವಿಚಾರಗಳಲ್ಲೂ ಈತ ಅಂತಿಮವಾಗಿ ಎತ್ತುವಳಿ ನಡೆಸಿ ಕಿಸೆ ತುಂಬಿಸಿಕೊಳ್ಳುತ್ತಾನೆ!



## ಕರುಣಾಕರ ರೆಡ್ಡಿಯ ಟ್ರಾನ್ಸ್‌ಫರ್ ರಾಬರಿ


# ಕಳ್ಳನೇ ಕಂದಾಯ ಮಂತ್ರಿ

• ರಾ.ಸೋಮನಾಥ್


**ತಹಶೀಲ್ದಾರ್‌ಗೆ 50, ಸಬ್‌ರಿಜಿಸ್ಟ್ರಾರ್‌ಗೆ 50, ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ 10**

ಹಡಬೆ ದುಡ್ಡು ಹುಟ್ಟುತ್ತದೆಯೆಂದರೆ ಹೆಣ ಕೂಡ ಬಾಯಿ ಬಿಡುವಾಗ ಗಣಿರೆಡ್ಡಿಗಳಾದರೇನು? ಚಡ್ಡಿ ದಣಿಗಳಾದರೇನು?

ಗಣಿಲೂಟಿಯಲ್ಲೇ ಹತ್ತು ತಲೆಮಾರು ಕೂತು ಉಣ್ಣುವಷ್ಟು ಕಮಾಯಿಸಿರುವ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಗೆ ಅದೆಂಥಾ ಧನಪಿಶಾಚಿ ಹಿಡಿದಿದೆ ಎಂಬುದಕ್ಕೆ ಸದ್ಯ ಕಂದಾಯ ಇಲಾಖೆಯಲ್ಲಿ ಹೆಡೆಯೆತ್ತಿರುವ ಟ್ರಾನ್ಸ್‌ಫರ್ ಹಾವಳಿಯೇ ಸಾಕು. ಬೆಂಗಳೂರಿನ ಯಾವುದೇ ಫಲವತ್ತು ಸಬ್ ರಿಜಿಸ್ಟ್ರಾರ್ ಹುದ್ದೆಗೆ ಕನಿಷ್ಠ 30ರಿಂದ 50 ಲಕ್ಷ, ಪ್ರತಿ ಸಬ್‌ರಿಜಿಸ್ಟ್ರಾರ್ ಕಚೇರಿಗೆ ಯಾರೇ ಪ್ರಥಮ ದರ್ಜೆ ಗುಮಾಸ್ತನಿಗೂ ಮೂರರಿಂದ ಐದು ಲಕ್ಷ, ಅದೇ ದ್ವಿತೀಯ ದರ್ಜೆ ಗುಮಾಸ್ತನಾದರೆ ಕಡ್ಡಾಯವಾಗಿ 2 ಲಕ್ಷ, ಬೆಂಗಳೂರಿನ ಯಾವುದೇ ತಾಲ್ಲೂಕು ಕಚೇರಿಗೆ ತಹಶೀಲ್ದಾರ್ ಆಗಿ ಬರಬೇಕೆಂದರೆ ಮಿನಿಮಮ್ 30 ಲಕ್ಷ, ಸ್ಪೆಷಲ್ ತಹಶೀಲ್ದಾರ್ ಕ್ಯಾಟಗರಿಗೆ 25 ಲಕ್ಷ, ಶಿರಸ್ತೇದಾರ್ ಹುದ್ದೆಗೆ ಐದು ಲಕ್ಷ, ಗ್ರಾಮ ಲೆಕ್ಕಿಗನಾದರೆ 3ರಿಂದ 5 ಲಕ್ಷ, ರೆವಿನ್ಯೂ ಇನ್ಸ್‌ಪೆಕ್ಟರ್ ಹುದ್ದೆಗೆ 5ರಿಂದ 10 ಲಕ್ಷ, ಸರ್ವೆಯರ್‌ಗಳ ವರ್ಗಾವರ್ಗಿಯಲ್ಲೂ ರೊಕ್ಕ ಹೀಗೆ ಈತನಕ ಆಳಿಹೋದ ಎಲ್ಲಾ ಕಂದಾಯ ಮಂತ್ರಿಗಳ ಎತ್ತುವಳಿ ದಾಖಲೆಯನ್ನು ಕೇವಲ ಎರಡೇ ವರ್ಷದಲ್ಲಿ ಮುರಿದ ಕೀರ್ತಿ ಕರುಣಾಕರ ರೆಡ್ಡಿಗೇ ಸಲ್ಲಬೇಕು.



ಶಿವಕುಮಾರ್



ಎಡಿಸಿ ಮಲ್ಲಯ್ಯ

ಕಂದಾಯ ಕಾಯ್ದೆ, ಆಡಳಿತಾತ್ಮಕ ಜಾಣ್ಮೆ, ಸಾಮಾನ್ಯ ಜ್ಞಾನದ ವಿಷಯದಲ್ಲಿ ಕರುಣಾಕರ ರೆಡ್ಡಿ ಪೆದ್ದ. ತಮ್ಮ ಜನಾರ್ದನ್ ರೆಡ್ಡಿಗೆ ಹೋಲಿಸಿದರೆ ಕ್ರಿಮಿನಲ್ ಕಲೆಗಾರಿಕೆಯಲ್ಲೂ ದಡ್ಡ. ಖತರ್‌ನಾಕ್ ತಮ್ಮನ ಅಣ್ಣ ಎಂಬುದನ್ನು ಬಿಟ್ಟರೆ ಕರುಣಾಕರ ರೆಡ್ಡಿ ಕಂದಾಯ ಮಂತ್ರಿಯಾಗಿ ಸಾಧಿಸಿದ್ದು ವಿನಾಕಾರಣ ಹಲ್ಲು ಕಿರಿಯುವುದು, ತನ್ನ ದೈತ್ಯಕಾಯದ ಪೋಜು ಕೊಡುವುದು ಮತ್ತು ಆಗಾಗ ಪತ್ರಕರ್ತರನ್ನು ಕರೆದು ಪಾರ್ಟಿ ಕೊಟ್ಟು, ಆಕರ್ಷಕ ಗಿಫ್ಟು ಕೊಡುವುದು ಮಾತ್ರ.

### ಸ್ಮಗ್ಲರ್ ಶರವಣ

ಮಿಕ್ಕಂತೆ ಮನೆ ಹೊಕ್ಕಿ ಕೂತನೆಂದರೆ ಜಪ್ಪಯ್ಯ ಎಂದರೂ ಅಲ್ಲಾಡದ ಕರುಣಾಕರ ರೆಡ್ಡಿ ತನ್ನ ಇಡೀ ಇಲಾಖೆಯನ್ನು, ಮಂತ್ರಿಗಿರಿಯನ್ನು ಒಪ್ಪಿಸಿರುವುದು ಶರವಣ ಎಂಬ ತಮಿಳುನಾಡಿನ ವಂಚಕನ ಕೈಗೆ. ಹೆಸರಿಗೆ ಕರುಣಾಕರ ರೆಡ್ಡಿ ಮಂತ್ರಿಯಾದರೂ ಕಂದಾಯ ಕಮೀಷನರಾಗಿ ಅಶೋಕ್‌ಕುಮಾರ್ ಮನೋಲಿಯಂಥ ಹಿರಿಯ ಐಎಎಸ್ ಇದ್ರೂ, ಸರ್ವೆ ಇಲಾಖೆಗೆ ವಿ.ಮಂಜುಳಾರಂಥ ಪ್ರಾಮಾಣಿಕ ಅಧಿಕಾರಿಣಿ ಮುಖ್ಯಸ್ಥೆಯಾಗಿದ್ರೂ 40ಕ್ಕೂ ಅಧಿಕ ಐಎಎಸ್‌ಗಳೂ ನೂರಾರು ಕೆಎಎಸ್‌ಗಳೆಲ್ಲ ಇದ್ದಾಗಲೂ ಇಲಾಖೆಯ ಪ್ರತಿಯೊಂದು ವರ್ಗಾವಣೆ, ನೇಮಕಾತಿ, ಖರೀದಿ, ಶಿಸ್ತು ಕ್ರಮ, ಡೀಲು... ಇತ್ಯಾದಿಗಳನ್ನೆಲ್ಲಾ ನಿರ್ಧರಿಸುವವನು ಚೇಲಾ ಶರವಣ!

ಹಿಂದೆ ರೆಡ್ಡಿಗ್ಯಾಂಗ್ ಅದಿರು ಕದ್ದು ಸಾಗಿಸುತ್ತಿದ್ದಾಗ ನಕಲಿ ಪರ್ಮಿಟ್ಟನ್ನು ಬಳಸಿ ಅದಿರು ಸ್ಮಗ್ಲಿಂಗ್ ಮಾಡಿಕೊಂಡಿದ್ದ ತಮಿಳುನಾಡು ಮೂಲದ ಈತನದು ಬಳ್ಳಾರಿಯಲ್ಲಿ ಟ್ರಾನ್ಸ್‌ಪೋರ್ಟಿಂಗ್ ದಂಧೆ. ಜಿಎಸ್‌ಆರ್ ಲಾಜಿಸ್ಟಿಕ್ಸ್ ಹೆಸರಲ್ಲಿ ಅದಿರು ಕದ್ದು ಲಾರಿಗಳಲ್ಲಿ ಹೊರರಾಜ್ಯಕ್ಕೆ ಸಾಗಿಸುವುದನ್ನೇ ಕಾಯಕ ಮಾಡಿಕೊಂಡಿದ್ದ ಶರವಣ ಈ ಕಾರಣಕ್ಕೆ ಕರುಣಾಕರ ರೆಡ್ಡಿಗೆ ಪರಮಾಪ್ತನಾದ. ಈತನ ವಿರುದ್ಧ ಬಳ್ಳಾರಿಯ ಕೋಲ್ ಬಜಾರ್, ತೋರಣಗಲ್, ಹೊಸಪೇಟೆ ಪೊಲೀಸ್ ಠಾಣೆಗಳಲ್ಲಿ ಅರ್ಧಡಜನ್ ಕ್ರಿಮಿನಲ್ ಕೇಸುಗಳಿವೆ. ತಮಿಳುನಾಡಿನ ರೌಡಿ ಗ್ಯಾಂಗ್‌ಗಳ ಜೊತೆಗೂ ಲಿಂಕಿದೆ.

ಇವತ್ತು ಇದೇ ಶರವಣ ರಾಜ್ಯದ ಕಂದಾಯ ಇಲಾಖೆಗೆ ಅನಭಿಷಕ್ತ ಸಾಮ್ರಾಟ. ಗೆಳೆಯ ಕರುಣಾಕರ ರೆಡ್ಡಿ ಮಂತ್ರಿಯಾದಾಗಿನಿಂದ ಯಾವ ಸಬ್ ರಿಜಿಸ್ಟ್ರಾರ್ ಕಚೇರಿಗೆ ಎಷ್ಟು ಕಿತ್ತು ಯಾರನ್ನು ತರಬೇಕು, ಯಾವ ತಾಲ್ಲೂಕು ಕಚೇರಿಗೆ ತಹಶೀಲ್ದಾರ್ ಆಗಿ ಯಾವ ರೇಟಿಗೆ ಯಾರನ್ನು ತರಬೇಕು, ಯಾವ ಗುಮಾಸ್ತರಿಂದ ಎಷ್ಟು ವಸೂಲಿ ಮಾಡಬೇಕು. ಇದ್ದ ಜಾಗದಲ್ಲೇ ಇರಬೇಕೆಂದರೆ ಎಷ್ಟು, ಲಾಭದ ಹುದ್ದೆಗೆ ಬರಬೇಕೆಂದರೆ ಅದಕ್ಕೆಷ್ಟು ಇತ್ಯಾದಿ ಪ್ರತಿಯೊಂದು ಹುದ್ದೆಯನ್ನೂ ತನ್ನ ಅಪ್ಪನ ಆಸ್ತಿಯೆಂಬಂತೆ ವ್ಯಾಪಾರಕ್ಕೆ ಇಟ್ಟು ಕುಂತಿದ್ದಾನೆ ಪಾತಕಿ ಶರವಣ.



ಐಎಎಸ್ ಪ್ರಭಾಕರ್



ವೆಂಕಟರಾಜು

### ಬ್ರೋಕರ್‌ಗಳ ಹಿಂಡು


ಶರವಣ ಹೇಳಿದ್ದೇ ಕರುಣಾಕರ ರೆಡ್ಡಿಗೆ ವೇದವಾ[illegible] ಆತನ ನಿರ್ಧಾರವೇ ಅಂತಿಮ. ಆತ ಹೇಳಿದಲ್ಲಿಗೆ ಕರುಣಾಕ[illegible] ರೆಡ್ಡಿ ಸಹಿ ಹಾಕುತ್ತಾನೆ. ಹಾಗಂತ ಈತ ನೇರವಾಗಿ ಡೀಲಿಗಿ[illegible] ಯುವುದಿಲ್ಲ, ಅದಕ್ಕೆಂದು ಕಂದಾಯ ಇಲಾಖೆಯಲ್ಲಿ[illegible] ಏಜೆಂಟರಿದ್ದಾರೆ. ಈ ಪೈಕಿ ದೊಡ್ಡ ಬ್ರೋಕರ್‌ನಂತಿರುವವ[illegible] ಸದ್ಯ ಕಂದಾಯ ಇಲಾಖೆ ಅಧೀನ ಕಾರ್ಯದರ್ಶಿಯಾಗಿರು[illegible] ಟಿ.ಕೆ.ರಾಮಚಂದ್ರ. ಜೊತೆಗೆ ಸಬ್‌ರಿಜಿಸ್ಟ್ರಾರ್ ಶಾಂತಮೂರ್ತಿ[illegible] ನಿವೃತ್ತ ಸಬ್‌ರಿಜಿಸ್ಟ್ರಾರ್ ಮರಿಗೌಡ, ಕರುಣಾಕರ ರೆಡ್ಡಿಯ[illegible] ಪಿಎಗಳಾದ ಪರಮೇಶ್ ಮತ್ತು ಶರತ್, ಸದ್ಯ ವರ್ತೂರ[illegible] ಸಬ್‌ರಿಜಿಸ್ಟ್ರಾರ್ ಆಗಿರುವ ಧವಳೇಶ್ವರ್, ವಿಲೇಜ[illegible] ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ಗ[illegible] ವರ್ಗಾವರ್ಗಿಗೆ ಏಜೆಂಟ್‌ನಾಗಿರುವ ನಗರ ಜಿಲ್ಲಾಧಿಕಾ[illegible] ಕಚೇರಿಯ ಆರ್‌ಹೆಚ್‌ಎ ಕೃಷ್ಣಯ್ಯ ಮುಂತಾದ ಸಬ[illegible] ಏಜೆಂಟರು, ದಲ್ಲಾಳಿಗಳ ಹಿಂಡೇ ಕಂದಾಯ ಇಲಾಖೆಯ[illegible] ತಲೆಯೆತ್ತಿದೆ. ಇವರಷ್ಟೇ ಅಲ್ಲದೇ ಹಿಂದೊಮ್ಮೆ ಕಂದಾಯ ಮಂತ್ರಿಗೆ ಆಪ್ತ ಕಾರ್ಯದರ್ಶಿಯಾಗಿದ್ದ[illegible] ಸದ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ನಿರ್ದೇಶಕನಾಗಿರುವ ಪಿ.ಕೆ[illegible] ಸುಬ್ಬಯ್ಯ ಮತ್ತು ಈತನ ತಂಗಿ ಗಂ[illegible] ಹಾಗೂ ಹಾಲೀ ನಗರ ಜಿಲ್ಲಾಧಿಕಾ[illegible] ಅಯ್ಯಪ್ಪ ಇತ್ಯಾದಿ ಕಂದಾಯ ಇಲಾಖೆಯ ಅತಿರಥರಿಂದ ಹಿಡಿದು ಯಃಕಶ್ಚಿತ್‌ಗಳ[illegible] ವರೆಗೂ ಟ್ರಾನ್ಸ್‌ಫರ್ ಬ್ರೋಕರ್‌ಗಳಾಗಿ ರೂಪುಗೊಂಡಿದ್ದಾರೆ.

ಇಲ್ಲಿಗೆ ವರ್ಷದ ಹಿಂದಷ್ಟೆ ನೂರೈವತ್ತು[illegible] ಮಂದಿ ತಹಶೀಲ್ದಾರ್‌ಗಳ ಎತ್ತಂಗಡಿ ಮಾಡಿ[illegible] ಕೈತುಂಬಾ ಕಮಾಯಿಸಿದ್ದ ಕರುಣಾಕರ ರೆಡ್ಡಿ[illegible] ಈಗ ಜುಲೈ 8ಕ್ಕೆ ಮತ್ತೆ ನೂರು ಮಂದಿ ತಹಶೀಲ್ದಾರ್‌ಗಳ[illegible] ವರ್ಗಾವರ್ಗಿಗೆ ಕೈ ಹಾಕಿದ್ದಾರೆ. ಕಳೆದ ಮೇ 19ರಂದು[illegible] ನಡೆದ 15 ಮಂದಿ ದ್ವಿತೀಯ ದರ್ಜೆ ಸಹಾಯಕರು, 46 ಮಂದಿ ಪ್ರಥಮ ದರ್ಜೆ ಗುಮಾಸ್ತರು, 64 ಮಂದಿ ಸಬ್‌ರಿಜಿಸ್ಟ್ರಾರ್‌ಗಳು ಮತ್ತು 5 ಮಂದಿ ಜಿಲ್ಲಾ ನೋಂದಣಾಧಿಕಾರಿ[illegible] ಪಟ್ಟಿಯೊಂದೇ 10 ಕೋಟಿಯ ಡೀಲು[illegible] ಇದಾಗಿ ತಿಂಗಳಿಗೇ ಅಂದರೆ 2011ರ[illegible] ಜೂನ್ 29ರಂದು ಮತ್ತೊಂದು ರೌಂಡ್ ವರ್ಗಾವಣೆಗೆ ಕೈಯಿಟ್ಟ ಕರುಣಾಕರ ರೆಡ್ಡಿ[illegible] ಮತ್ತೆ 20 ಮಂದಿ ಸಬ್‌ರಿಜಿಸ್ಟ್ರಾರ್‌ಗಳು[illegible] 14 ಮಂದಿ ಪ್ರಥಮ ದರ್ಜೆ ಗುಮಾಸ್ತರು[illegible] ಮತ್ತು 5 ಮಂದಿ ದ್ವಿತೀಯ ದರ್ಜೆ ಗುಮಾಸ್ತರನ್ನು ಎತ್ತಂಗಡಿ ಮಾಡಿದ್ದಾರೆ.

ಈ ರೀತಿ ಕರುಣಾಕರ ರೆಡ್ಡಿಗೆ ಕಾಸು ಕೊಟ್ಟು ಆತನ ಚೇಲಾ ಶರವಣನ ಹೊಟ್ಟೆ ತುಂಬಿಸಿ ಆಯಕಟ್ಟಿನ ಹುದ್ದೆ ಹಿಡಿದ ಸಬ್‌ರಿಜಿಸ್ಟ್ರಾರ್‌ಗಳ[illegible] ಹಿನ್ನೆಲೆ, ನಡೆಸಿದ ವ್ಯವಹಾರ, ಸದ್ಯ ಕಮಾಯಿಸುತ್ತಿರುವ[illegible] ವೈಖರಿಯನ್ನು ಗಮನಿಸಿದರೆ ಕಂದಾಯ ಇಲಾಖೆಯೆಂಬುದು ಹೇಗೆ ರೆಡ್ಡಿ ಗ್ಯಾಂಗಿಗೆ ಫಲವತ್ತಾದ ಗಣಿಯಂತಾಗಿದೆ ಯೆಂಬುದು ಮನದಟ್ಟಾಗುತ್ತದೆ.

## ಡೀಸಿ ಅಯ್ಯಪ್ಪನೂ ಬಾಮೈದ ಸುಬ್ಬಯ್ಯನೂ...!

ಸದ್ಯ ಬೆಂಗಳೂರು ನಗರ ಜಿಲ್ಲೆಗೆ ಡೀಸಿಯಾಗಿರುವ ಅಯ್ಯಪ್ಪ ಮತ್ತು ಅವರ ಬಾಮೈದ ಸುಬ್ಬಯ್ಯ ಇಬ್ಬರೂ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಯ ಪಾಲಿಗೆ ತಹಶೀಲ್ದಾರ್ ವರ್ಗಾವರ್ಗಿಯ ಹಾಟ್‌ಲೈನ್ ಕನೆಕ್ಷನ್ನುಗಳಿದ್ದಂತೆ. ಡೀಸಿ ಅಯ್ಯಪ್ಪ ತನ್ನದೇ ಲಿಂಕ್ ಮೂಲಕ ಬಂದ ತಹಶೀಲ್ದಾರ್‌ರನ್ನು ಇಂತಿಷ್ಟು ರೇಟಿಗೆಂದು ಮಾತಾಡಿ ಅದರಲ್ಲಿ ತನ್ನ ಪಾಲು ಎತ್ತಿಟ್ಟುಕೊಂಡು ಮಿಕ್ಕಿದ್ದನ್ನು ಬಾಮೈದ ಸುಬ್ಬಯ್ಯನಿಗೆ ಅಂಟು ಹಾಕುತ್ತಾರೆ. ಸದ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ನಿರ್ದೇಶಕನಾಗಿರುವ ಸುಬ್ಬಯ್ಯ ಈ ಹಿಂದೆ ಮಂತ್ರಿ ಕರುಣಾಕರ ರೆಡ್ಡಿಗೆ ಆಪ್ತ ಕಾರ್ಯದರ್ಶಿಯಾಗಿದ್ದ. ಅದೇ ನೆಂಟಸ್ತಿಕೆ ಈಗ ಟ್ರಾನ್ಸ್‌ಫರ್ ಖಯಾಯಿಗೆ ನೆರವಾಗುತ್ತಿದೆ.






ಬಚ್ಚೇಗೌಡ


ಈಗ ಕೆ.ಆರ್. ಪುರಕ್ಕೆ ತಹಶೀಲ್ದಾರ್ ಆಗಿರುವ ಶಿವಕುಮಾರ್ ದಲಿತರ ಜಾತಿ ಪತ್ರಕ್ಕೂ ಲಂಚ ಕೇಳುತ್ತಾನೆ. ಅಳಿದುಳಿದ ಸರ್ಕಾರಿ ಭೂಮಿಯನ್ನೂ ನೆಲಗಳ್ಳರ ಬಾಯಿಗೆ ಹಾಕಲು ನಕಲಿ ಖಾತೆ, ಕಂದಾಯ ಏನು ಬೇಕಾದರೂ ಮಾಡಿಕೊಡುತ್ತಾನೆ. ಏನ್ರೀ ತಿನ್ನೋದಕ್ಕೂ ಒಂದು ಮಿತಿ ಬೇಡವಾ? ಎಂದು ರೈತರು ಪ್ರಶ್ನೆಯಿಟ್ಟರೆ ನಾನೇನೂ ಬಿಟ್ಟಿಗೆ ಬಂದಿಲ್ಲ, ಮೂವತ್ತು ಲಕ್ಷ ಕೊಟ್ಟಿಲ್ವಾ? ಎಂದು ಲಜ್ಜೆಗೆಟ್ಟು ರೋಫು ಹಾಕುತ್ತಾನೆ. ಯಲಹಂಕದ ತಹಶೀಲ್ದಾರ್ ವೆಂಕಟೇಶ್ 25 ಲಕ್ಷ ಕೊಟ್ಟು ಬಂದಿದ್ದಾರಂತೆ. ಇದೇ ಯಲಹಂಕದ ಸ್ಪೆಷಲ್ ತಹಶೀಲ್ದಾರ್ ರಂಗನಾಥ್ ಕೂಡ ಪೇಮೆಂಟು ಗಿರಾಕಿಯೇ.

ಶಿವಕುಮಾರನ ಜೊತೆ ಕೆ.ಆರ್.ಪುರಕ್ಕೆ ವಿಶೇಷ ತಹಶೀಲ್ದಾರ್ ಆಗಿರುವ ಬಾಳಪ್ಪ ಹಂದಿಗುಂದ ತನ್ನ ಬಳ್ಳಾರಿ ಲಿಂಕ್ ಬಳಸಿ ಶರವಣನಿಗೆ 30 ಲಕ್ಷ ಕೊಟ್ಟು ಬಂದಿದ್ದಾನಂತೆ. ಆನೇಕಲ್ ತಹಶೀಲ್ದಾರ್ ವೆಂಕಟರಾಜು, ಸ್ಪೆಷಲ್ ತಹಶೀಲ್ದಾರ್ ಉಷಾರಾಣಿ, ಬೆಂಗಳೂರು ಉತ್ತರ ತಹಶೀಲ್ದಾರ್ ಶಿವಸ್ವಾಮಿ, ಬೆಂಗಳೂರು ದಕ್ಷಿಣ ತಹಶೀಲ್ದಾರ್ ಹರಿಕೃಷ್ಣ, ಸ್ಪೆಷಲ್ ತಹಶೀಲ್ದಾರ್ ಮಂಜುನಾಥ್ ಇಬ್ಬರೂ ಲೂಟಿಗೆ ನಿಂತು 2 ವರ್ಷವಾಗಿದೆ. ಇವರಿಬ್ಬರೂ ಡೀಸಿ ಅಯ್ಯಪ್ಪರ ಕೃಪೆಗೆಂದು ತಲಾ 30 ಲಕ್ಷ ತೆತ್ತಿದ್ದಾರಂತೆ.

ದೊಡ್ಡಬಳ್ಳಾಪುರ ಸಬ್ ಡಿವಿಜನ್ನಿಗೆ ಅಸಿಸ್ಟೆಂಟ್ ಕಮೀಷನರ್ ಆಗಿದ್ದ ಶಿವಪ್ರಸಾದ್ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನವರ ಖಾಸಾ ಅಳಿಯ. ಈ ಹುದ್ದೆಗೆ ಯಾರೇ ಬಂದರೂ ಕಾರ್ಮಿಕ ಮಂತ್ರಿ ಹೊಸಕೋಟೆಯ ಬಚ್ಚೇಗೌಡನಿಗೆ 50 ಲಕ್ಷ ಕೊಟ್ಟೇ ಬರಬೇಕು. ಬಿಜೆಪಿ ರಾಜ್ಯಾಧ್ಯಕ್ಷನ ಅಳಿಯನೆಂಬ ಹಮ್ಮಿಗೆ ಬಿದ್ದು ಶಿವಪ್ರಸಾದ್ ಬಚ್ಚೇಗೌಡನಿಗೆ ಪಾಲು ಸಲ್ಲಿಸಲಿಲ್ಲ, ಬರಬೇಕಿದ್ದ ರೊಕ್ಕ ಬರಲಿಲ್ಲ ಎಂಬ ಒಂದೇ ಕಾರಣಕ್ಕೆ ಶಿವಪ್ರಸಾದ್‌ರನ್ನು ಕೆಐಎಡಿಬಿಗೆ ಎತ್ತಂಗಡಿ ಮಾಡಿ ಆ ಜಾಗಕ್ಕೆ ಡಾ. ಶಿವಶಂಕರ್‌ರನ್ನು ನೇಮಿಸಲಾಯ್ತು. ಇದಕ್ಕೆಂದು ಶಿವಶಂಕರ್ 50 ಲಕ್ಷದಷ್ಟನ್ನು ಬಚ್ಚೇಗೌಡನ ಬಾಯಿಗೆ ಹಾಕಿದ್ದಾರಂತೆ!

ಚನ್ನಪಟ್ಟಣಕ್ಕೆ ತಹಶೀಲ್ದಾರ್ ಆಗುವುದೆಂದರೆ ಮರಳುದಂಧೆಯಿಂದ ಮಂತ್ಲಿ ಲಕ್ಷಗಟ್ಟಲೆ ಖಮಾಯಿಸುವುದೆಂದೇ ಲೆಕ್ಕ. ಹಿಂದಿದ್ದ ಕೃಷ್ಣಯ್ಯನಿಗೂ ಶಾಸಕ ಯೋಗೇಶ್ವರ್‌ಗೂ ಇದೇ ಕಾರಣಕ್ಕೆ ಪಾಲು ಹಂಚಿಕೆಯ ಕಜ್ಜಾಟ ಬಂತು. ಸ್ವತಃ ಯೋಗೇಶ್ವರ್ ಹಠಕ್ಕೆ ಬಿದ್ದು ಕೃಷ್ಣಯ್ಯನನ್ನು ಎತ್ತಂಗಡಿ ಮಾಡಿಸಿದ್ದ. ಈಗ ಅಲ್ಲಿಗೆ ದಾಕ್ಷಾಯಿಣಿ ದಾಳಿಯಿಟ್ಟಿದ್ದಾಳೆ. ಸದ್ಯ ಮಾಲೂರಿಗೆ ತಹಶೀಲ್ದಾರ್ ಆಗಿರುವ ದಾಕ್ಷಾಯಿಣಿ ಡೀಸಿ ಅಯ್ಯಪ್ಪ ಮತ್ತು ಸುಬ್ಬಯ್ಯರ ಕೈಗೆ ಐವತ್ತು ಲಕ್ಷ ಕೊಟ್ಟಿದ್ದಾಳಂತೆ. ಶರವಣ ಕೂಡ ಒಪ್ಪಿದ್ದಾನೆ. ಆದರೆ ಯೋಗೇಶ್ವರ್ ಜೊತೆ ಇನ್ನೂ ಡೀಲು ಕುದುರಿಲ್ಲ. ಅದು ಮರಳುದಂಧೆಯ ಪಾಲು ಹಂಚಿಕೆ. ಒಂದೆಡೆ ಸ್ಥಳೀಯ ಎಮ್ಮೆಲ್ಲೆಗಳು ಮಂತ್ರಿಗಳಿಗೂ ಪಾಲು ಕೊಡಬೇಕು. ಇನ್ನೊಂದೆಡೆ ಕಂದಾಯ ಮಂತ್ರಿಗೂ ಕಡ್ಡಾಯವಾಗಿ ಟ್ರಾನ್ಸ್‌ಫರ್ ಶುಲ್ಕ ಕಟ್ಟಲೇಬೇಕು. ಕೊಟ್ಟ ಕಾಸನ್ನು ಖಮಾಯಿಸಲು ಮರಳು, ಗ್ರಾನೈಟ್, ಸರ್ಕಾರಿ ಭೂಮಿ, ನಕಲಿ ದಾಖಲೆ ಇತ್ಯಾದಿ ಎಲ್ಲೆಲ್ಲಿ ಕಾಸು ಹುಟ್ಟುತ್ತೋ ಎಲ್ಲಕ್ಕೂ ಕೈಹಾಕಬೇಕು. ಕಂದಾಯ ಮಂತ್ರಿಯೇ ಕಳ್ಳನಾದರೆ ತಾಲ್ಲೂಕು ಕಚೇರಿಗಳೆಲ್ಲ ದಕಾಯಿತರ ಕೂಪವಾಗುತ್ತದೆ. ಮುಖ್ಯಮಂತ್ರಿ ಯಡಿಯೂರಪ್ಪ ಬಡಬಗ್ಗರ ಫೋಟೋ ಹಾಕಿ ಏನೇ ಕಲ್ಯಾಣದ ಜಾಹೀರಾತು ಕೊಟ್ಟರೂ ಅಂತಿಮವಾಗಿ ಜನರ ಕಣ್ಣಿಗೆ ರಾಚುವುದು ಮರಳುದಂಧೆ, ಗ್ರಾನೈಟ್ ಲೂಟಿ, ಸರ್ಕಾರಿ ಜಮೀನಿನ ಕೊಳ್ಳೆ, ತಾಲ್ಲೂಕು ಕಚೇರಿಗಳ ಲಂಚ ಇತ್ಯಾದಿಗಳೇ ತಾನೇ?





ಯೋಗೇಶ್ವರ್

## ಮೂವತ್ತರಿಂದ ಐವತ್ತು ಲಕ್ಷ!

ಇಪ್ಪತ್ತೈದೋ ಮೂವತ್ತೋ ಲಕ್ಷ ಕೊಟ್ಟು ಬೆಂಗಳೂರಿನ ...ಯಶಟ್ಟಿನ ಸಬ್‌ರಿಜಿಸ್ಟ್ರಾರ್ ಕಚೇರಿಗೆ ಬಂದವರೆಲ್ಲ ಹಾಕಿದ ...ಡವಾಳ ಎತ್ತಬೇಕೆಂದರೆ ದೋಚಲೇಬೇಕು. ಬೆಂಗಳೂರಿನ ...ಟ್ಟು 42 ಸಬ್‌ರಿಜಿಸ್ಟ್ರಾರ್ ಕಚೇರಿಗಳ ಪೈಕಿ ಲಗ್ಗೆರೆ, ...ಮ್ಮನಹಳ್ಳಿ, ತಾವರೆಕೆರೆ, ದಾಸನಪುರ, ಯಲಹಂಕದಲ್ಲಿ ...ನಿತ್ಯ ಒಂದೂವರೆಯಿಂದ ಎರಡು ಲಕ್ಷದ ಕಮಾಯಿ ...ದೆ. ಮಾದನಾಯಕನಹಳ್ಳಿ, ಬೇಗೂರು, ಜೆ.ಪಿ.ನಗರ, ...ಶಂಕರಿಯಂಥ ಸಬ್‌ರಿಜಿಸ್ಟ್ರಾರ್ ಕಚೇರಿಗಳಲ್ಲಿ ದಿನಕ್ಕೆ ...ಯೆಂದರೂ ಲಕ್ಷದ ಮೇಲ್ಲಾಸು ಸಿಕ್ಕೇ ಸಿಗುತ್ತದೆ. ...ಎಲ್ಲಾ ಸಬ್‌ರಿಜಿಸ್ಟ್ರಾರ್ ಕಚೇರಿಗಳಿಗಿಂತಲೂ ದುಪ್ಪಟ್ಟು ...ಮಾಯಿಯಿರುವುದು ವರ್ತೂರಿನ ಕಚೇರಿಯಲ್ಲಿ. ...ರ್ತೂರು ಸುತ್ತಮುತ್ತಲ 40 ಗ್ರಾಮಗಳ ಆಸ್ತಿ ವಹಿ...ಟನಲ್ಲಿ ಪ್ರತಿ ಗ್ರಾಮದಿಂದ ದಿನಕ್ಕೆ ಕನಿಷ್ಠ 8 ...ೋಂದಣಿಗಳಾದರೂ ದಿನವೊಂದಕ್ಕೆ ಅದೇ ನಾಲ್ಕರಿಂದ ...ಯು ಲಕ್ಷ ಆಮದನಿಯಾಗುತ್ತದೆ.

ಇಂಥ ಉತ್ಪತ್ತಿಯ ವರ್ತೂರು ಸಬ್‌ರಿಜಿಸ್ಟ್ರಾರ್ ಹುದ್ದೆಗೆ ...ಲೆಂದು ಶರವಣನ ಬಾಯಿಗೆ 50 ಲಕ್ಷ ಹಾಕಿ ಬಂದವನು ...ಲಿ ಉಪನೋಂದಣಾಧಿಕಾರಿ ಧವಳೇಶ್ವರ್. ಬಂದು ...ರು ವರ್ಷವಾಗಿದೆ. ಬೇರೆಲ್ಲ ಸಬ್ ರಿಜಿಸ್ಟ್ರಾರ್‌ಗಳನ್ನು ...ರ್ಷಕ್ಕೋ ಒಂದೂವರೆ ವರ್ಷಕ್ಕೋ ಎತ್ತಂಗಡಿ ಮಾಡಿದರೆ ... ಧವಳೇಶ್ವರ್‌ನನ್ನು ಇನ್ನೂ ಅಲ್ಲಾಡಿಸಿಲ್ಲ. ಏಕೆಂದರೆ ... ಸುಲಿಗೆಯನ್ನು ರಿನೀವಲ್ ಮಾಡಿಕೊಳ್ಳಲು ಧವಳೇಶ್ವರ್ ...ರ್ಷಂಪ್ರತಿ ಐವತ್ತು ಲಕ್ಷದಂತೆ ಕೊಡುತ್ತಲೇ ಇರುತ್ತಾನೆ!

... ಮೇ 19ರ ವರ್ಗಾವರ್ಗಿಯ ಪಟ್ಟಿಯಲ್ಲಿ ಕಾಸು ...ಟ್ಟವರನ್ನು ಇದ್ದಲ್ಲೇ ಇರಿಸಿ ಕೊಡದವರನ್ನು ಎತ್ತಂಗಡಿ ...ಡಿ ಅಲ್ಲಿಗೇ ಅತೀ ಹೆಚ್ಚುಕೊಟ್ಟವರನ್ನು ಹಾಕಲಾಗಿದೆ. ...ಮ ನಗರಕ್ಕೆ ಹಿರಿಯ ಉಪನೋಂದಣಾಧಿಕಾರಿಯಾಗಿದ್ದ ...ಹಾದೇವಯ್ಯ ಮೈಸೂರು ದಕ್ಷಿಣದ ...ರಿಜಿಸ್ಟ್ರಾರ್ ಕಚೇರಿಗೆ ಬರಲು 20 ಲಕ್ಷ ...ಡಬೇಕಾಯ್ತು. ಆ ಹುದ್ದೆಯಲ್ಲಿದ್ದ ...ವಾರಾಧ್ಯ, ಸದ್ಯ ನೆಲಮಂಗಲಕ್ಕೆ ...ದಿದ್ದಾರೆ.


ಉಷಾರಾಣಿ

## ಬ್ರೋಕರ್ ಶಾಂತಮೂರ್ತಿ

ಇದಕ್ಕಿಂತ ಅಧಿಕ ಆದಾಯವಿದ್ದ ...ವನಹಳ್ಳಿಗೆ ಸಬ್‌ರಿಜಿಸ್ಟ್ರಾರ್ ಆಗಿದ್ದ ...ಯಾಜ್ ಅಹ್ಮದ್‌ರನ್ನು ಬರಕತ್ತಿಲ್ಲದ ...ಾರಪೇಟೆಗೆ ಹಾಕಿದ್ದಕ್ಕೂ ಇದೇ ಕಾರಣ. ...ದ್ದ ಸಯ್ಯದ್ ನೂರ್ ಪಾಷಾರನ್ನು ನೊಣ ...ಡೆಯುವ ಕೇಂದ್ರ ಕಚೇರಿಯ ಖಾಲಿ ಹುದ್ದೆಗೆ ...ಕಲಾಗಿದೆ. ಕಾರವಾರದಂಥ ಗಂಜಿಕೇಂದ್ರದಲ್ಲಿದ್ದ ಮಧು ...ದನ ಮಲ್ಲೇಶ್ವರದ ಸಬ್‌ರಿಜಿಸ್ಟ್ರಾರ್ ಕಚೇರಿಗೆ ಬರಲು ... ಲಕ್ಷ ಕೊಟ್ಟನಂತೆ. ಅಲ್ಲಿದ್ದ ಪ್ರಭಾವತಿ ಎದೆ ಬಡಕೊಂಡು ...ಳಂತೆ!

... ಸದ್ಯ ಕೆ.ಆರ್.ಪುರಕ್ಕೆ ಸಬ್‌ರಿಜಿಸ್ಟ್ರಾರ್ ಆಗಿಬಂದ ...ತಮೂರ್ತಿಯೇ ಶರವಣನ ಬ್ರೋಕರ್‌ಗಳ ಪೈಕಿ ಒಬ್ಬ ... ಹಿಂದೆ ಬಾಣಸವಾಡಿಯಲ್ಲಿದ್ದ. ಅದು ಕೂಡ ಲಾಭದ ...ಗವಾದರೂ ಕೆ.ಆರ್.ಪುರ ಅದಕ್ಕಿಂತಲೂ ಆಕರ್ಷಕ ... ಈತನಕ ಅಲ್ಲಿಗೆ ಸಬ್‌ರಿಜಿಸ್ಟ್ರಾರ್ ಆಗಿದ್ದ ಕೃಷ್ಣನಾಯಕ್ ...ಷ್ಟೇ ಆದಾಯದ ಕಾಚರಕನಹಳ್ಳಿಗೆ ಬರಲು 30 ಲಕ್ಷ ...ದಿದ್ದಾನಂತೆ. ಇಲ್ಲಿದ್ದ ಶ್ರೀದೇವಿ ಕೂಡ 30 ಲಕ್ಷ ...ಟ್ಟೇ ಮಾದನಾಯಕನಹಳ್ಳಿಗೆ ವಕ್ಕರಿಸಿದ್ದಾಳೆ. ಅತೀ ...ಚ್ಚು ಆದಾಯವುಳ್ಳ ದೇವನಹಳ್ಳಿ ಸಬ್‌ರಿಜಿಸ್ಟ್ರಾರ್ ...ಯನ್ನು ಶರವಣ ಬಹಿರಂಗ ಹರಾಜಿಗಿಟ್ಟಿದ್ದ. ಇದಕ್ಕೊಂದು ... ಲಕ್ಷ ಸುರಿದವನು ದೊಡ್ಡಬಳ್ಳಾಪುರಕ್ಕೆ ಸಬ್‌ರಿಜಿಸ್ಟ್ರಾರ್ ...ದ್ದ ಶಂಕರಮೂರ್ತಿ.

... ಹೊಳೆನರಸೀಪುರದಲ್ಲಿ ನೊಣ ಹೊಡೆದು ಸುಸ್ತಾಗಿದ್ದ ...ವಿಶ್ವನಾಥ್ ಬೆಂಗಳೂರಿನ ಅತ್ಯಂತ ಲಾಭದಾಯಕ ...ಮ್ಮನಹಳ್ಳಿಗೆ ಬಂದಿದ್ದು, ಅಲ್ಲಿದ್ದ ಯಶೋಧರನನ್ನು ...ಳೆನರಸೀಪುರಕ್ಕೆ ಎತ್ತಾಕಿದ್ದು, ರಾಜಾಜಿನಗರದಲ್ಲಿದ್ದ ...ಶ್‌ಕುಮಾರ್‌ನನ್ನು ಕೇಂದ್ರ ಕಚೇರಿಯ ಭಾರತಿಯ ...ಗಕ್ಕೆ ಹಾಕಿ, ಭಾರತಿಯನ್ನು ಉತ್ಪತ್ತಿಯ ಬಾಣಸವಾಡಿಗೆ ...ಕಿದ್ದು, ಕೇಂದ್ರ ಕಚೇರಿಯಲ್ಲಿದ್ದು ಗೊಣಗಾಡುತ್ತಿದ್ದ ...ರ್ವತಮ್ಮನನ್ನು ಆಮದನಿಯುಳ್ಳ ಯಶವಂತಪುರಕ್ಕೆ ...ಬಿದ್ದು, ಅಲ್ಲಿದ್ದ ಜಯಪ್ರಕಾಶ್‌ನನ್ನು ಬರಕತ್ತಿಲ್ಲದ ಕೇಂದ್ರ ...ೇರಿಗೆ ಒಗಾಯಿಸಿ ಬಾಗೇಪಲ್ಲಿಯಲ್ಲಿದ್ದ ಪಾಪಣ್ಣನನ್ನು ...ಂಬಾ ಕಮಾಯಿಯುಳ್ಳ ಹೊಸಕೋಟೆಗೆ ನೇಮಿಸಿದ್ದು ...ಹದೇವಪುರದಲ್ಲಿ ಸಮೃದ್ಧಿಯಿಂದಿದ್ದ ಚಲುವರಾಜುವನ್ನು ...ತ್ತಿಲ್ಲದ ಜಯನಗರದ ಡಿಆರ್‌ಓ ಕಚೇರಿಗೆ ಹಾಕಿ ...ಗೆ ಮಂಗಳೂರಿನಲ್ಲಿದ್ದ ಪಾಂಡುರಂಗ ಅತ್ತಾವರನನ್ನು ...ಬಿದ್ದು, ನಿರೀಕ್ಷಣೆಯಲ್ಲಿದ್ದ ಗುರುರಾಘವೇಂದ್ರನನ್ನು ...ಭರಿತ ದೇವನಹಳ್ಳಿಗೆ ನೇಮಿಸಿದ್ದು ಇತ್ಯಾದಿ ಪ್ರತಿ ...ರಿಜಿಸ್ಟ್ರಾರ್ ಕಚೇರಿಗೆ ಬಂದ ಒಬ್ಬೊಬ್ಬ ಸಬ್‌ರಿಜಿಸ್ಟ್ರಾರ್ ...ರ್ಗಾವರ್ಗಿಯ ಹಿಂದೆಯೂ 30 ರಿಂದ 50 ಲಕ್ಷದ ...ಲಿಯ ಕತೆಯಿದೆ.

... ಮಿಕ್ಕಂತೆ ಉಳಿದ 47 ಸಬ್‌ರಿಜಿಸ್ಟ್ರಾರ್‌ಗಳು ತಮ್ಮ ...ನುಸಾರ ರೊಕ್ಕ ಬಿಚ್ಚಿದ್ದಾರೆ. ಯಾರ್‍ಯಾರು ಟ್ರಾನ್ಸ್‌ಫರ್ ...ಬಿಲ್ಲವೋ ಇದ್ದ ಜಾಗದಲ್ಲಿ ಮುಂದುವರೆಯುವುದಕ್ಕೂ ...ಣನ ಗ್ಯಾಂಗ್ ದುಡ್ಡು ಕಿತ್ತಿದೆ. ಇನ್ನು ಜಿಲ್ಲಾ ...ೋಂದಣಾಧಿಕಾರಿಗಳಾದ ಮೆಹಬೂಬ್ ಖಾನ್, ಹಾಸನಕ್ಕೆ ಎತ್ತಂಗಡಿಯಾದ ಬಸವರಾಜು, ಚಾಮರಾಜನಗರದಿಂದ ಕೋಲಾರಕ್ಕೆ ಬಂದ ಹಮೀದ್ ಅಲಿ, ಕಾರವಾರದಿಂದ ಧಾರವಾಡಕ್ಕೆ ಬಂದ ಮಹೇಶ್ ಪಿ.ಪಂಡಿತ್ ಮತ್ತು ಧಾರವಾಡದಿಂದ ಕಾರವಾರಕ್ಕೆ ಬಂದ ಹೆಚ್.ಪ್ರೇಮ್‌ನಾಥ್ ಎಲ್ಲರೂ ತಂತಮ್ಮ ಶಕ್ತ್ಯಾನುಸಾರ ಕಂದಾಯ ಮಂತ್ರಿಯ ಕಲೆಕ್ಷನ್ ಪಟಾಲಮ್‌ಗೆ ಅಮೇಧ್ಯ ತಿನ್ನಿಸಿದ್ದಾರೆ.

## ಹತ್ತು ಕೋಟಿ....?

46 ಮಂದಿ ಪ್ರಥಮ ದರ್ಜೆ ಸಹಾಯಕರದ್ದೂ ಇದೇ ಪಾಡು. ಹೆಬ್ಬಾಳದಿಂದ ಹೆಸರಘಟ್ಟಕ್ಕೆ ಬಂದ ಕೃಷ್ಣಪ್ಪ, ಹೆಸರಘಟ್ಟದಿಂದ ಗಾಂಧಿನಗರಕ್ಕೆ ಬಂದ ರಾಜೇಂದ್ರ, ಬಿಟಿಎಂ ಲೇಔಟ್‌ಗೆ ಬಂದಿರುವ ಲಕ್ಷ್ಮೀನಾರಾಯಣ, ಶ್ರೀರಾಂಪುರದಿಂದ ತಾವರೆಕೆರೆಗೆ ಎತ್ತಂಗಡಿಯಾದ ಪ್ರಮೀಳಾ, ತಾವರೆಕೆರೆಯಿಂದ ರಾಜಾಜಿನಗರಕ್ಕೆ ಬಂದ ಸಂತೋಷ್, ರಾಜಾಜಿನಗರದಿಂದ ಅತ್ತಿಬೆಲೆಗೆ ವರ್ಗಗೊಂಡ ಬಸವರಾಜು, ಗಾಂಧಿನಗರದಿಂದ ಹೆಬ್ಬಾಳಕ್ಕೆ ಬಂದ ಪ್ರಶಾಂತ್, ಜೆ.ಪಿ.ನಗರಕ್ಕೆ ವಕ್ಕರಿಸಿದ ರಾಧಮ್ಮ, ಬ್ಯಾಟರಾಯನಪುರವನ್ನು ಆಕ್ರಮಿಸಿದ ಮುರ್ತಜಾ ಅಲಿ, ಈತನ ಶಿವಾಜಿನಗರದ ಹುದ್ದೆಗೆ ಬಂದ ಚಂದ್ರಶೇಖರಯ್ಯ, ಜಾಲಕ್ಕೆ ಬಂದ ಶ್ರೀರಾಮ್, ರಾಜಾಜಿನಗರಕ್ಕೆ ವಕ್ಕರಿಸಿದ ರಾಮಚಂದ್ರ, ಬಾಣಸವಾಡಿಗೆ ಬಂದ ರೇಣುಕಾಪ್ರಸಾದ್, ಮಾದನಾಯಕನಹಳ್ಳಿಯನ್ನು ಗಿಟ್ಟಿಸಿಕೊಂಡ ಕಮಲ ಮುಂತಾದವರೆಲ್ಲ ಐದು ಲಕ್ಷ ತೆತ್ತೇ ಬಂದವರು.

ವರ್ಗಾವಣೆಗೊಂಡ ಹದಿನೈದು ಮಂದಿ ದ್ವಿತೀಯ ದರ್ಜೆ ಸಹಾಯಕರ ಪೈಕಿ ಪ್ರತಿಯೊಬ್ಬರಿಂದಲೂ ಕನಿಷ್ಠ ಎರಡು ಲಕ್ಷದಂತೆ ವಸೂಲಿ ಮಾಡಲಾಗಿದೆ.

ಕಂದಾಯ ಇಲಾಖೆಯ ಮೂಲಗಳೇ ಹೇಳುವಂತೆ ಈ ಒಂದೇ ವರ್ಗಾವಣೆಯಿಂದ ಟೌನ್ ಕಿರಾತಕರು ಕಮಾಯಿಸಿದ ಒಟ್ಟು ಮೊತ್ತ ಕಮ್ಮಿಯೆಂದರೂ ಹತ್ತುಕೋಟಿ!

ಮೇ 19ರ ವರ್ಗಾವರ್ಗಿಯ ಎತ್ತುವಳಿಯೇ ಹೀಗಾದ ಮೇಲೆ ಅಲ್ಲಿಗೆ ಕರುಣಾಕರರೆಡ್ಡಿಯ ರೊಕ್ಕದಾಹ ತಣಿಯಬೇಕಿತ್ತಲ್ಲವೇ? ಹಾಗಾಗಿಲ್ಲ. ಇದಾಗಿ ತಿಂಗಳಿಗೆ ಅಂದರೆ ಜೂನ್ 29ರಂದು ಮತ್ತೊಂದು ರೌಂಡ್ ಸಬ್‌ರಿಜಿಸ್ಟ್ರಾರ್‌ಗಳ ಎತ್ತಂಗಡಿಗೆ ರೆಡ್ಡಿಗ್ಯಾಂಗ್ ಕೈಹಾಕಿದೆ. ಮತ್ತೆ 20 ಮಂದಿ ಹಿರಿಯ ಸಬ್‌ರಿಜಿಸ್ಟ್ರಾರ್‌ಗಳು, 14 ಮಂದಿ ಪ್ರಥಮ ದರ್ಜೆ ಗುಮಾಸ್ತರು ಮತ್ತು ಮೂವರು ದ್ವಿತೀಯ ದರ್ಜೆ ಗುಮಾಸ್ತರ ಅಡಿಷನಲ್ ಟ್ರಾನ್ಸ್‌ಫರ್ ಪಟ್ಟಿಯಲ್ಲಿ ಮಿರ್ಲೆಯಲ್ಲಿದ್ದ ಬಸವಯ್ಯನನ್ನು ಕಮಾಯಿಯ ಬೆಂಗಳೂರು ಗ್ರಾಮಾಂತರದ ಸಬ್‌ರಿಜಿಸ್ಟ್ರಾರ್ ಹುದ್ದೆಗೆ ತರಲಾಗಿತ್ತು. ಕೋಲಾರದಲ್ಲಿದ್ದ ಜಯಮ್ಮನನ್ನು ಬೆಂಗಳೂರಿನ ರಾಜರಾಜೇಶ್ವರಿನಗರಕ್ಕೆ, ಪ್ರಭಾವತಿಯನ್ನು ದೇವನಹಳ್ಳಿಗೆ, ಎಂ.ಪುಟ್ಟಸ್ವಾಮಿಯನ್ನು ಹೊಸಕೋಟೆಗೆ, ಚನ್ನಪಟ್ಟಣಕ್ಕೆ ಪ್ರಭಾಕರ್ ನಾಯಕ್, ದೊಡ್ಡಬಳ್ಳಾಪುರಕ್ಕೆ ಸಿ.ಜಿ.ರಾಯ್ಕರ್ ಹೀಗೆ ಆಳಿದುಳಿದ ಉತ್ಪತ್ತಿಯ ಸಬ್‌ರಿಜಿಸ್ಟ್ರಾರ್ ಸ್ಥಾನಗಳನ್ನೂ 25ರಿಂದ 30 ಲಕ್ಷಕ್ಕೆ ಶರವಣ ಮಾರಿಕೊಂಡಿದ್ದ.

## ಗಣಿಯಾದ ಇಲಾಖೆ

ಬಹುಶಃ ಈ ವರ್ಗಾವರ್ಗಿ ಕೂಡ ಕೇವಲ ಒಂದು ವರ್ಷದ ಕಾಂಟ್ರಾಕ್ಟ್ ಲೆಕ್ಕದ್ದಾಗಿರಬೇಕು. ಕೊಟ್ಟ ಇಪ್ಪತ್ತೈದೋ ಮೂವತ್ತೋ ಲಕ್ಷವನ್ನು ಒಂದು ವರ್ಷದೊಳಗೆ ದುಡಿದುಕೊಳ್ಳಬೇಕು. ಮತ್ತೆ ಅಲ್ಲೇ ಮುಂದುವರೆಯಲು ಅಷ್ಟೇ ದುಡ್ಡು ಕಕ್ಕಬೇಕು. ಗಣಿಕಳ್ಳನೊಬ್ಬ ಕಂದಾಯ ಮಂತ್ರಿಯಾದರೆ ಏನೆಲ್ಲಾ ಅನಾಹುತವಾಗುತ್ತದೆ ಎಂಬುದಕ್ಕೆ ಆತ ಮಂತ್ರಿಯಾದ ನಂತರದಿಂದ ಈತನಕ ನಡೆದ ಸಬ್‌ರಿಜಿಸ್ಟ್ರಾರ್‌ಗಳ ವರ್ಗಾವರ್ಗಿ ಪಟ್ಟಿಯೊಂದೇ ಸಾಕು. 2008-09ರ ಒಂದೇ ಸಾಲಿನಲ್ಲಿ ಸಬ್‌ರಿಜಿಸ್ಟ್ರಾರ್ ಕಚೇರಿಗಳೊಂದರಲ್ಲೇ 182 ವರ್ಗಾವಣೆಗಳಾಗಿವೆ. 2009ರಿಂದ 10ರವರೆಗೆ ಇದು 276ಕ್ಕೇರಿದೆ. 2010-11ನೇ ಸಾಲಿನಲ್ಲಿ 167 ಆದರೆ ಈ ವರ್ಷ ಅಂದರೆ 2011-12ರಲ್ಲಿ ಅಂದರೆ ಕೇವಲ ಮೂರೇ ತಿಂಗಳಲ್ಲಿ 84 ಮಂದಿ ಸಬ್‌ರಿಜಿಸ್ಟ್ರಾರ್‌ಗಳು, 60 ಮಂದಿ ಪ್ರಥಮ ದರ್ಜೆ ಗುಮಾಸ್ತರು, 20 ದ್ವಿತೀಯ ದರ್ಜೆ ಗುಮಾಸ್ತರು ಒಟ್ಟು 164 ಮಂದಿಯನ್ನು ಕರುಣಾಕರರೆಡ್ಡಿಯ ಕಳ್ಳರ ಗ್ಯಾಂಗ್ ಎತ್ತಂಗಡಿ ಮಾಡಿದೆ.

ಇದು ಕೇವಲ ರೊಕ್ಕ ಕೊಟ್ಟವರ ಮರ್ಜಿಗಾಗಿ ನಡೆದ ಎತ್ತಂಗಡಿಯಾದರೆ ಇದ್ದ ಜಾಗದಲ್ಲೇ ಮುಂದುವರೆಯಲು ದುಡ್ಡು ಕೊಟ್ಟವರ ಸಂಖ್ಯೆ ಇನ್ನೆಷ್ಟೋ...!


ಇದಲ್ಲದೆ ತಹಶೀಲ್ದಾರ್‌ಗಳು, ಶಿರಸ್ತೇದಾರ್, ಗ್ರಾಮಲೆಕ್ಕಿಗ, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು, ಸರ್ವೇಯರ್, ಅಸಿಸ್ಟೆಂಟ್ ಕಮೀಷನರ್‌ಗಳ ವರ್ಗಾವರ್ಗಿಯ ಲೆಕ್ಕಾಚಾರ ಇನ್ನೂ ಭಯಾನಕ. ಮಂತ್ರಿ ದಕಾಯಿತ ಶರವಣ ಆತನ ವಿನಮ್ರ ಸೇವಕ. ಇಂಥವರ ಕಾಲಿಗೆ ಬಿದ್ದು ಕಾಸುಕೊಟ್ಟು ಉತ್ಪತ್ತಿಯ ಜಾಗಹಿಡಿದು ಹಾಕಿದ ರೊಕ್ಕ ಎತ್ತಲು ಜನರ ಸುಲಿಗೆಗಿಳಿದ ಸಬ್‌ರಿಜಿಸ್ಟ್ರಾರ್‌ಗಳು ಮತ್ತು ಕಂದಾಯ ಇಲಾಖೆ ನೌಕರರ ದುರ್ಗತಿ ನಿಜಕ್ಕೂ ನಾಚಿಕೆಗೇಡು!

ಅರಣ್ಯ ಭೂಮಿಗೆ ಕನ್ನ ಹಾಕಿ ಅದಿರು ದೋಚಿದವರಿಗೆ ಕಂದಾಯ ಇಲಾಖೆ ಕೂಡ ಅದಿರಿನ ಗಣಿಯೇ ತಾನೇ?

# ಚಿತ್ರದುರ್ಗ: ತಹಸೀಲ್ದಾರ್ ಕುಮಾರಸ್ವಾಮಿ ವಿರುದ್ಧ ಕಾನೂನು ಕ್ರಮ ಏಕಿಲ್ಲ?

ತಹಶೀಲ್ದಾರ್ ಕುಮಾರಸ್ವಾಮಿ ಚಿತ್ರದುರ್ಗ ಬಿಡುವ ಲಕ್ಷಣಗಳು ಕಂಡು ಬರುತ್ತಿಲ್ಲ. ಕಚೇರಿಯ ಸಿಬ್ಬಂದಿಯನ್ನು ಇನ್ನಿಲ್ಲದಂತೆ ಗೋಳು ಹೊಯ್ದುಕೊಳ್ಳುವ ಈತ ಯಾವಾಗ ತೊಲಗುತ್ತಾನೋ ಎಂದು ನೌಕರರೆಲ್ಲಾ ಹಿಡಿಶಾಪ ಹಾಕುತ್ತಿದ್ದಾರೆ. ಕುಮಾರಸ್ವಾಮಿಯ ಮೇಲೆ ಕಾನೂನು ಕ್ರಮ ಕೈಗೊಳ್ಳುವಷ್ಟು ಸಾಕ್ಷ್ಯಾಧಾರಗಳಿದ್ದರೂ ಮೇಲಧಿಕಾರಿಗಳು ಮಾತ್ರ ಮೌನ ವಹಿಸಿರುವುದು ಆಶ್ಚರ್ಯಕರವಾಗಿದೆ. ತನ್ನ ವಿರುದ್ಧ ಇರುವ ಎಲ್ಲಾ ಆರೋಪಗಳನ್ನು ಜಯಿಸಿಕೊಂಡಿದ್ದೇನೆಂಬ ಹುಂಬತನದ ಖುಷಿಯಲ್ಲಿ ತೇಲುತ್ತಿರುವ ಕುಮಾರಸ್ವಾಮಿ ಹಣವೊಂದಿದ್ದರೆ ಎಲ್ಲವನ್ನೂ ಅರಗಿಸಿಕೊಳ್ಳಬಲ್ಲೆನೆಂಬ ಧಿಮಾಕನ್ನು ಪ್ರದರ್ಶಿಸುತ್ತಿದ್ದಾನೆ.

ಈತನ ಅಕ್ರಮ ದಂಧೆಗಳು, ಡೀಲುಗಳನ್ನು ಕುದುರಿಸುವ ಪರಿ ಕುರಿತು ಪತ್ರಿಕೆಯ 2010 ಆಗಸ್ಟ್ 11ರ ಸಂಚಿಕೆಯಲ್ಲಿ ಸವಿವರವಾಗಿ ವರದಿ ಮಾಡಲಾಗಿತ್ತು. ಜೊತೆಗೆ ಈ ಕುರಿತು ದಾಖಲಾಗಿದ್ದ ಖಾಸಗಿ ದೂರೊಂದನ್ನು ಪರಿಶೀಲಿಸಿ ಕ್ರಮಕೈಗೊಂಡು ವರದಿ ಸಲ್ಲಿಸುವಂತೆ ಆಗಿನ ಜಿಲ್ಲಾಧಿಕಾರಿ ಅಮ್ಲಾನ್ ಆದಿತ್ಯ ಬಿಸ್ವಾಸ್‌ರವರಿಗೆ ಕಂದಾಯ ಇಲಾಖೆಯ ಪ್ರಾದೇಶಿಕ ಆಯುಕ್ತರು ಸೂಚನೆ ನೀಡಿದ್ದರು.




ತಹಶೀಲ್ದಾರ್ ಕುಮಾರಸ್ವಾಮಿಯ ಬಗ್ಗೆ ಮೃದು ಧೋರಣೆ ಹೊಂದಿದ್ದ ಆಗಿನ ಜಿಲ್ಲಾಧಿಕಾರಿ ಬಿಸ್ವಾಸ್ ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ಅಪರ ಜಿಲ್ಲಾಧಿಕಾರಿಗಳಿಗೆ ವಹಿಸಿದರು. ಅಪರ ಜಿಲ್ಲಾಧಿಕಾರಿಗಳು ಖಾಸಗಿ ದೂರು ನೀಡಿದ ಅರ್ಜಿದಾರರಿಗೆ ನೀಡಿದ ನೋಟಿಸ್ ವಾಪಾಸು ಬಂದಿರುವುದರಿಂದ ಅನಾಮಧೇಯ ಅರ್ಜಿಯಲ್ಲಿರುವ ಅಂಶಗಳು ದುರುದ್ದೇಶದಿಂದ ಕೂಡಿದವುಗಳಾಗಿರುವುದರಿಂದ ವಿಲೇಪಡಿಸಿ ವರದಿ ಮಾಡಿರುವುದನ್ನೇ ಆಧರಿಸಿ ಪ್ರಕರಣ ಮುಕ್ತಾಯ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಬಿಸ್ವಾಸ್ ಪ್ರಾದೇಶಿಕ ಆಯುಕ್ತರಿಗೆ(ಸಿಆರ್/545/2010-11 ದಿನಾಂಕ 3-11-2010) ವರದಿ ಮಾಡಿದ್ದರು. ಆದರೆ ಪ್ರಾದೇಶಿಕ ಆಯುಕ್ತರ ಪತ್ರದೊಂದಿಗೆ ಕಳುಹಿಸಲಾಗಿದ್ದ ಲಂಕೇಶ್‌ನ ಉದ್ಧೃತ ಭಾಗದಲ್ಲಿ ಪ್ರಸ್ತಾಪಿಸಲಾಗಿದ್ದ ಆರೋಪಗಳ ಕುರಿತು ಯಾವುದೇ ರೀತಿಯ ವಿಚಾರಣೆ ನಡೆಸದೆ ಜಾಣ ಕುರುಡನ್ನು ಪ್ರದರ್ಶಿಸಲಾಗಿತ್ತು.

ಪ್ರಾದೇಶಿಕ ಆಯುಕ್ತರ ಕಚೇರಿಯಿಂದ ಖುದ್ದು ಕಳುಹಿಸಲಾದ ತಹಶೀಲ್ದಾರ್ ನೇತೃತ್ವದ ತಂಡ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಕೆಲ ನಿರ್ದಿಷ್ಟ ಆರೋಪಗಳ ಬಗ್ಗೆ ತನಿಖೆ ನಡೆಸಿ ಲೋಪದೋಷಗಳನ್ನು ಗುರುತಿಸಿ ವರದಿ ನೀಡಿತು. ಈ ವರದಿ(ದಿ-15-11-2010)ಯನ್ನು ಉಲ್ಲೇಖಿಸಿ ಈ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರು, ಉಪವಿಭಾಗಾಧಿಕಾರಿಗಳು ಹಾಗೂ ಅಪರ ಜಿಲ್ಲಾಧಿಕಾರಿಗಳ ವರದಿಯನ್ನು ಪಡೆದು ಲೋಪಗಳ ಬಗ್ಗೆ ಕಾನೂನುರೀತ್ಯಾ ಕ್ರಮ ಕೈಗೊಂಡು ವರದಿ ಸಲ್ಲಿಸಲು ಪ್ರಾದೇಶಿಕ ಆಯುಕ್ತರು ಕೋರಿದ್ದರು.

ವರದಿಯಲ್ಲಿ ಲಂಕೇಶ್‌ನಲ್ಲಿ ವರದಿಯಾಗಿದ್ದ ಸುಮಾರು 5 ಅಂಶಗಳನ್ನು ಪರಿಶೀಲಿಸಿ ತಹಸೀಲ್ದಾರ್ ಕುಮಾರಸ್ವಾಮಿಯಿಂದ ಆಗಿರುವ ಲೋಪಗಳನ್ನು ಸ್ಪಷ್ಟವಾಗಿ ನಮೂದಿಸಲಾಗಿತ್ತು.

1) ಚಿತ್ರದುರ್ಗ ತಾಲ್ಲೂಕು ಸೀಬಾರದ ಬಳಿ ಇರುವ ಸೌಭಾಗ್ಯಮ್ಮ ಕೋಂ ನಿಂಗಪ್ಪ, ಬುರುಜನಹಟ್ಟಿ ಇವರ ಹೆಸರಿನಲ್ಲಿರುವ ಆರ್ ಎನ್ ಆರ್ ಇಟ್ಟಿಗೆ ಭಟ್ಟಿ ಎಸ್. ಈಶ್ವರಪ್ಪ ಬಿನ್ ಸಿದ್ಧಪ್ಪ ಗುತ್ತನಾಡ ಕಲ್ಲುಗಣಿಗೆ ಅನುಮತಿ ಪಡೆಯದಿರುವುದು.

2) ಈಚಲುನಾಗೇನಹಳ್ಳಿಯ ಬಂಡೆ ರುದ್ರಪ್ಪ ಸ.ನಂ 14ರ ಜಮೀನಿನಲ್ಲಿ ಅನುಮತಿಯಿಲ್ಲದೆ ಗಣಿಗಾರಿಕೆ ನಡೆಸಿರುವುದು. ಎಂ.ಕೆ. ಹಟ್ಟಿ ಗ್ರಾಮದ ಸ.ನಂ. 33 ರಲ್ಲಿ ಕ್ರಷರ್ ನಡೆಸುತ್ತಿರುವುದು.

3) ಎಚ್. ಆನಂದಪ್ಪ ಬಿನ್ ಹನುಮಂತಪ್ಪ ಕಸಬಾ ಹೋಬಳಿ ಎಂ.ಕೆ. ಹಟ್ಟಿ ಗ್ರಾಮದ ಸ.ನಂ.97/ಪಿ ರಲ್ಲಿ 5.06 ಎಕರೆ ಮತ್ತು 104/1 ರಲ್ಲಿ 1.20 ಎಕರೆ ಜಮೀನು ಹೊಂದಿರುತ್ತಾರೆ. ಇವರು ಪಕ್ಕದ ಗ್ರಾಮದಿಂದ ಗಣಿಗಾರಿಕೆ ನಡೆಸಿ ಸ.ನಂ.97/ಪಿ ರಲ್ಲಿ ಮತ್ತು 104ರ ಜಮೀನಿನಲ್ಲಿ ಕ್ರಷರ್ ನಡೆಸುತ್ತಿದ್ದಾರೆ.

4) ಟಿ. ರಾಜೇಂದ್ರ ಕುಮಾರ್ ಬಿನ್ ತಮ್ಮಣ್ಣರವರು ಸೀಬಾರ ಗ್ರಾಮದ ಸ.ನಂ. 27ರಲ್ಲಿ 4-00ಎಕರೆ ಜಮೀನು ಹೊಂದಿರುತ್ತಾರೆ. ಈ ಜಮೀನಿನಲ್ಲಿ ವೀರೇಶ್ ಎಂಬುವವರು ಕಲ್ಲುಗಣಿಗಾರಿಕೆ ನಡೆಸಿ ಸ.ನಂ.27 ಜಮೀನಿನಲ್ಲಿ ಕ್ರಷರ್ ನಡೆಸುತ್ತಿದ್ದಾರೆ.

"ಲಂಕೇಶ್ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಹಿಡುವಳಿ ಜಮೀನುಗಳಲ್ಲಿ ಭೂಪರಿವರ್ತನೆ ಹೊಂದದೆ ಇದ್ದರೂ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವುದಕ್ಕೆ ಹಾಗೂ ವ್ಯವಸಾಯದ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಅನಧಿಕೃತವಾಗಿ ಉಪಯೋಗಿಸುತ್ತಿರುವುದಕ್ಕೆ, ಇದರಿಂದಾಗಿ ಭೂಪರಿವರ್ತನಾ ಶುಲ್ಕ ಸರ್ಕಾರಕ್ಕೆ ನಷ್ಟ ಉಂಟಾಗಲು ತಹಸೀಲ್ದಾರ್‌ರವರು ಕಾರಣರಾಗಿರುತ್ತಾರೆ" ಎಂದು ಸ್ಪಷ್ಟವಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದಲ್ಲದೇ ತಹಸೀಲ್ದಾರರು, ಸಂಬಂಧಪಟ್ಟ ಗ್ರಾಮಲೆಕ್ಕಿಗರು, ರಾಜಸ್ವ ನಿರೀಕ್ಷಕರು ಅಕ್ರಮಗಳನ್ನು ತಡೆಯುವಲ್ಲಿ ವಿಫಲವಾಗಿರುವುದನ್ನು ಕೂಡ ದಾಖಲಿಸಲಾಗಿದೆ.

ಆಗಿನ ಜಿಲ್ಲಾಧಿಕಾರಿ ಬಿಸ್ವಾಸ್ ಈ ಬಗ್ಗೆ ಏನು ಕ್ರಮಕೈಗೊಂಡರು ಎಂಬುದಾಗಲೀ, ಪ್ರಾದೇಶಿಕ ಆಯುಕ್ತರ ತನಿಖಾ ತಂಡದ ವರದಿಗೆ ಉಪವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರ್ ಕುಮಾರಸ್ವಾಮಿ ಏನು ಉತ್ತರ ನೀಡಿದ್ದಾರೆಂಬುದಾಗಲೀ ಈ ತನಕ ಬಯಲಾಗಿಲ್ಲ. ಅಕ್ರಮದಂಧೆಗಳು ಮಾತ್ರ ಮುಂದುವರಿಯುತ್ತಲೇ ಇವೆ. ಪ್ರಸ್ತುತ ಜಿಲ್ಲಾಧಿಕಾರಿಯಾಗಿರುವ ವಿಪುಲ್ ಬನ್ಸಾಲ್‌ರವರಾದರೂ ಈ ಬಗ್ಗೆ ಗಮನಹರಿಸಿ ತಹಸೀಲ್ದಾರ್ ಕುಮಾರಸ್ವಾಮಿಯ ವಿರುದ್ಧ ಕಾನೂನುಕ್ರಮ ಕೈಗೊಳ್ಳಬೇಕಿದೆ.



ವಿಶೇಷ ವರದಿ:
ತೆರಳಿ ಎನ್.ಶೇಖರ್, ತಿರುವನಂತಪುರ

## ಒಂದು ಲಕ್ಷ ಕೋಟಿ ನಿಧಿ!

# ನಿಧಿ ಸಿಕ್ಕಿದ್ದು ಹೇಗೆ? ಈಗ ಯಾರ ಕೈಗೆ?

ಹಿಂದಿನ ಕಾಲದ ರಾಜರು ತಮ್ಮ ಸಾಮ್ರಾಜ್ಯದ ಸಂಪತ್ತನ್ನು ಸುರಕ್ಷಿತವಾಗಿಡಲು ಅದನ್ನೆಲ್ಲ ದೇವಸ್ಥಾನಗಳಲ್ಲಿ ಬಚ್ಚಿಡುತ್ತಿದ್ದರು. ಆ ಕಾರಣಕ್ಕೇ ವೈರಿ ದೇಶದವರು ದಾಳಿ ಮಾಡಿದಾಗ ಮೊದಲು ದೇವಸ್ಥಾನಗಳನ್ನೇ ನಾಶ ಮಾಡಿ ಅದರಲ್ಲಿ ಬಚ್ಚಿಟ್ಟಿದ್ದ ಸಂಪತ್ತನ್ನು ಲೂಟಿ ಮಾಡುತ್ತಿದ್ದರು. ಇತಿಹಾಸದ ಈ ಸತ್ಯಕ್ಕೆ ಇವತ್ತು ಪದ್ಮನಾಭ ಸ್ವಾಮಿ ದೇವಸ್ಥಾನದಲ್ಲಿ ಶತಮಾನಗಳ ಕಾಲ ಗೌಪ್ಯವಾಗಿದ್ದು ಈಗ ಪತ್ತೆಯಾಗಿರುವ ಸಂಪತ್ತೇ ಸಾಕ್ಷಿಯಾಗಿದೆ. ಜನಸಾಮಾನ್ಯರ ಕಣ್ಣಿಗೆ ಪವಿತ್ರ ಧಾರ್ಮಿಕ ಕ್ಷೇತ್ರವಾಗಿಯಷ್ಟೇ ಕಾಣುತ್ತಿದ್ದ ಈ ದೇವಸ್ಥಾನ ಈ ಮಟ್ಟದ ನಿಗೂಢ ಅಡಗಿಸಿಕೊಂಡಿದೆಯೆಂದು ವಿಚಾರವಂತರೂ ಅಂದುಕೊಂಡಿರಲಿಕ್ಕಿಲ್ಲ. ಇಂತಹದೊಂದು ನಿಗೂಢ ಅನಾವರಣಗೊಂಡ ರೋಚಕ ಮಜಲುಗಳು ಇಲ್ಲಿವೆ....

ಇವರ್‍ಯಾರೂ ಸ್ಯಾಂಡಲ್‌ವುಡ್ಡಿನ 'ಗಂಡಭೇರುಂಡ' ಸಿನಿಮಾದಲ್ಲಿ ಶಂಕರ್ ನಾಗ್, ಶ್ರೀನಾಥ್‌ರಂತೆ ಗುಪ್ತನಿಧಿಯನ್ನು ಅರಸಿ ಹೋಗಲಿಲ್ಲ, ಅಥವಾ ಹಾಲಿವುಡ್‌ನ 'ಮೆಕಾನಸ್ ಗೋಲ್ಡ್' ಚಿತ್ರದಲ್ಲಿ ತೋರಿಸಿದ್ದಂತೆ ತಮ್ಮ ಜೀವವನ್ನೇ ಪಣಕ್ಕಿಟ್ಟು ಚಿನ್ನದ ಗಣಿ ಹುಡುಕಿಕೊಂಡು ಗ್ರೆಗೊರಿ ಪೆಕ್ ಮತ್ತು ಒಮರ್ ಷರೀಫ್ ಹೋದಂತೆ ಹೋಗಲಿಲ್ಲ, ಬದಲಾಗಿ ಜಗತ್ತನ್ನೇ ಇವತ್ತು ಬೆಚ್ಚಿಬೀಳಿಸಿರುವ ನಿಧಿಯ ಹಾದಿಯಲ್ಲಿ ಅವರನ್ನು ಕಳಿಸಿದ್ದು ನಮ್ಮ ದೇಶದ ಸುಪ್ರೀಂಕೋರ್ಟ್.

ಆ ತಂಡದಲ್ಲಿ ಏಳು ಜನರಿದ್ದರು. ಅವರಲ್ಲಿ ಇಬ್ಬರು ಕೇರಳ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರು. ಒಬ್ಬರು ಶ್ರೀ ಪದ್ಮನಾಭ ದೇವಸ್ಥಾನದ ಉಸ್ತುವಾರಿಯನ್ನು ಹೊತ್ತಿರುವ ಟ್ರಸ್ಟಿನ ಪ್ರತಿನಿಧಿ. ಇನ್ನೊಬ್ಬರು ಈ ಗುಪ್ತ ಕೊಠಡಿಗಳ ಬಾಗಿಲನ್ನು ತೆರೆಯುವಂತೆ ಕೋರ್ಟಿನಿಂದ ತೀರ್ಪು ಬರುವಂತೆ ಮಾಡಿದ್ದ ವಕೀಲ. ಇನ್ನೊಬ್ಬರು ರತ್ನವಿಜ್ಞಾನಿಯಾದ ಪ್ರಾಚೀನ ವಸ್ತುಗಳ ಇಲಾಖೆಯ ಅಧಿಕಾರಿ. ಕೊನೆಯವರು ಓರ್ವ ಐಎಎಸ್ ಅಧಿಕಾರಿ.

ಅವತ್ತು ಜೂನ್ ತಿಂಗಳ 27ನೇ ತಾರೀಖು. ಅವರೆಲ್ಲ ತಿರುವನಂತಪುರಂ ನಗರದಲ್ಲಿರುವ ಪ್ರಾಚೀನ ಪದ್ಮನಾಭಸ್ವಾಮಿ ದೇವಸ್ಥಾನದ ಇಪ್ಪತ್ತು ಅಡಿ ಆಳದಲ್ಲಿರುವ ನೆಲಮಾಳಿಗೆಯಲ್ಲಿ ನಿಂತಿದ್ದರು. ಎಲ್ಲೆಡೆ ಕತ್ತಲು. ಇಲ್ಲಿನ ಕೊಠಡಿಗಳಲ್ಲಿ ಹಲವನ್ನು ಶತಮಾನಗಳಿಂದ, ಕೆಲವನ್ನು ದಶಕಗಳಿಂದ ಯಾರೂ ತೆರೆಯದಿದ್ದರಿಂದ ಉಸಿರಾಡಲು ಗಾಳಿಯೇ ಇರಲಿಲ್ಲ.

ಆಗ ಹೊನಲು ದೀಪಗಳನ್ನು ಹಚ್ಚಲಾಯಿತು. ಎಲ್ಲರೂ ತಮ್ಮ ಮುಖಕ್ಕೆ ಆಕ್ಸಿಜನ್ ಮಾಸ್ಕ್‌ಗಳನ್ನು ಕಟ್ಟಿಕೊಂಡರು. ಆಗ ಬೆಳಗ್ಗೆ ಹನ್ನೊಂದು ಗಂಟೆ ಸಮಯ. ಆ ತಂಡದ ಮುಂದೆ ಒಟ್ಟು ಆರು ಕೊಠಡಿಗಳಿದ್ದವು. ಅವುಗಳನ್ನು ಎ,ಬಿ,ಸಿ,ಡಿ,ಇ ಮತ್ತು ಎಫ್ ಎಂದು ಗುರುತಿಸಲಾಯಿತು.

ಅಂದಹಾಗೆ ಈ ಕೊಠಡಿಯಲ್ಲಿರುವ ವಸ್ತುಗಳನ್ನು ಲೆಕ್ಕಹಾಕಬೇಕು ಎಂದು ಆದೇಶಿಸಿದ್ದ ಕೋರ್ಟ್ ಅವುಗಳ ಚಿತ್ರಗಳನ್ನು ತೆಗೆಯಬಾರದು ಎಂದೂ ಹೇಳಿತ್ತು. ಆ ಕಾರಣಕ್ಕೆ ತಂಡದ ಸದಸ್ಯರೆಲ್ಲ ತಮ್ಮ ಮೊಬೈಲ್‌ಫೋನ್‌ಗಳನ್ನು ಹೊರಗಡೆ ಇಟ್ಟು ನೆಲಮಾಳಿಗೆಯಲ್ಲಿನ ಈ ಕೊಠಡಿಗಳ ಮುಂದೆ ನಿಂತಿದ್ದರು.

ಮೊದಲಿಗೆ ಅವರೆಲ್ಲ 'ಸಿ' ಕೊಠಡಿಯನ್ನು ತೆರೆದರು. ಅದರಲ್ಲಿ ವಿಶೇಷ ಹಬ್ಬಗಳ ದಿನ ದೇವಸ್ಥಾನದಲ್ಲಿ ನಡೆಸುವ ಪೂಜೆಗೆ ಬೇಕಾಗಿದ್ದ ವಸ್ತುಗಳಿದ್ದವು. ಅವುಗಳನ್ನೆಲ್ಲ ಲೆಕ್ಕ ಹಾಕಿ, ಅವುಗಳ ಮೌಲ್ಯವನ್ನು ಅಂದಾಜಿಸಿ, ಪಟ್ಟಿ ಮಾಡುವುದರಲ್ಲಿ ರಾತ್ರಿ 7.30 ಆಗಿತ್ತು. ಆ ಕೊಠಡಿಯಲ್ಲಿದ್ದ ವಸ್ತುಗಳೇ 30 ಕೋಟಿ ರೂಪಾಯಿಗಳನ್ನು ಮೀರಿಸುತ್ತಿತ್ತು. ಆಗ ತಂಡದ ಮುಖ್ಯಸ್ಥರಾದ ನಿವೃತ್ತ ನ್ಯಾಯಾಧೀಶ ಎಂ.ಎನ್. ಕೃಷ್ಣನ್ ಅವರು ಒಂದು ವಾರದಲ್ಲಿ ಎಲ್ಲ ಕೊಠಡಿಗಳನ್ನು ತೆರೆದು ತಮ್ಮ ಕೆಲಸವನ್ನು ಮುಗಿಸುತ್ತೇವೆ ಎಂಬ ಭರವಸೆಯನ್ನು ತೋರಿದ್ದರು.

ಪಾಪ, ಬರುವ ದಿನಗಳಲ್ಲಿ ಉಳಿದ ಕೊಠಡಿಗಳಲ್ಲಿದ್ದ ಅಚ್ಚರಿಗಳ ಬಗ್ಗೆ ಆಗ ಅವರಿಗೆ ಗೊತ್ತಿರಲಿಲ್ಲ.

ಮಾರನೆ ದಿನ 'ಡಿ'ಕೊಠಡಿಯನ್ನು ತೆರೆಯಲಾಯಿತು. ಆದರೆ ಅವತ್ತಿನ ಕೆಲಸ ಮೊದಲಿನಷ್ಟು ಸುಲಭವಾಗಿರಲಿಲ್ಲ, ಏಕೆಂದರೆ, ಅಲ್ಲಿ ಅದೆಷ್ಟು ಚಿನ್ನಾಭರಣಗಳಿದ್ದವೆಂದರೆ ಅವರಿಗೆ ಸುಪ್ರೀಂ ಕೋರ್ಟ್ ಹೇಳಿದ್ದಂತೆ ಅವುಗಳ 'ಲೆಕ್ಕ' ಮಾಡಲಿಕ್ಕೆ ಸಮಯವಿರಲಿಲ್ಲ, ಆದ್ದರಿಂದ ಅವರು ಆ ಚಿನ್ನಾಭರಣಗಳನ್ನು 'ತೂಕ' ಹಾಕಿ ಪಟ್ಟಿ ಮಾಡಲಾರಂಭಿಸಿದರು.

ಎರಡು ದಿನಗಳಾದ ನಂತರ ತಂಡದ ಎಲ್ಲರೂ ಆಕ್ಸಿಜನ್ ಮಾಸ್ಕ್ ತೊಟ್ಟು ಕೆಲಸ ಮಾಡುವುದು ಕಷ್ಟಸಾಧ್ಯ ಎಂದು ಗೊತ್ತಾಯಿತು. ಆಗ ವಿಶೇಷ ಯಂತ್ರಗಳ ಮೂಲಕ ಮೇಲಿನಿಂದ ಆ ಕೊಠಡಿಗಳ ಒಳಗೆ ಆಕ್ಸಿಜನ್‌ಅನ್ನು ಬಿಡುವ ಯಂತ್ರಗಳನ್ನು ತರಿಸಲಾಯಿತು. ಇದರಿಂದಾಗಿ ತಂಡದ ಸದಸ್ಯರಿಗೆ ಕೆಲಸ ಮಾಡುವುದು ಸುಲಭವಾಯಿತು. ಆದರೆ ಅವರ ಮುಂದೆ ಇನ್ನೂ ದೊಡ್ಡದಾದ ಸವಾಲುಗಳಿದ್ದವು.

ಮೂರನೆ ದಿನ 'ಇ' ಕೊಠಡಿಯನ್ನು ತೆಗೆದು ನೋಡಿದಾಗ ಅಲ್ಲಿ 300 ಕೋಟಿ ರೂಪಾಯಿ ಮೌಲ್ಯದ ವಸ್ತುಗಳು ಸಿಕ್ಕವು. ಅಂದರೆ 'ಸಿ', 'ಡಿ' ಮತ್ತು 'ಎಫ್' ಎಂಬ ಮೂರು ಕೊಠಡಿಗಳಲ್ಲಿ ತಂಡಕ್ಕೆ ಸುಮಾರು 20,000 ಕೋಟಿ ರೂಪಾಯಿಗಳನ್ನು ಚಿನ್ನಾಭರಣಗಳು ಸಿಕ್ಕಿತ್ತು.

ಜುಲೈ 1ರಂದು ನಾಲ್ಕನೇ 'ಎಫ್' ಕೊಠಡಿಯ ಬಾಗಿಲನ್ನು ತೆರೆಯಲು ಸಿದ್ಧರಾದರು. ಆದರೆ ಆ ಕೊಠಡಿಗೆ ಹಾಕಿದ್ದ ಬೀಗ ಅದೆಷ್ಟು ಸಂಕೀರ್ಣವಾಗಿತ್ತೆಂದರೆ ಅದನ್ನು ತೆರೆಯಲು ಅವರಿಗೆ ಅರ್ಧದಿನವೇ ಬೇಕಾಯಿತು. ಆದರೆ ಅದನ್ನು ತೆಗೆದುನೋಡಿದಾಗ ಇಡೀ ತಂಡವೇ ಬೆಕ್ಕಸಬೆರಗಾಗಿ ನಿಂತಿತು. ಏಕೆಂದರೆ ಆ ಕೊಠಡಿಯಲ್ಲಿ 18 ಅಡಿ ವಜ್ರ ಖಚಿತ ಸರ, 2,000ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಚಿನ್ನದ ಸರಗಳು, ಮೂಟೆಗಟ್ಟಲೆ ವಜ್ರ ವೈಢೂರ್ಯಗಳು ಸಿಕ್ಕವು. ಅವುಗಳ ಒಟ್ಟು ಮೌಲ್ಯ 30,000 ಕೋಟಿ ಆಗಿತ್ತು!

ಆಗಲೇ ಈ ದೇವಸ್ಥಾನದ ಬಗ್ಗೆ ಎಲ್ಲೆಡೆ ಕುತೂಹಲ ಶುರುವಾಯಿತು.

ಅಷ್ಟೊತ್ತಿಗಾಗಲೆ ಒಂದು ವಾರ ಮುಗಿದಿತ್ತು, ಆದರೆ ಆ ತಂಡಕ್ಕೆ ವಹಿಸಿದ್ದ ಅರ್ಧದಷ್ಟು ಕೆಲಸವೂ ಮುಗಿದಿರಲಿಲ್ಲ.

ಆನಂತರ ಅವರು 'ಎ' ಎಂದು ಗುರುತಿಸಲಾಗಿದ್ದ ಕೊಠಡಿಯನ್ನು ತೆರೆಯಲು ಸಜ್ಜಾದರು. ಈ ಹಿಂದೆ ಈ ಕೊಠಡಿಯನ್ನು ತೆರೆದು ನೂರಕ್ಕಿಂತಲೂ ಹೆಚ್ಚು ವರ್ಷಗಳಾಗಿದೆ. ನೆಲವನ್ನು ಅಗೆದು ನಿರ್ಮಿಸಲಾಗಿರುವ



ನಿಧಿ ಶೋಧಿಸಿದ ತಂಡ

ಈ ಕೊಠಡಿ ಹೇಗಿದೆ ಎಂದರೆ ಮತ್ತೊಬ್ಬರ ನೆರವಿಲ್ಲದೆ ಯಾರೂ ಈ ಕೊಠಡಿಯೊಳಗೆ ಇಳಿಯುವಂತಿಲ್ಲ ಅಥವಾ ಹತ್ತಿ ಬರುವಂತಿಲ್ಲ. ಮೊದಲು ಈ ಕೊಠಡಿಯನ್ನು ನೋಡಿದಾಗ ಅಲ್ಲಿ ಗುಡ್ಡೆಗುಡ್ಡೆಯಾಗಿ ಶೇಖರಣೆಗೊಂಡಿದ್ದ ಧೂಳು ಮಾತ್ರ ಕಾಣಿಸಿತು. ಆದರೆ ತಂಡವು ಆ ಧೂಳಿನ ರಾಶಿಗಳನ್ನು ಬಗೆದು ನೋಡಿದಾಗ ಅವುಗಳ ಒಳಗೆ ರಾಶಿರಾಶಿ ವಜ್ರ, ಮುತ್ತು, ಚಿನ್ನಾಭರಣಗಳಿದ್ದದ್ದು ಗೊತ್ತಾಯಿತು. ಏನಾಗಿತ್ತೆಂದರೆ ಈ ವಜ್ರ, ಮುತ್ತು, ಚಿನ್ನಗಳನ್ನು ಮರದ ಪೆಟ್ಟಿಯಲ್ಲಿ ಹಿಂದಿನ ಕಾಲದಲ್ಲಿ ಇಡಲಾಗಿತ್ತು, ಆದರೆ ಕಾಲಕ್ರಮೇಣ ಮರದ ಪೆಟ್ಟಿಗೆಗಳು ಗೆದ್ದಲು ಹಿಡಿದು ಧೂಳಾಗಿ ಪರಿವರ್ತನೆಗೊಂಡಿದ್ದು, ತಂಡವು ಈ ಧೂಳಿನ ರಾಶಿಗಳನ್ನು ಹತ್ತಾರು ಮೂಟೆಗಳಲ್ಲಿ ಹೊರತೆಗೆದು ಅದರಲ್ಲಿದ್ದ ಸಂಪತ್ತನ್ನೆಲ್ಲ ತೂಕ ಮಾಡಿ ಪಕ್ಕಕ್ಕೆ ಇಟ್ಟಿತು.

ಹೀಗೆ 'ಧೂಳ'ನ್ನು ತೆಗೆದು ಆ ಕೊಠಡಿಯನ್ನು ಸ್ವಚ್ಛ ಮಾಡಿದ ನಂತರ, ನೆಲಹಾಸಿನ ಕಲ್ಲುಗಳ ಮೇಲೆ ಬಾಣದ ಗುರುತುಗಳಿರುವುದು ತಂಡದ ಗಮನಕ್ಕೆ ಬಂತು. ಆ ಗುರುತುಗಳನ್ನು ಪರೀಕ್ಷಿಸಿ ನೋಡಿದಾಗ ಆ ಕೊಠಡಿಯಿಂದ ಇನ್ನೂ ಕೆಳಗಡೆ ನೆಲಗವಿಯೊಂದು ಇದ್ದು ಅದನ್ನು ಪ್ರವೇಶಿಸದಂತೆ ಕಲ್ಲು ಚಪ್ಪಡಿಯನ್ನು ಹಾಕಿದ್ದು ಗೊತ್ತಾಯಿತು. ಅಷ್ಟೇ ಅಲ್ಲ, ಅದೇ 'ಎ' ಕೊಠಡಿಯೊಳಗಡೆ ಮತ್ತೊಂದು ಕೊಠಡಿಯೂ ಇದ್ದು ಅದಕ್ಕೆ ಸ್ಟೀಲ್ ಬಾಗಿಲನ್ನು ಅಳವಡಿಸಲಾಗಿತ್ತು.

ಆ ಸ್ಟೀಲ್ ಬಾಗಿಲನ್ನು ತೆರೆಯಲು ತಂಡ ಅದೆಷ್ಟೇ

...12

## ಅತಿ ಶ್ರೀಮಂತ ರಾಜರು ಯಾರ್‍ಯಾರು?



ಭೂಮಿಬೋಲ್ ಮಾರ್ತಾಂಡ ವರ್ಮ ಬ್ರುನೈನ ಸುಲ್ತಾನ ಎರಡನೆ ಆಲ್ಬರ್ಟ್ ಎರಡನೆ ಎಲಿಜಬತ್

ಈಗ ಕೇರಳದ ದೇವಸ್ಥಾನದಲ್ಲಿ ಪತ್ತೆ ಆಗಿರುವ ರೂಪಾಯಿ 1,00,00,00,00,00,000 (ಡಾಲರ್ ಲೆಕ್ಕದಲ್ಲಿ 22 ಬಿಲಿಯನ್ ಡಾಲರ್‌ಗಳು) ಮೌಲ್ಯದ ಚಿನ್ನಾಭರಣಗಳು ಕೊನೆಗೂ ತಿರುವಾಂಕೂರ್ ರಾಜವಂಶದ ಹಾಲಿ ಮುಖ್ಯಸ್ಥ ಮಾರ್ತಾಂಡ ವರ್ಮನ ಪಾಲಾದರೆ ಆತ ಜಗತ್ತಿನಲ್ಲೇ ಎರಡನೆ ಅತಿ ಶ್ರೀಮಂತ ರಾಜನಾಗುತ್ತಾನೆ!

ಈಗ ಜಗತ್ತಿನ ಅತಿ ಶ್ರೀಮಂತ ರಾಜ ಎನಿಸಿಕೊಂಡಿರುವವನು ಥಾಯ್‌ಲ್ಯಾಂಡಿನ ರಾಜಾಧಿರಾಜ ಭೂಮಿಬೋಲ್. ಆತನ ಸಂಪತ್ತಿನ ಒಟ್ಟು ಮೌಲ್ಯ 30 ಬಿಲಿಯನ್ ಡಾಲರ್‌ಗಳು.

ಮಾರ್ತಾಂಡ ವರ್ಮನ ನಂತರದ ಮೂರನೆ ಸ್ಥಾನದಲ್ಲಿ ಬ್ರುನೈನ ಸುಲ್ತಾನ ಬರುತ್ತಾನೆ. ಆತನ ಬಳಿ ಇರುವ ಆಸ್ತಿಯ ಮೊತ್ತ 20 ಬಿಲಿಯನ್ ಡಾಲರ್‌ಗಳು.

ಯೂರೋಪಿನಲ್ಲಿರುವ ಚಿಕ್ಕ ಮೊನಾಕೋ ಸಾಮ್ರಾಜ್ಯದ ರಾಜಕುವರ ಎರಡನೆ ಆಲ್ಬರ್ಟ್ ಹತ್ತಿರ ಸುಮಾರು ಒಂದು ಬಿಲಿಯನ್ ಡಾಲರ್‌ಗಳಷ್ಟು ಸಂಪತ್ತಿದ್ದು ಆತ ನಾಲ್ಕನೆ ಸ್ಥಾನ ಪಡೆಯುತ್ತಾನೆ.

ಇವರೆಲ್ಲರಿಗೆ ಹೋಲಿಸಿದರೆ ಅತಿ ಹೆಚ್ಚು ಪ್ರಚಾರ ಪಡೆಯುತ್ತಿರುವ ಇಂಗ್ಲೆಂಡಿನ ರಾಣಿ ಎರಡನೆ ಎಲಿಜಬತ್ ಅತಿ 'ಬಡವಿ'ಯಾದ ಸಾಮ್ರಾಟಿನಿ ಎನಿಸಿಕೊಳ್ಳುತ್ತಾಳೆ. ಏಕೆಂದರೆ ಆಕೆಯ ಬಳಿ ಇರುವುದು ಕೇವಲ 450 ಮಿಲಿಯನ್ ಡಾಲರ್‌ಗಳಷ್ಟು ಆಸ್ತಿ!



ದೇವಸ್ಥಾನದ ಸಂಪ್ರದಾಯಗಳಲ್ಲಿ ಭಾಗವಹಿಸುತ್ತಿರುವ ಮಾರ್ತಾಂಡ ವರ್ಮ

# 1908 ಮತ್ತು 1931ರಲ್ಲಿ ...ರೆಯಲಾಗಿತ್ತು!



...ರೀ ಪದ್ಮನಾಭಸ್ವಾಮಿ ದೇವಸ್ಥಾನದಲ್ಲಿರುವ ಗುಪ್ತ ...ಗಳನ್ನು ಈ ಹಿಂದೆ 1908ರಲ್ಲಿ ತೆರೆಯಲು ...ಸಲಾಗಿತ್ತು ಎಂದು ಬ್ರಿಟಿಷ್ ಲೇಖಕಿ ಎಮಿಲಿ ... ಹಾಚ್ ಎಂಬುವವರು 1933ರಲ್ಲಿ ಬರೆದ ...ಕೂರ್: ಎ ಗೈಡ್ ಫಾರ್ ದ ವಿಸಿಟರ್' ಎಂಬ ...ದಲ್ಲಿ ದಾಖಲಿಸಿದ್ದಾರೆ.

...ಈಗ್ಗೆ 25 ವರ್ಷಗಳ ಹಿಂದೆ ತಿರುವಾಂಕೂರ್ ...ಜ್ಯ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿತ್ತು. ಆಗ ...ನದ ಅಡಿ ಇರುವ ಕೊಠಡಿಗಳಲ್ಲಿ ಅಪಾರ ಸಂಪತ್ತು ...ದು ಅರಿತಿದ್ದ ರಾಜವಂಶಸ್ಥರು ಅವುಗಳ ಬಾಗಿಲನ್ನು ...ಲು ನಿರ್ಧರಿಸಿದರು. ಆಗ ದೀವಟಿಗೆಗಳನ್ನು ಹಿಡಿದ ...ವೊಂದು ಆ ಬಾಗಿಲುಗಳನ್ನು ತೆರೆಯಲು ...ದರು. ಆದರೆ ಕೊಠಡಿಯ ಬಾಗಿಲ ಬಳಿ ವಿಷ ...ಗಳು ಇರುವುದನ್ನು ಕಂಡು ಭಯದಿಂದ ...ಹೋಗಿದ್ದರು" ಎಂದು ಎಮಿಲಿ ಹೇಳಿದ್ದಾರೆ.


...ಗೆಯೇ 1930ರಲ್ಲೂ ತಿರುವಾಂಕೂರ್ ಸಾಮ್ರಾಜ್ಯ ... ಭಾರತದ ಸಾಮ್ರಾಜ್ಯಗಳಂತೆ ಮತ್ತೆ ಆರ್ಥಿಕ ತೊಂದರೆಯನ್ನು ಎದುರಿಸುತ್ತಿತ್ತು. ಆಗ ಮಹಾರಾಜರಾಗಿದ್ದ ಚಿಥಿರ ಬಲರಾಮ ವರ್ಮ ಅವರು ಇದೇ ಕೊಠಡಿಗಳನ್ನು ತೆರೆಯಲು ನಿರ್ಧರಿಸಿದರು. ಇದನ್ನು ಕುರಿತು ಅಂದಿನ ಕಾಲದಲ್ಲಿ 'ದಿ ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದ ವರದಿ ಹೀಗಿದೆ: "ಅವತ್ತು ಭಾನುವಾರ. ಡಿಸೆಂಬರ್ 6, 1931. ದೇವಸ್ಥಾನದ ಪೂಜಾರಿಗಳು ಸೂಚಿಸಿದ್ದ ಶುಭ ಗಳಿಗೆಯಾದ ಬೆಳಗ್ಗೆ ಹತ್ತು ಗಂಟೆಗೆ ಒಂದು ಕೊಠಡಿಯ ಬಾಗಿಲನ್ನು ತೆರೆಯಲು ತಂಡವೊಂದು ಸಿದ್ಧವಾಗಿತ್ತು. ಆ ತಂಡದಲ್ಲಿ ಸ್ವತಃ ಮಹಾರಾಜನೂ ಇದ್ದ. ಆಕಸ್ಮಾತ್ ಅನಾಹುತವೇನಾದರು ಸಂಭವಿಸಿದರೆ ಎಂದು ಹೊರಗಡೆ ಒಂದು ಆಂಬುಲೆನ್ಸ್ ಅನ್ನು ನಿಲ್ಲಿಸಲಾಗಿತ್ತು. ಭೂಮಿಯ ಆಳದಲ್ಲಿದ್ದ ಕೊಠಡಿಯಲ್ಲಿ ಬೆಳಕು ಚೆಲ್ಲಲು ಹೊಸಲು ದೀಪಗಳನ್ನು, ಉಸಿರಾಡಲು ಗಾಳಿಯನ್ನು ಬೀಸಲು ದೊಡ್ಡ ದೊಡ್ಡ ಫ್ಯಾನುಗಳನ್ನು ಸಿದ್ಧಮಾಡಿಕೊಳ್ಳಲಾಗಿತ್ತು.

ಬಾಗಿಲಿಗೆ ಹಾಕಿದ್ದ ಬೀಗ ತುಕ್ಕುಹಿಡಿದಿತ್ತು. ಅದಕ್ಕೆ ಬೀಗದಕೈ ಹಾಕಿ ಎಷ್ಟೇ ಪ್ರಯತ್ನಿಸಿದರೂ ಅದು ತೆರೆದುಕೊಳ್ಳಲಿಲ್ಲ. ಕೊನೆಗೆ ಆ ಬೀಗವನ್ನು ಒಡೆದು ಹಾಕಲು ನಿರ್ಧರಿಸಲಾಯಿತು. ಎರಡೂವರೆ ಗಂಟೆಗಳ ಕಾಲ ಬೇಕಾಯಿತು ಆ ಬಾಗಿಲನ್ನು ತೆರೆಯಲು.

ಬಾಗಿಲನ್ನು ತೆರೆದು ನೋಡಿದಾಗ ಅದರೊಳಗೆ ಹಿತ್ತಾಳೆಯಿಂದ ಮಾಡಲಾಗಿದ್ದ ನಾಲ್ಕು ದೊಡ್ಡ ದೊಡ್ಡ ಪೆಟ್ಟಿಗೆಗಳು ಕಂಡುಬಂದವು. ಆ ಪೆಟ್ಟಿಗೆಗಳಲ್ಲಿ ಹಳೆಯದಾದ ನಾಣ್ಯಗಳಿದ್ದವು. ಅವುಗಳ ಪಕ್ಕದಲ್ಲೇ ಉಗ್ರಾಣ ತರಹದ ವಸ್ತುಗಳಿದ್ದು ಅವುಗಳ ತುಂಬ ಚಿನ್ನ ಮತ್ತು ಬೆಳ್ಳಿ ಬಿಲ್ಲೆಗಳಿದ್ದವು. ಇವುಗಳ ಮೇಲೆ ಹಲವಾರು ಚಿನ್ನದ ಪಾತ್ರೆಪಗಡೆಗಳಿದ್ದವು. ಅದೇ ಕೊಠಡಿಯಲ್ಲಿ ನೆಲಕ್ಕೆ ಬಿಗಿದಿದ್ದ ಮರದ ಪೆಟ್ಟಿಗೆಯಲ್ಲಿ ಆರು ವಿವಿಧ ಭಾಗಗಳಿದ್ದವು. ಅವೆಲ್ಲವುಗಳಲ್ಲಿ ವಜ್ರ, ಪಚ್ಚೆ, ಮಾಣಿಕ್ಯ, ಇತರೆ ರತ್ನಾಭರಣಗಳಿದ್ದವು. ಅಷ್ಟೇ ಅಲ್ಲದೆ, 300 ಚಿನ್ನದ ಬಿಂದಿಗೆಗಳಿದ್ದು ನಾಲ್ಕು ದೊಡ್ಡ ದೊಡ್ಡ ಪೆಟ್ಟಿಗೆಗಳಿದ್ದವು. ಈ ಕೊಠಡಿಯ ಪಕ್ಕದಲ್ಲೇ ಇನ್ನೊಂದು ಕೊಠಡಿ ಇರುವುದು ತಂಡದ ಗಮನಕ್ಕೆ ಬಂತು.

ಆ ನಾಲ್ಕು ದೊಡ್ಡ ಪೆಟ್ಟಿಗೆಗಳನ್ನು ಹೊರತೆಗೆದ ನಂತರ ಮಧ್ಯಾಹ್ನ 3.30ಕ್ಕೇ ಈ ಕಾರ್ಯಾಚರಣೆಯನ್ನು ನಿಲ್ಲಿಸಿ ಕೊಠಡಿಯನ್ನು ಮತ್ತೆ ಮುಚ್ಚಲಾಯಿತು. ಆ ಪೆಟ್ಟಿಗೆಗಳಲ್ಲಿದ್ದ ಚಿನ್ನಾಭರಣಗಳನ್ನು ಲೆಕ್ಕಹಾಕಲು ಅವುಗಳನ್ನು ಅರಮನೆಗೆ ತಗೆದುಕೊಂಡು ಹೋಗಲಾಯಿತು."

ಇದೆಲ್ಲವನ್ನು 'ದಿ ಹಿಂದೂ' ಪತ್ರಿಕೆಯ ವರದಿಗಾರ ಪ್ರತ್ಯಕ್ಷವಾಗಿ ನೋಡಿ ವರದಿ ಮಾಡಿದ್ದ. ಆದರೆ ಇದಾದ ನಂತರದ ದಿನಗಳಲ್ಲಿ ಉಳಿದ ಕೊಠಡಿಗಳನ್ನು ತೆರೆಯಲಾಯಿತೆ? ಅಲ್ಲಿಂದ ತೆಗೆದುಕೊಂಡು ಹೋಗಿದ್ದ ಚಿನ್ನಾಭರಣಗಳು ಏನಾದವು? ಎಂಬುದರ ಬಗ್ಗೆ ಯಾರಿಗೂ ಇವತ್ತಿನತನಕ ಗೊತ್ತಿಲ್ಲ!!





ಇಲ್ಲಿಯವರೆಗೂ ಪದ್ಮನಾಭ ಗುಡಿಯ ಗರ್ಭದಲ್ಲಿ ಸಿಕ್ಕಿರುವ ಚಿನ್ನಾಭರಣಗಳಿವು:

* ಲೆಕ್ಕವಿಲ್ಲದಷ್ಟು ವಜ್ರಖಚಿತ ಚಿನ್ನದ ಕಿರೀಟಗಳು. ಅವುಗಳಲ್ಲಿ ತಿರುವಾಂಕೂರ್ ರಾಜಮನೆತನದವರು ರಾಜನ ಪೀಠಾಭಿಷೇಕದ ಸಮಯದಲ್ಲಿ ಬಳಸುತ್ತಿದ್ದ ಕಿರೀಟವೂ ಒಂದು. ಇದನ್ನು 'ಕುಲಶೇಖರ ಪೆರುಮಾಳ್ ಕಿರೀಟ' ಎಂದು ಕರೆಯುತ್ತಾರೆ.
* ಚಿನ್ನದಿಂದ ಮಾಡಲಾಗಿರುವ ಬಿಲ್ಲು ಬಾಣಗಳು.
* ಚಿನ್ನದಿಂದ ಮಾಡಿರುವ ಪಾತ್ರೆಗಳು, ತಟ್ಟೆ, ಚೆಂಬು, ಲೋಟ ಇತ್ಯಾದಿ ಪೂಜಾ ಸಾಮಗ್ರಿಗಳು.
* ಈಸ್ಟ್ ಇಂಡಿಯಾ ಕಂಪನಿ ಕಾಲದ 17 ಕೇಜಿಯಷ್ಟು ಚಿನ್ನದ ನಾಣ್ಯಗಳು.
* ಅಕ್ಕಿಯ ಆಕಾರದಲ್ಲಿ ಮಾಡಲಾಗಿದ್ದ ಒಂದು ಟನ್ನಿನಷ್ಟು 'ಚಿನ್ನದ ಅಕ್ಕಿ'.
* 18 ಅಡಿ ಉದ್ದದ, 10.5 ಕೇಜಿ ತೂಕದ ಚಿನ್ನದ ಸರ. ಈ ಸರವನ್ನು ವಜ್ರ, ಮುತ್ತು, ಹೀರ ಇತ್ಯಾದಿಗಳು ಅಲಂಕರಿಸಿದ್ದು ಇದೊಂದೇ ಕೋಟ್ಯಾಂತರ ರೂಪಾಯಿ ಬೆಲೆ ಬಾಳುತ್ತದೆ.
* ಚಿನ್ನದಲ್ಲಿ ಮಾಡಲಾಗಿರುವ ಲೆಕ್ಕವಿಲ್ಲದಷ್ಟು ಸರಪಳಿಗಳು.
* ಮೂಟೆಗಟ್ಟಲೆ ವಜ್ರಗಳು. ಇದರಲ್ಲಿನ ಒಂದೊಂದು ವಜ್ರದ ಮೌಲ್ಯವೇ ಕನಿಷ್ಠ ಐದು ಕೋಟಿ ರೂಪಾಯಿಗಳು.
* ಡೈಮಂಡ್ ಮತ್ತು ಪಚ್ಚೆಗಳಿಂದ ಅಲಂಕೃತವಾಗಿರುವ ಪ್ರಾಚೀನ ಆಭರಣಗಳು
* ಮುತ್ತು ಪಚ್ಚೆ ಮಾಣಿಕ್ಯ ನೀಲಮಣಿ ಮತ್ತು ರತ್ನಗಳಿದ್ದ ಸಹಸ್ರಾರು ಗೋಣಿಚೀಲಗಳು.
* 2,000ಕ್ಕಿಂತ ಹೆಚ್ಚಿನ ಚಿನ್ನದ ನೆಕ್‌ಲೇಸ್‌ಗಳು. ಇವೆಲ್ಲವುಗಳ ಒಟ್ಟು ತೂಕ ಒಂದು ಕ್ವಿಂಟಾಲ್‌ಗಿಂತಲೂ ಹೆಚ್ಚು.
* ನೂರಾರು ಬೆಳ್ಳಿ ಪಾತ್ರೆಗಳು ಮತ್ತು ಬೆಳ್ಳಿ ಗಟ್ಟಿಗಳು.
* ಎರಡು ಅಡಿ ಎತ್ತರದ ವಜ್ರಖಚಿತ ವಿಷ್ಣು ಮತ್ತು ಶಿವನ ವಿಗ್ರಹಗಳು.
* ಚಿನ್ನದ ಕೊಡೆಗಳು.
* ಲೆಕ್ಕವಿಲ್ಲದಷ್ಟು ಬಳೆ, ಉಂಗುರ, ಓಲೆ, ಇತ್ಯಾದಿಗಳು.
* ಸಹಸ್ರಾರು ಲೋಲಕಗಳು ಮತ್ತು ಚಿನ್ನದ ದಂಡ, ಕೋಲುಗಳು.
* ಒಂದು ಲಕ್ಷಕ್ಕಿಂತಲೂ ಹೆಚ್ಚು ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳು.
* ನೂರಾರು ವಜ್ರಖಚಿತ ಡಾಬುಗಳು. ಇವುಗಳ ಒಂದೊಂದರ ತೂಕವೇ ಎರಡು ಕೇಜಿಗಿಂತಲೂ ಹೆಚ್ಚು.
* ಒಂದು ಅಥವಾ ಎರಡು ಕೇಜಿ ತೂಕದ ಚಿನ್ನದ ಗಟ್ಟಿಗಳು.
* ಸಹಸ್ರಾರು ಹನ್ನೆರಡೆಳೆ ಸರಗಳು.
* ವಜ್ರ ಮತ್ತು ಪಚ್ಚೆಯಿಂದ ಅಲಂಕಾರಗೊಂಡಿರುವ ನಾಲ್ಕು ಅಡಿ ಎತ್ತರವಿರುವ ವಿಷ್ಣುವಿನ ಚಿನ್ನದ ವಿಗ್ರಹ.
* ಎರಡು ಕೇಜಿ ತೂಕದ ಹಲವಾರು ವಿಗ್ರಹಗಳು.
* ನವರತ್ನಗಳನ್ನು ಹೊಂದಿರುವ 1,200 ಸರಗಳು.
* ಲೆಕ್ಕವಿಲ್ಲದಷ್ಟು ಬೆಲ್ಜಿಯಂ ವಜ್ರಗಳು.
* ಸಾವಿರಾರು ಫ್ರಾನ್ಸ್ ಮತ್ತು ವೆನೀಸ್ ಸಾಮ್ರಾಜ್ಯದ ನಾಣ್ಯಗಳು.
* ದೇವರ ಪ್ರತಿಮೆಗಳಿಗೆ ಅಭಿಷೇಕ ಮಾಡಲು ಚಿನ್ನದ ತೊಟ್ಟಿಗಳು. ಅಂದರೆ ಬಾತ್ ಟಬ್‌ಗಳು



# ...ದು ಸೌಂದರ್ಯಭರಿತ ದೇಗುಲ

...ರೀ ಪದ್ಮನಾಭಸ್ವಾಮಿ ದೇವಸ್ಥಾನ ಇವತ್ತು ತನ್ನ ಒಡಲಲ್ಲಿ ಇಟ್ಟುಕೊಂಡಿದ್ದ ಅಪಾರ ... ಐಶ್ವರ್ಯದ ಕಾರಣಕ್ಕೆ ವಿಶ್ವದ ಗಮನಸೆಳೆಯುತ್ತಿದೆ ನಿಜ. ಆದರೆ ಇದಕ್ಕಿಂತ ಮುನ್ನ ...ರು ಶತಮಾನಗಳಿಂದ ಈ ದೇವಸ್ಥಾನ ತನ್ನ ಸೌಂದರ್ಯದ ಮೂಲಕ ಜನಮನವನ್ನು ... ದ್ರಾವಿಡ ಮತ್ತು ಕೇರಳ ಶೈಲಿಯ ವಾಸ್ತುಶಿಲ್ಪದಲ್ಲಿ ನಿರ್ಮಾಣಗೊಂಡಿರುವ ಈ ...ನದ ಎದುರು ಸ್ವರ್ಣಲೇಪಿತ ತಾಮ್ರದ ಪ್ಲೇಟ್‌ಗಳನ್ನು ಹೊದ್ದಿರುವ ಎಂಭತ್ತು ಅಡಿ ... ಧ್ವಜ ಸ್ತಂಭ ಇದೆ. ಅದರ ಹತ್ತಿರವೇ 'ಪದ್ಮ ತೀರ್ಥ' ಎಂಬ ಕಲ್ಯಾಣಿ ಇದೆ.



ದೇವಸ್ಥಾನದ ಗೋಪುರ 100 ಅಡಿ ಎತ್ತರವಿದ್ದು ಏಳು ಅಂತಸ್ತುಗಳನ್ನು ಹೊಂದಿದೆ. ಪ್ರತಿ ಅಂತಸ್ತು ಸುಂದರ ಕಲ್ಲಿನ ಶಿಲ್ಪಗಳಿಂದ ಅಲಂಕೃತಗೊಂಡಿದೆ. ಈ ಗೋಪುರದ ಅಡಿ ಇರುವ ಪ್ರದೇಶವನ್ನು 'ನಾಟಕ ಶಾಲಾ' ಎಂದು ಕರೆಯುತ್ತಾರೆ. ಇಲ್ಲಿ ಪ್ರತಿ ವರ್ಷ ಉತ್ಸವದ ಸಮಯದಲ್ಲಿ ಇಡೀ ರಾತ್ರಿ ಕಥಕ್ಕಳಿ ಪ್ರದರ್ಶನಗಳು ನಡೆಯುತ್ತವೆ.


ಇನ್ನು ದೇವಸ್ಥಾನದ ಒಳ ಆವರಣದ ಗೋಡೆಗಳ ಮೇಲೆ ವರ್ಣಚಿತ್ರಗಳು ಮತ್ತು ಮರದ ಮೇಲೆ ...ವ ಕೆತ್ತನೆಗಳಿವೆ. ಬಲಿಪೀಠ ಮಂಡಪಮ್ ಮತ್ತು ಮುಖ ಮಂಡಪಮ್ ಎಂಬ ... ದೊಡ್ಡ ಕೋಣೆಗಳಲ್ಲಿ ವಿವಿಧ ಹಿಂದೂ ದೇವತೆಗಳ ಅತ್ಯದ್ಭುತ ಪ್ರತಿಮೆಗಳಿವೆ. ... ಮಂದಿರದ ಚಾವಣಿಯಲ್ಲಿ ನವಗ್ರಹಗಳ ಕೆತ್ತನೆಗಳಿವೆ. ಇವೆಲ್ಲವುಗಳ ಅಂದವನ್ನು ...ವುದು ಅತಿಸುಂದರ ಕೆತ್ತನೆಗಳಿಂದ ಅಲಂಕೃತಗೊಂಡಿರುವ 365 ಕಲ್ಲುಕಂಬಗಳು. ...ನ ಕಂಬಗಳ ಮೇಲೆ ಮೂರ್ತಿಕಾರರು ಅದೆಂತಹ ಸೂಕ್ಷ್ಮ ಕಲೆಗಳನ್ನು ಬಿಡಿಸಿದ್ದಾರೆಂದರೆ ... ಕಂಬವನ್ನು ಒಂದು ಮಗ್ಗುಲಿಂದ ನೋಡಿದರೆ ಆನೆ ಕಾಣಿಸುತ್ತದೆ. ಆದರೆ ಅದನ್ನು ...ದು ಮಗ್ಗುಲಿಂದ ನೋಡಿದರೆ ಅದು ಬಸವನಂತೆ ಕಾಣಿಸುತ್ತದೆ. ಅಷ್ಟೇ ಅಲ್ಲ ...ಯಿಂದ ಆನೆಯ ಸೊಂಡಿಲಾಗಿರುವುದು ಅತ್ತ ಕಡೆ ಬಸವನ ಕೋಡಾಗಿದೆ!

...ು ವರ್ಷಗಳಿಗೊಮ್ಮೆ ಈ ದೇವಸ್ಥಾನದಲ್ಲಿ 'ಲಕ್ಷ ದೀಪಮ್' ಎಂಬ ಹಬ್ಬವನ್ನು ...ಲಾಗುತ್ತದೆ. ಆಗ ಒಂದು ಲಕ್ಷ ದೀಪಗಳನ್ನು ಹಚ್ಚಿಸಿದಾಗ ಈ ಸುಂದರ ದೇಗುಲವನ್ನು ...ು ಎರಡೇ ಕಣ್ಣು ಸಾಲದು ಎಂಬುದು ಜನರ ಅಭಿಪ್ರಾಯ.

# ...ರಾಜನಾದ ಪದ್ಮನಾಭ

...ಳದ ರಾಜಧಾನಿ ತಿರುವನಂತಪುರದ ಪೂರ್ವ ಕೋಟೆಯಲ್ಲಿರುವ ಶ್ರೀ ಪದ್ಮನಾಭ ...ನವನ್ನು ಕಟ್ಟಿದ್ದು ಯಾವಾಗ? ಈ ಪ್ರಶ್ನೆಗೆ ಸ್ಪಷ್ಟ ಉತ್ತರ ಬಲ್ಲವರಿಲ್ಲ. ಆದರೆ ಈ ...ದ ಬಗ್ಗೆ ಆರರಿಂದ ಒಂಭತ್ತನೆ ಶತಮಾನದಲ್ಲಿ ರಚಿತವಾದ ಕವನಗಳಲ್ಲಿ ಉಲ್ಲೇಖ ...ದರಿಂದ ಇದನ್ನು ಆ ಸಮಯದಲ್ಲೇ ನಿರ್ಮಿಸಿರಬಹುದೆಂದು ತರ್ಕಿಸಬಹುದು.

...ನಂತರ ತಿರುವಾಂಕೂರ್ ಸಾಮ್ರಾಜ್ಯವನ್ನು 18ನೇ ಶತಮಾನದಲ್ಲಿ ಸ್ಥಾಪಿಸಿದ ...ಂಡ ವರ್ಮ ಈ ದೇವಸ್ಥಾನದ ಉಸ್ತುವಾರಿಯನ್ನು ವಹಿಸಿಕೊಂಡು 1733ರಲ್ಲಿ ...ಜೀರ್ಣೋದ್ಧಾರ ಮಾಡಿಸಿದ. ಅಷ್ಟೇ ಅಲ್ಲ, ಇನ್ನು ಮುಂದೆ ತಿರುವಾಂಕೂರ್ ...ಜ್ಯಕ್ಕೆ ಪದ್ಮನಾಭ ದೇವನೇ ರಾಜನೆಂದೂ, ದೇವರ ಪರವಾಗಿ ತನ್ನ ವಂಶದವರು ನಡೆಸುತ್ತಾರೆಂದೂ, ಇನ್ನು ...ದೆ ತನ್ನ ವಂಶದವರ ...ೊಂದಿಗೆ 'ಪದ್ಮನಾಭದಾಸ' ಹೆಸರೂ ಸೇರಿರುತ್ತದೆಂದೂ ...ಸಿದ.



ದೇವಸ್ಥಾನದಲ್ಲಿರುವ ಪದ್ಮನಾಭಸ್ವಾಮಿಯು ವಿಷ್ಣುವಿನ ಇನ್ನೊಂದು ...ವಾಗಿದ್ದು, ಆತ ಇಲ್ಲಿ ಸಾವಿರ ಹೆಡೆಯ ಆದಿಶೇಷನ ಮೇಲೆ 'ಅನಂತಶಯನಮ್' ... ಯೋಗ ನಿದ್ರೆ) ಸ್ಥಿತಿಯಲ್ಲಿರುವಂತೆ ರೂಪಿಸಲಾಗಿದೆ. ಈ ಕಾರಣಕ್ಕೇ ಕೇರಳದ ...ಗೆ ತಿರುವನಂತಪುರಂ ಎಂಬ ಹೆಸರು ಲಭಿಸಿದೆ. ಮಾರ್ತಾಂಡ ವರ್ಮನು ... ಪದ್ಮನಾಭನ ದಾಸನಾಗಿ ಘೋಷಿಸಿಕೊಂಡ ನಂತರ ವಿಷ್ಣುವಿನ ಕೈಯಲ್ಲಿರುವ ಶಂಖವನ್ನೇ ತನ್ನ ಸಾಮ್ರಾಜ್ಯವನ್ನು ಚಿಹ್ನೆ ಆಗಿಸಿದ. ಇವತ್ತಿಗೂ ಆ ಶಂಖ ಕೇರಳ ರಾಜ್ಯದ ಮುದ್ರೆಯಲ್ಲಿ ಸ್ಥಾನ ಪಡೆದಿದೆ.



ಕೇರಳ ಇತಿಹಾಸದಲ್ಲಿ ಈ ಮಾರ್ತಾಂಡ ವರ್ಮನಿಗೆ ದೊಡ್ಡ ಸ್ಥಾನಮಾನವಿದೆ. ಇದಕ್ಕೆ ಒಂದು ಕಾರಣ ಈಗ ಡಚ್ಚರ ವಿರುದ್ಧ ಯುದ್ಧ ಮಾಡಿ ಅವರನ್ನು ಸೋಲಿಸಿದ್ದ. ಇತ್ತೀಚೆಗೆ ಈತನನ್ನು ಕುರಿತು ಒಂದು ಅದ್ದೂರಿ ಚಿತ್ರ ನಿರ್ಮಾಣಗೊಂಡಿದ್ದು ಅದರಲ್ಲಿ ಮಮ್ಮುಟ್ಟಿ ನಟಿಸಿದ್ದರು.

ಹೀಗೆ ಭಾರತದ ಇತಿಹಾಸದಲ್ಲಿ ದೇವನೊಬ್ಬ ಒಂದು ಸಾಮ್ರಾಜ್ಯಕ್ಕೆ ರಾಜನಾದ. ಆದರೆ ಈಗ ಪತ್ತೆಯಾಗಿರುವ ಅಪಾರ ಮೌಲ್ಯದ ಚಿನ್ನಾಭರಣಗಳು ಯಾರಿಗೆ ಸೇರಬೇಕೆಂಬ ವಿವಾದಕ್ಕೆ ಇದೇ ಕಾರಣವೂ ಆಗಿದೆ. ಈ ದೇವಸ್ಥಾನವು ತಿರುವಾಂಕೂರ್ ರಾಜಮನೆತನಕ್ಕೆ ಸೇರುತ್ತದೆ ಎಂದಾದರೆ ಇದರಲ್ಲಿ ಸಿಕ್ಕಿರುವ ಆಸ್ತಿ ಅವರ ಸ್ವತ್ತಾಗುತ್ತದೆ. ಆದರೆ ಮಾರ್ತಾಂಡ ವರ್ಮನ ವಂಶಸ್ಥರು ಕೇವಲ ದೇವರ ಹೆಸರಲ್ಲಿ ಆಡಳಿತ ನಡೆಸುತ್ತಿದ್ದರು ಎಂದಾದರೆ ಅದರಲ್ಲಿರುವ ಆಸ್ತಿಗಳೆಲ್ಲ ಜನರ ಸ್ವತ್ತಾಗುತ್ತದೆ.

ಈ ಎಲ್ಲ ಗೊಂದಲಗಳಿಂದಾಗಿ ಇದರ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಿರುವುದು ಸುಪ್ರೀಂಕೋರ್ಟ್. ಆಕಸ್ಮಾತ್ ಸುಪ್ರೀಂಕೋರ್ಟ್ ಈ ದೇವಸ್ಥಾನ ಮತ್ತು ಅದರ ಆಸ್ತಿ ರಾಜ್ಯ ಸರ್ಕಾರಕ್ಕೆ ಸೇರತಕ್ಕದ್ದು ಎಂದು ತೀರ್ಪು ನೀಡಿದರೆ 'ಗಾಡ್ಸ್ ಓನ್ ಕಂಟ್ರಿ' ಎಂದೇ ತನ್ನನ್ನು ಕರೆದುಕೊಳ್ಳುವ ಕೇರಳದ ಮೇಲೆ ನಿಜವಾಗಲೂ ದೇವರ ಆಶೀರ್ವಾದ ಇದೆ ಎಂದಾಗುತ್ತಲ್ಲವೆ?



## ...10 ನಿಧಿ ಸಿಕ್ಕಿದ್ದು....

ಪ್ರಯತ್ನಿಸಿದರೂ ಅವರಿಗೆ ಸಾಧ್ಯವಾಗಲಿಲ್ಲ. ಆಗ ಅವರು ಗ್ಯಾಸ್ ಕಟ್ಟರ್‌ಗಳನ್ನು ಕರೆಸಿದರು. ಗ್ಯಾಸ್ ಕಟ್ಟರ್‌ಗಳನ್ನು ಉಪಯೋಗಿಸಿ ಬಾಗಿಲನ್ನು ತೆರೆದು ಆ ಕೊಠಡಿಯನ್ನು ಪ್ರವೇಶಿಸಿದಾಗ ತಂಡದ ಪ್ರತಿ ಸದಸ್ಯರೂ ದಂಗಾದರು. ಆ ಕೊಠಡಿಯೊಳಗೆ ಇದ್ದ ವಜ್ರಖಚಿತ ಚಿನ್ನದ ಮೂರ್ತಿಗಳು, ಚಿನ್ನದ ತಗ್ಗುಗಳು, ಚಿನ್ನದ ಪೂಜಾ ಪಾತ್ರೆಗಳು, ಚಿನ್ನದ ನಾಣ್ಯಗಳು..... ತಂಡದಲ್ಲಿ ದೇವಸ್ಥಾನದ ಪ್ರತಿನಿಧಿಯಾಗಿರುವ ಹರಿಕುಮಾರ್ ಎಂಬುವವರು ಅದನ್ನೆಲ್ಲ ನೋಡಿದಾಗ **"Oh my God, this is unbelievable!"** ಎಂದು ಉದ್ಗಾರವೆತ್ತಿದರಂತೆ.

ನಿಜವಾಗಲೂ, ಯಾರ ಕಣ್ಣುಗಳೂ ನಂಬಲಾಗದಷ್ಟು ಐಶ್ವರ್ಯ ಆ ಕೊಠಡಿಯಲ್ಲಿತ್ತು.

ಅವುಗಳನ್ನೆಲ್ಲ ಲೆಕ್ಕಹಾಕಲು ತಂಡಕ್ಕೆ ಮೂರು ದಿನಗಳೇ ಬೇಕಾದವು. ಕೊನೆಗೆ 'ಎ' ಕೊಠಡಿಯಲ್ಲಿರುವ ಸಂಪತ್ತಿನ ಮೌಲ್ಯವೇ ಬರೋಬ್ಬರಿ **50,000** ಕೋಟಿ ಎಂದು ತಂಡ ಅಂದಾಜಿಸಿತು. ಅಂದಹಾಗೆ ಇದೇ 'ಎ' ಕೊಠಡಿಯಲ್ಲಿರುವ ಮತ್ತೊಂದು ಕೊಠಡಿಯನ್ನಾಗಲಿ, ನೆಲಗವಿಯನ್ನಾಗಲೀ ಇಲ್ಲಿಯವರೆಗೂ ತಂಡ ಶೋಧಿಸಿಲ್ಲ. ಅಷ್ಟೇ ಅಲ್ಲ, 'ಎ' ಕೊಠಡಿಯಂತೆ ನೂರುವರ್ಷಕ್ಕಿಂತಲೂ ಹೆಚ್ಚು ಕಾಲ ತೆರೆಯದೇ ಇರುವ 'ಬಿ' ಕೊಠಡಿಯನ್ನೂ ಇನ್ನೂ ತೆರೆದಿಲ್ಲ. ಹಲವರ ಪ್ರಕಾರ 'ಎ' ಕೊಠಡಿಯಲ್ಲಿದ್ದಂತೆ ಪ್ರಾಯಶಃ 'ಬಿ' ಕೊಠಡಿಯಲ್ಲೂ ಅಪಾರ ಮೌಲ್ಯದ ಚಿನ್ನಾಭರಣಗಳಿರಲಿಕ್ಕೂ ಸಾಕು.

ಈಗಾಗಲೇ 'ಬಿ' ಕೊಠಡಿಯನ್ನು ಬಿಟ್ಟು ಉಳಿದ ಐದು ಕೊಠಡಿಗಳಲ್ಲಿ ಸಿಕ್ಕಿರುವ ಸಂಪತ್ತಿನ ಮೌಲ್ಯ ಒಂದು ಲಕ್ಷ ಕೋಟಿ ರೂಪಾಯಿ ಎಂದು ಅಂದಾಜಿಸಲಾಗಿದೆ. ಅಂದಹಾಗೆ ಈ ಒಂದು ಲಕ್ಷ ಕೋಟಿ ಎಂದರೆ ಎಷ್ಟು ಸೊನ್ನೆಗಳಿರುತ್ತವೆ ಗೊತ್ತ? ಇಗೋ ಇಲ್ಲಿದೆ ನೋಡಿ: **1,00,00,00,00,00,000**!

ಇದು ಬರೀ ದೇವಸ್ಥಾನದಲ್ಲಿ ಸಿಕ್ಕಿರುವ ಚಿನ್ನ ಮತ್ತು ಇತರೆ ವಸ್ತುಗಳ ಮೌಲ್ಯ. ಆದರೆ ಇವೆಲ್ಲ ಪ್ರಾಚೀನ ಕಾಲದ ವಸ್ತುಗಳಾಗಿರುವುದರಿಂದ ಅವುಗಳಿಗೆ ಆಂಟಿಕ್ ಮೌಲ್ಯವೂ ಹೆಚ್ಚಾಗಿಯೇ ಇರುತ್ತವೆ. ಆ ಲೆಕ್ಕದಲ್ಲಿ ಇದೆಲ್ಲರ ಒಟ್ಟು ಮೊತ್ತ ಇನ್ನೂ ಮೂರ್ನಾಲ್ಕು ಬಾರಿ ಹೆಚ್ಚಬಹುದು!


ಇವತ್ತಿಗೆ (ಗುರುವಾರ, ಜುಲೈ 7) ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನದಡಿ ಇಪ್ಪತ್ತು ಅಡಿ ಆಳದಲ್ಲಿ ಇರುವ ಈ ಆರು ಗೌಪ್ಯ ಕೊಠಡಿಗಳ ಶೋಧ ಕಾರ್ಯ ಪ್ರಾರಂಭವಾಗಿ ಹನ್ನೊಂದು ದಿನಗಳೇ ಆಗಿವೆ. ಆದರೆ ಇನ್ನೂ ಒಂದು ಮುಖ್ಯ ಕೊಠಡಿ ಮತ್ತು ಉಪಕೊಠಡಿಗಳಲ್ಲಿನ ಶೋಧ ಕೆಲಸ ಪ್ರಾರಂಭವೇ ಆಗಿಲ್ಲ ... ಇದೆಲ್ಲ ಮುಗಿಯುವ ಹೊತ್ತಿಗೆ ಜನರು ಮತ್ತಷ್ಟು ಬೆಕ್ಕಸಬೆರಗಾಗುವಷ್ಟು ಸಂಪತ್ತು ಪತ್ತೆಯಾದರೂ ಅಚ್ಚರಿ ಇಲ್ಲ.

ಅಂದಹಾಗೆ ಒಂದು ಪುಟ್ಟ ಸಾಮ್ರಾಜ್ಯವಾಗಿದ್ದ ತಿರುವಾಂಕೂರ್ ರಾಜಮನೆತನಕ್ಕೆ ಇಷ್ಟೊಂದು ಚಿನ್ನಾಭರಣಗಳು ಬಂದಿದ್ದು ಎಲ್ಲಿಂದ? ಹಲ... ಇತಿಹಾಸಕಾರರ ಪ್ರಕಾರ, ಈ ಸಾಮ್ರಾ... ಕಡಲತೀರದಲ್ಲಿದ್ದಿದ್ದರಿಂದ ಎಲ್ಲ ವಿದೇಶಗಳೊಂದಿಗೆ ... ವ್ಯಾಪಾರ ಇಲ್ಲಿಂದಲೇ ನಡೆಯುತ್ತಿದ್ದದ್ದು ಒಂದ... ಕಾರಣವಾಗಿರಬಹುದು. ಹಾಗೆಯೇ ತಿರುವಾಂಕೂ... ರಾಜರು ಇತರೆ ಸಾಮ್ರಾಜ್ಯಗಳಿಂದ ದೋಚಿದ ಹಣವ... ಇದಾಗಿರಬಹುದು...

ಆದರೆ ಒಂದಂತೂ ಸತ್ಯ ಹಿಂದಿನ ಕಾಲದ ರಾಜ... ತಮ್ಮ ಸಾಮ್ರಾಜ್ಯದ ಸಂಪತ್ತನ್ನು ಸುರಕ್ಷಿತವಾಗಿಡಲು ಅದನ್ನ... ದೇವಸ್ಥಾನಗಳಲ್ಲಿ ಬಚ್ಚಿಡುತ್ತಿದ್ದರು. ಆ ಕಾರಣಕ್ಕೇ ವೈ... ದೇಶದವರು ದಾಳಿ ಮಾಡಿದಾಗ ಮೊದಲು ದೇವಸ್ಥಾನಗಳ... ನಾಶ ಮಾಡಿ ಅದರಲ್ಲಿ ಬಚ್ಚಿಟ್ಟಿದ್ದ ಸಂಪತ್ತನ್ನು ಲೂ... ಮಾಡುತ್ತಿದ್ದರು. ಇತಿಹಾಸದ ಈ ಸತ್ಯಕ್ಕೆ ಇವತ್ತು ಪದ್ಮನಾ... ಸ್ವಾಮಿ ದೇವಸ್ಥಾನದಲ್ಲಿ ಶತಮಾನಗಳ ಕಾಲ ಗೌಪ್ಯವಾಗಿದ್ದ... ಈಗ ಪತ್ತೆಯಾಗಿರುವ ಸಂಪತ್ತೇ ಸಾಕ್ಷಿಯಾಗಿದೆ....



ತಿರುಪತಿ






ಸಿದ್ಧಿವಿನಾಯಕ

# ದೇವಸ್ಥಾನಗಳೋ? ಅಪಾರ ಆಸ್ತಿಯ ಖಜಾನೆಗಳೋ?

ಕೇರಳದ ಪದ್ಮನಾಭಸ್ವಾಮಿ ದೇವಸ್ಥಾನವು ಈಗ ತಿರುಪತಿಯ ತಿಮ್ಮಪ್ಪನನ್ನೇ ಮೀರಿಸುವಷ್ಟು ಚಿನ್ನಾಭರಣಗಳನ್ನು ಹೊಂದಿದೆ ಎಂಬ ಸುದ್ದಿ ಕೇಳಿ ಜನ ಬೆಕ್ಕಸಬೆರಗಾಗಿದ್ದಾರೆ. ಪದ್ಮನಾಭನ ಬಳಿ ಇರುವಷ್ಟು ಹಣ ಇತರೆ ದೇವಸ್ಥಾನಗಳಲ್ಲಿ ಇಲ್ಲದಿದ್ದರೂ ಅವುಗಳೂ ಕಡಿಮೆ ಏನಿಲ್ಲ.

ಉದಾಹರಣೆಗೆ, ತಿರುಪತಿ ತಿಮ್ಮಪ್ಪನ ಒಟ್ಟು ಆಸ್ತಿಯ ಮೌಲ್ಯವನ್ನು **45,000** ಕೋಟಿ ಎಂದು ಅಂದಾಜಿಸಲಾಗಿದೆ.

ತಿಮ್ಮಪ್ಪನ ನಂತರ ಅತಿ ಹೆಚ್ಚು ಆಸ್ತಿಯನ್ನು ಹೊಂದಿರುವ ಸ್ಥಾನದಲ್ಲಿ ಬರುವುದು ಅಪ್ಪಟ ವೈರಾಗಿ ಆಗಿದ್ದ ಶಿರಡಿಯ ಸಾಯಿಬಾಬಾನ ಮಂದಿರ. ಮಹಾರಾಷ್ಟ್ರದ ಶಿರಡಿಯಲ್ಲಿರುವ ಸಾಯಿಬಾಬಾ ಮಂದಿರದಲ್ಲಿ ಅಧಿಕೃತ ದಾಖಲೆಗಳ ಪ್ರಕಾರವೇ ಒಟ್ಟು **32** ಕೋಟಿ ರೂಪಾಯಿ ಮೌಲ್ಯದ ಚಿನ್ನ, ಬೆಳ್ಳಿ ಮತ್ತು ವಿವಿಧ ಲೋಹಗಳ ನಾಣ್ಯಗಳಿವೆ. ಜೊತೆಗೆ ಸುಮಾರು **427** ಕೋಟಿ ರೂಪಾಯಿಗಳನ್ನು ವಿವಿಧ ಕಡೆ ಬಂಡವಾಳವಾಗಿ ಹೂಡಲಾಗಿದೆ. **2008**ರಲ್ಲಿ ಈ ಮಂದಿರವು **81** ಕೋಟಿ ನಗದು, **920** ಕೇಜಿ ಚಿನ್ನ ಮತ್ತು **440** ಕೇಜಿ ಬೆಳ್ಳಿಯನ್ನು ಭಕ್ತರಿಂದ ಪಡೆದಿತ್ತು. ಮುಂಬೈಯಲ್ಲಿರುವ **250** ವರ್ಷಗಳಷ್ಟು ಹಳೆಯದಾದ ಸಿದ್ಧಿವಿನಾಯಕ ದೇವಸ್ಥಾನವು ದೇಶದಲ್ಲೇ ಮೂರನೇ ಅತಿ ಶ್ರೀಮಂತ ಮಂದಿರವಾಗಿದೆ. ಶ್ರೀ ಸಿದ್ಧಿವಿನಾಯಕ ಗಣಪತಿ ಟ್ರಸ್ಟ್ ಈ ಮಂದಿರದ ವಹಿವಾಟನ್ನು ನೋಡಿಕೊಳ್ಳುತ್ತಿದ್ದು, ಅದರ ಪ್ರಕಾರ ಪ್ರತಿ ವರ್ಷ ಈ ದೇವಸ್ಥಾನಕ್ಕೆ ಭಕ್ತರು ಹತ್ತರಿಂದ ಹದಿನೈದು ಕೋಟಿ ರೂಪಾಯಿಗಳನ್ನು ಕಾಣಿಕೆಯಾಗಿ ನೀಡುತ್ತಾರೆ. ಇದರಲ್ಲಿ ಸುಮಾರು **125** ಕೋಟಿ ರೂಪಾಯಿಗಳನ್ನು ವಿವಿಧ ಬ್ಯಾಂಕುಗಳಲ್ಲಿ ಫಿಕ್ಸೆಡ್ ಡಿಪಾಸಿಟ್ ಆಗಿ ಇಡಲಾಗಿದೆ. ಗಣೇಶನಿರುವ ಈ ಮಂದಿರದ ಗರ್ಭಗುಡಿಯ ಆವರಣವನ್ನು ಸ್ವರ್ಣಲೇಪದಿಂದ ಅಲಂಕರಿಸಲಾಗಿದೆ.



ವೈಷ್ಣೋದೇವಿ

ಜಮ್ಮುವಿನಲ್ಲಿರುವ ಮಾತಾ ವೈಷ್ಣೋದೇವಿ ಮಂದಿರವು ನಾಲ್ಕನೆ ಶ್ರೀಮಂತ ದೇಗುಲವಾಗಿದೆ. ತಿರುಪತಿಯ ನಂತರ ಅತಿ ಹೆಚ್ಚು ಭಕ್ತರನ್ನು ಆಕರ್ಷಿಸುವ ಈ ದೇವಸ್ಥಾನ ತ್ರಿಕೂಟ ಬೆಟ್ಟಗಳ ಮೇಲೆ ಸುಮಾರು **5,300** ಅಡಿ ಎತ್ತರದ ಪ್ರದೇಶದಲ್ಲಿದೆ. ಈ ದೇಗುಲದ ಪ್ರತಿ ದಿನದ ಆದಾಯ ಸುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟಾಗಿದ್ದು, ಪ್ರತಿ ವರ್ಷ ಸುಮಾರು **500** ಕೋಟಿ ರೂಪಾಯಿಗಳನ್ನು ಗಳಿಸುತ್ತದೆ.




ಕೇರಳದ ಗುರುವಾಯೂರ್ ದೇವಸ್ಥಾನವು ಐದನೆ ಅತಿ ಶ್ರೀಮಂತ ದೇಗುಲವಾಗಿದೆ. ಕೃಷ್ಣನ ವಿಗ್ರಹವಿರುವ ಈ ದೇವಸ್ಥಾನವನ್ನು 'ಭೂಲೋಕದ ವೈಕುಂಠ' ಎಂದೇ ಭಕ್ತರು ಕರೆಯುತ್ತಾರೆ. ಪ್ರತಿ ವರ್ಷ ಲಕ್ಷಾಂತರ ಭಕ್ತರು ಇಲ್ಲಿಗೆ ಭೇಟಿ ನೀಡುತ್ತಿದ್ದು ಇದರ ವಾರ್ಷಿಕ ಆದಾಯ ಸುಮಾರು **2.5** ಕೋಟಿ ರೂಪಾಯಿಗಳು. ಈ ದೇಗುಲ ಕೂಡ **125** ಕೋಟಿ ರೂಪಾಯಿಗಳನ್ನು ಬ್ಯಾಂಕುಗಳಲ್ಲಿ ಇಟ್ಟಿದೆ.

# ಒಂದೇ ಕಡೆ ಶಿವ, ಬ್ರಹ್ಮ, ವಿಷ್ಣು ದರ್ಶನ!

ಶ್ರೀ ಪದ್ಮನಾಭಸ್ವಾಮಿಯ ದೇವಸ್ಥಾನದಲ್ಲಿರುವ ಗರ್ಭಗುಡಿಯನ್ನು ಏಕಶಿಲೆಯ... ಕೆತ್ತಲಾಗಿದೆಯಾದರೂ ಇದರೊಳಗಿರುವ ಮೂರ್ತಿಯನ್ನು ಇತರೆಡೆಯಂತೆ ಏಕೆ ಶಿಲೆಯ... ನಿರ್ಮಿಸಲಾಗಿಲ್ಲ? ಇತಿಹಾಸಕಾರರ ಪ್ರಕಾರ ಮೊದಲು ಈ ಗರ್ಭಗುಡಿಯೊಳಗೆ ಮರದಿಂ... ಕೆತ್ತಲಾಗಿದ್ದ ವಿಷ್ಣುವಿನ ಮೂರ್ತಿ ಇತ್ತು. ಆದರೆ ಅಗ್ನಿ ದುರಂತವೊಂದರಲ್ಲಿ ಅದ... ಭಸ್ಮವಾಯಿತು. ಆಗ ನೇಪಾಳದ ಗಂಡಕಿ ನದಿಯ ದಡದಿಂದ **12,008** ಸಾಲಿಗ್ರಾಮಗಳನ್ನು ಆನೆಗಳ ಮೇಲೆ ಕೇರಳಕ್ಕೆ ವಿದ್ಯುಕ್ತವಾಗಿ ತರಲಾಯಿತು. ಆ ಸಾಲಿಗ್ರಾಮಗಳನ್ನು ಉಪಯೋಗಿ... ಇಲ್ಲಿನ ವಿಷ್ಣುಮೂರ್ತಿಯ ಬಂಧವನ್ನು ರಚಿಸಲಾಯಿತು. ಆನಂತರ ಆಯುರ್ವೇ... ವಿಜ್ಞಾನವನ್ನಾಧರಿಸಿ ಒಂದು ಮಿಶ್ರಣವನ್ನು ತಯಾರಿಸಲಾಯಿತು. ಈ ಮಿಶ್ರಣವನ್ನು ಉಪಯೋಗಿಸಿ ವಿಷ್ಣುಮೂರ್ತಿಗೆ ಅಂತಿಮ ರೂಪವನ್ನು ನೀಡಲಾಯಿತು.

ಇಲ್ಲಿನ ಮೂರ್ತಿ ಕಲ್ಲಿನಿಂದ ತಯಾರಾಗಿಲ್ಲವಾದ್ದರಿಂದ ಬೇರೆ ದೇವಸ್ಥಾನಗಳಂ... ಇಲ್ಲಿ ವಿವಿಧ ದ್ರವಗಳನ್ನು ಉಪಯೋಗಿಸಿ ಅಭಿಷೇಕಗಳು ನಡೆಯುವುದಿಲ್ಲ. ಬದಲಾ... ಇಲ್ಲಿ ಹೂವಿನಿಂದ ವಿಷ್ಣು ಮೂರ್ತಿಗೆ ಅಭಿಷೇಕವನ್ನು ಮಾಡಲಾಗುತ್ತದೆ. ಅಷ್ಟೇ ಅಲ್ಲ... ಹೂವನ್ನು ಮೂರ್ತಿಯಿಂದ ತೆಗೆಯುವಾಗ ಮೂರ್ತಿಯು ಹಾಳಾಗದಂತೆ ನವಿಲುಗರಿಗಳನ್ನು ಬಳಸಲಾಗುತ್ತದೆ.




ಈ ದೇಗುಲದ ಇನ್ನೊಂದು ವಿಶೇಷತೆ ಏನೆಂದರೆ ಇತರೆ ದೇವಸ್ಥಾನಗಳಂತೆ ಇಲ್ಲಿ ಭಕ್ತರಿಗೆ ಇಡೀ ಮೂರ್ತಿ ಒಮ್ಮೆಗೆ ಕಾಣಿಸುವುದಿಲ್ಲ. ಬದಲಾಗಿ ಈ ಗರ್ಭಗುಡಿಗ... ಇರುವ ಮೂರು ದ್ವಾರಗಳ ಮೂಲಕ ಶಿವ, ಬ್ರಹ್ಮ ಮತ್ತು ವಿಷ್ಣು ಪ್ರತ್ಯೇಕವಾಗಿ ಕಾಣಿಸಿಕೊಳ್ಳುತ್ತಾರೆ. ಇಲ್ಲಿನ ಪದ್ಮನಾಭಸ್ವಾಮಿಯ ಮೂರ್ತಿ ಸಾವಿರ ಹೆಡೆಯ ಆದಿಶೇಷನ ಮೇಲೆ ಮಲಗಿದ್ದು ಆತನ ಬಲಗೈಅಡಿ ಶಿವಲಿಂಗವಿದೆ. ಮೊದಲನೆ ದ್ವಾರದಿಂದ ವಿಷ್ಣುವಿನ ಮುಖ ಮತ್ತು ಈ ಶಿವಲಿಂಗ ಕಾಣಿಸುತ್ತದೆ.

ವಿಷ್ಣುವಿನ ಹೊಕ್ಕಳಿಂದ ಉದ್ಭವಿಸುವ ಕಮಲದಲ್ಲಿ ಬ್ರಹ್ಮ ಇದ್ದಾನೆ. ಎರಡನೆ ದ್ವಾರದಿಂದ ಇದನ್ನು ನೋಡಬಹುದು. ಇನ್ನು ಮೂರನೆ ದ್ವಾರದಿಂದ ವಿಷ್ಣುವಿನ ಪಾದಗಳ ದರ್ಶನ ಪಡೆಯಬಹುದು.

ಈ ದೇವಸ್ಥಾನದಲ್ಲಿ ನಡೆಯುವ ಮುಖ್ಯ ನೈವೇದ್ಯದಲ್ಲಿ ಉಪ್ಪಿನ ನೀರಿನಲ್ಲಿ ತೋಯಿದ್ದಿರು... ಮಾವಿನ ಕಾಯಿಯನ್ನು ತೆಂಗಿನ ಚಿಪ್ಪಿನಲ್ಲಿ ಮಾಡುತ್ತಾರೆ. ಪುರಾಣದ ಪ್ರಕಾರ 1200 ವರ್ಷಗಳ ಹಿಂದೆ ದಿವಾಕರ ಆಚಾರ್ಯ ಎಂಬ ಋಷಿಯೊಬ್ಬ ಒಂದು ತೆಂಗಿನ ಚಿಪ್ಪಿನಲ್ಲಿ ಹೀಗೆ ನೈವೇದ್ಯ ಮಾಡಿದ್ದನಂತೆ. ಈಗಲೂ ಆ ಚಿಪ್ಪಿಗೆ ಮಂದವಾಗಿ ಚಿನ್ನದ ಲೇಪವನ್ನು ಹಚ್ಚಿ ಕಾಪಾಡಲಾಗಿದೆ. ಅದನ್ನೇ ಇವತ್ತಿಗೂ ನೈವೇದ್ಯಕ್ಕೆ ಬಳಸುತ್ತಿದ್ದಾರೆ.

# 'ಖುಲ್ ಜಾವ್ ಸಿಂಸಿಂ' ಎನಿಸಿದ ಸುಂದರ ರಾಜನ್

ನೂರಾರು ವರ್ಷಗಳಿಂದ ಪದ್ಮನಾಭನ ದೇವಸ್ಥಾನದ ನೆಲಮಾಳಿಗೆಯಲ್ಲಿದ್ದ ಈ ಅಪಾರ ಸಂಪತ್ತಿನ ಬಗ್ಗೆ ಹೊರಜಗತ್ತಿಗೆ ಮಾತ್ರವಲ್ಲ, ಸ್ವತಃ ದೇವಸ್ಥಾನದ ಉಸ್ತುವಾರಿಯನ್ನು ಹೊತ್ತಿರುವ ರಾಜವಂಶಸ್ಥರಿಗೂ ಗೊತ್ತಾಗುವಂತೆ ಮಾಡಿದ್ದು ಟಿ.ಪಿ.ಸುಂದರ ರಾಜನ್ ಎಂಬ ವ್ಯಕ್ತಿ.



ಸುಂದರ ರಾಜನ್

ಮಾಜಿ ಐಪಿಎಸ್ ಅಧಿಕಾರಿಯಾದ, ಈಗ ನಿವೃತ್ತಿಯ ನಂತರ ಸುಪ್ರೀಂಕೋರ್ಟಿನಲ್ಲಿ ವಕೀಲರಾಗಿರುವ ಸುಂದರ ರಾಜನ್ ಅವರೂ ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನದ ಭಕ್ತರು. ಆದರೆ ಈ ಐತಿಹಾಸಿಕ ದೇವಸ್ಥಾನವನ್ನಾಗಲಿ, ಅದರೊಳಗೆ ಇದೆ ಎಂದು ನಂಬಲಾಗಿದ್ದ ಚಿನ್ನಾಭರಣವನ್ನಾಗಲಿ ರಕ್ಷಿಸುವುದು ದೇವಸ್ಥಾನದ ಜವಾಬ್ದಾರಿ ಹೊಂದಿರುವ ಮಾಜಿ ಮಹಾರಾಜರಿಂದ ಸಾಧ್ಯವಿಲ್ಲ ಎನಿಸಿತು ಸುಂದರ್ ರಾಜನ್ ಅವರಿಗೆ. ಇದರ ಬಗ್ಗೆ ಒಮ್ಮೆ ಸುಂದರ ರಾಜನ್ ಮತ್ತು ಮಾಜಿ ಮಹಾರಾಜ ಮಾರ್ತಾಂಡ ವರ್ಮರ ನಡುವೆ ಒಮ್ಮೆ ಜಗಳವೂ ಆಗಿತ್ತು. ಅದಕ್ಕೆ ಕಾರಣ ಅಲ್ಲಿಯವರೆಗೂ ಈ ದೇವಸ್ಥಾನದ ಭದ್ರತೆಯನ್ನು ನೋಡಿಕೊಳ್ಳುತ್ತಿದ್ದದ್ದು ಕೇವಲ ಇಪ್ಪತ್ತು ಜನ. ಅಷ್ಟೇ ಅಲ್ಲ, ಈ ಕಾರ್ಯಕ್ಕೆಂದು ಅವರಿಗೆ ನೀಡಲಾಗಿದ್ದ ಅಸ್ತ್ರಗಳು ಎಂತಹವು ಗೊತ್ತೇ? ನಾಯಿಗೆ ಬಾರಿಸಲೂ ಆಗದಂತಹ ಸಣ್ಣ ಕೋಲುಗಳನ್ನು!

ದೇವಸ್ಥಾನದ ರಕ್ಷಣೆ ಮತ್ತು ಅದರ ಆಡಳಿತದಲ್ಲಿ ಪಾರದರ್ಶಕತೆ ಇರಬೇಕೆಂದು ಸುಂದರ್ ರಾಜನ್ ಅವರು **2009**ರ ಡಿಸೆಂಬರ್‌ನಲ್ಲಿ ಕೇರಳ ಹೈಕೋರ್ಟಿನ ಮೆಟ್ಟಿಲನ್ನು ಏರಿದರು. ಅಲ್ಲಿ ಅವರು ಸಲ್ಲಿಸಿದ ಅರ್ಜಿಯಲ್ಲಿ ಈ ದೇವಸ್ಥಾನದ ಜವಾಬ್ದಾರಿಯನ್ನು ರಾಜವಂಶಸ್ಥರ ನೇತೃತ್ವದ ಟ್ರಸ್ಟಿನಿಂದ ರಾಜ್ಯ ಸರ್ಕಾರ ಪಡೆಯಬೇಕೆಂದು ಕೋರಿದರು.

ಇದರ ಬಗ್ಗೆ ವಾದವಿವಾದ ನಡೆದು **2011**ರ ಫೆಬ್ರುವರಿಯಲ್ಲಿ ಕೇರಳದ ಹೈಕೋರ್ಟ್ ಈ ದೇವಸ್ಥಾನ ಮತ್ತು ಅದರ ಎಲ್ಲ ಆಸ್ತಿಯನ್ನು ರಾಜ್ಯ ಸರ್ಕಾರ ತನ್ನ ವಶಕ್ಕೆ ಪಡೆದುಕೊಳ್ಳಬೇಕೆಂದು ತೀರ್ಪು ನೀಡಿತು. ಈ ತೀರ್ಪನ್ನು ವಿರೋಧಿಸಿ ರಾಜವಂಶದ ಹಾಲಿ ಮುಖ್ಯಸ್ಥ ಮಾರ್ತಾಂಡ ವರ್ಮ ಸುಪ್ರೀಂಕೋರ್ಟಿನ ಮುಂದೆ ಅರ್ಜಿ ಸಲ್ಲಿಸಿದರು. ಆ ಅರ್ಜಿಯಲ್ಲಿ "ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಈ ದೇವಸ್ಥಾನದ ಜವಾಬ್ದಾರಿಯನ್ನು ಸರ್ಕಾರ ತಮ್ಮ ವಂಶಕ್ಕೆ ವಹಿಸಿರುವುದರಿಂದ ಮತ್ತು ತಿರುವಾಂಕೂರ್ ಸಾಮ್ರಾಜ್ಯದ ಮಹಾರಾಜಾ ತಾವಾಗಿರುವುದರಿಂದ ಈ ದೇವಸ್ಥಾನದ ಮೇಲಿನ ಎಲ್ಲ ಹಕ್ಕು ತಮ್ಮದಾಗಿರುತ್ತದೆ" ಎಂದು ವಾದಿಸಿದರು.

ಆದರೆ ಪ್ರಜಾಪ್ರಭುತ್ವವಾದ ಭಾರತದಲ್ಲಿ ಮಹಾರಾಜರಿಲ್ಲ ಮಾತ್ರವಲ್ಲ, ಮಾಜಿ ಮಹಾರಾಜರೂ ಇತರರಂತೆ ಜನಸಾಮಾನ್ಯರೆ ಹೊರತು ಅವರಿಗೆ ವಿಶೇಷವಾದ ಸ್ಥಾನಮಾನಗಳಿಲ್ಲ. ಆದರೂ ಮಾರ್ತಾಂಡ ವರ್ಮ ಅವರ ಮನವಿಯ ಮೇರೆಗೆ ಕೇರಳ ಹೈಕೋರ್ಟಿನ ತೀರ್ಪನ್ನು ತಡೆಹಿಡಿದ ಸುಪ್ರೀಂಕೋರ್ಟ್ ಕಳೆದ ಮೇ 3ರಂದು ಈ ದೇವಸ್ಥಾನದಲ್ಲಿದೆ ಎಂದು ನಂಬಲಾಗಿರುವ ಚಿನ್ನಾಭರಣಗಳ ತಪಶೀಲು ಮಾಡಲು ದೇವಸ್ಥಾನದ ನೆಲಮಾಳಿಗೆಯಲ್ಲಿರುವ ಏಳು ಕೊಠಡಿಗಳನ್ನು ತೆರೆಯಲು ಆದೇಶಿಸಿತು. ಈ ಕೆಲಸಕ್ಕೆಂದು ಏಳು ಸದಸ್ಯರ ತಂಡವನ್ನೂ ಸುಪ್ರೀಂ ಕೋರ್ಟ್ ನೇಮಿಸಿತು.

ಈ ತಂಡ ಈಗ ಬಹಿರಂಗಪಡಿಸಿರುವ ಅಂಶಗಳು ಇಡೀ ಭಾರತವನ್ನೇ ದಂಗುಪಡಿಸಿದೆಯಲ್ಲದೆ ಜಗತ್ತಿನ ಗಮನವನ್ನೇ ಸೆಳೆದು "ಅಬ್ಬಬ್ಬ" ಎನ್ನುವಂತೆ ಮಾಡಿದೆ.

# ಪದ್ಮನಾಭನಿಂದಾಗಿ ಎರಡನೆ ಸ್ಥಾನಕ್ಕೆ ಬಿದ್ದ ತಿಮ್ಮಪ್ಪ

ಇಲ್ಲಿಯತನಕ ತಿರುಪತಿಯ ತಿಮ್ಮಪ್ಪನನ್ನು ಭಾರತದಲ್ಲಿ ...ತವಲ್ಲ, ಇಡೀ ಜಗತ್ತಿನಲ್ಲೇ ಅತಿ ಶ್ರೀಮಂತ ದೇವರು ...ದು ಪರಿಗಣಿಸಲಾಗುತ್ತಿತ್ತು. ಅದಕ್ಕೆ ಕಾರಣವೂ ಇತ್ತು. ...ಕೆನೆಂದರೆ ರೋಮ್ ನಗರದಲ್ಲಿರುವ ಕ್ಯಾಥೊಲಿಕ್ ...ಯನ್ನರ ಗುರು ಪೋಪ್ ಅವರ ಆಡಳಿತದಡಿ ಬರುವ ...ಕ ವ್ಯಾಟಿಕನ್ ನಗರವು ತಿರುಪತಿ ತಿಮ್ಮಪ್ಪನಿಗಿಂತ ...ಟ್ಟ ಆಸ್ತಿ ಮತ್ತು ಹಣವನ್ನು ಹೊಂದಿದ್ದರೂ ಅದು ...ಮ ಸರ್ಕಾರವೇ ಆಗಿದೆ.

...ರೆ ತಿಮ್ಮಪ್ಪ ಹಾಗಲ್ಲ, ಆತ ...ವ ಸಂಸ್ಥೆಗೂ, ಸರ್ಕಾರಕ್ಕೂ ...ಕೊಳ್ಳದ ದೇವರಾಗಿದ್ದಾನೆ. ...ಪುರಾಣದ ಪ್ರಕಾರ ...ವತಿಯನ್ನು ...ಮವೆಯಾಗಲು ತಿಮ್ಮಪ್ಪ ...ೇರನಿಂದ ಒಂದು ...ಟಿ ಹದಿನಾಲ್ಕು ಲಕ್ಷ ...ನ ವರಹಗಳನ್ನು ...ವಾಗಿ ಪಡೆದ. ಆನಂತರ ...ತ್ತಜ್ಞನಾಗಿದ್ದ ...ರ್ಮನಿಂದ ಶೇಷಾದ್ರಿ ...ಗಳಲ್ಲಿ ಸ್ವರ್ಗವನ್ನು ...ಸುವಂತಹ ...ಮನೆಯನ್ನು ...ಂಡು ಆಕೆಯೊಂದಿಗೆ ...ನ ನಡೆಸಲಾರಂಭಿಸಿದ.



...ಮ ತಿಮ್ಮಪ್ಪ ಕುಬೇರನಿಂದ ಪಡೆದ ಸಾಲವನ್ನು ...ಸಲು ಇಂದಿನತನಕ ಆತನ ಭಕ್ತರು ತಿರುಪತಿಯ ...ಡಿಗೆ ಹಣ, ಧನ, ಚಿನ್ನ ಇತ್ಯಾದಿಗಳನ್ನು ...ಯುತ್ತಲೇ ಇದ್ದಾರೆ. ಇವತ್ತು ತಿಮ್ಮಪ್ಪನ ಬಳಿ ...ರನಿಂದ ಪಡೆದ ಸಾಲವನ್ನು ಮೀರಿಸುವಷ್ಟು ಆಸ್ತಿ ...ಯಾದರೂ ಹುಂಡಿಯನ್ನು ತುಂಬುವ ...ರ್ಯವನ್ನು ಭಕ್ತರು ನಿರಾತಂಕವಾಗಿ ...ದುವರೆಸುತ್ತಲೇ ಇದ್ದಾರೆ. ಇದನ್ನು ನೋಡಿ ...ವದೋ ದುಡ್ಡು ಎಲ್ಲಮ್ಮನ ಜಾತ್ರೆ' ಎಂಬ ...ನ್ನು 'ಜನರ ದುಡ್ಡು ತಿಮ್ಮಪ್ಪನ ಜಾತ್ರೆ' ಎಂದು ...ಾಯಿಸಿದರೆ ಸೂಕ್ತವೆನಿಸುತ್ತದೆ.

...ಂದು ಅಂದಾಜಿನ ಪ್ರಕಾರ ಇವತ್ತು ತಿಮ್ಮಪ್ಪ ವಿವಿಧ ...ಮಗಳಲ್ಲಿ 1,000 ಕೋಟಿ ರೂಪಾಯಿಗಳನ್ನು ಫಿಕ್ಸೆಡ್ ...ಸಿಟ್ ರೂಪದಲ್ಲಿ ಇಟ್ಟಿದ್ದಾನೆ. ಅಷ್ಟೇ ಅಲ್ಲ, ಆತನ ...ಕ ಆದಾಯವೂ ಸುಮಾರು 1,000 ಕೋಟಿ ...ಾಯಿಗಳು. ಅಷ್ಟೇ ಅಲ್ಲ, ತಿಮ್ಮಪ್ಪನಿಗೆ ನೂರಾರು ...ಗಳಿಂದ ಭಕ್ತರು ನೀಡಿರುವ ಚಿನ್ನಾಭರಣಗಳ ಒಟ್ಟು ...ವೇ ಇವತ್ತು ಎಂಟು ಟನ್‌ಗಳನ್ನು ಮೀರಿಸುತ್ತದೆ. ...ಚಿನ್ನಾಭರಣಗಳನ್ನು ಅಲಂಕರಿಸಿರುವ ವಜ್ರ, ಕಲ್ಲು, ...ಮ್ಮ ರತ್ನಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಬರೀ ಚಿನ್ನದ ...ವನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ ಅದೇ ...ನ ಬೆಲೆಯಲ್ಲಿ ಸಾವಿರಾರು ಕೋಟಿ ರೂಪಾಯಿ ...ಗುತ್ತದೆ.

...ಇಷ್ಟು ಚಿನ್ನಾಭರಣವನ್ನು ಸುಮ್ಮನೆ ತಮ್ಮ ಬಳಿ ...ಕೊಂಡು ತಿಮ್ಮಪ್ಪನಾಗಲೀ, ಆತನ ಎಲ್ಲಾ ...ವಾರಿಯನ್ನು ವಹಿಸಿಕೊಂಡಿರುವ ತಿರುಮಲ ತಿರುಪತಿ ...ಸ್ಥಾನಂ (ಟಿಟಿಡಿ) ಟ್ರಸ್ಟಿನವರಿಗಾಗಲೀ ಏನೂ ಲಾಭವಿಲ್ಲ. ...ಂದ ಭಕ್ತರು ನೀಡುವ ಚಿನ್ನದ ವಸ್ತುಗಳನ್ನು ಕಾಲಕಾಲಕ್ಕೆ ...ಟೈಯಲ್ಲಿರುವ ಟಂಕಸಾಲೆಗೆ ಕಳುಹಿಸುತ್ತಾರೆ. ಅಲ್ಲಿ ...ಚಿನ್ನದ ವಸ್ತುಗಳನ್ನು ಕರಗಿಸಿ, ತಿರುಪತಿ ತಿಮ್ಮಪ್ಪನ ...ವಿರುವ 22 ಕ್ಯಾರೆಟ್ ಬಿಲ್ಲೆಗಳಾಗಿ ಪರಿವರ್ತಿಸುತ್ತಾರೆ. ...ಬಿಲ್ಲೆಗಳಿಗೆ ಭಕ್ತರ ವಲಯದಿಂದ ಅಪಾರ ಬೇಡಿಕೆ ...ರುದರಿಂದ ಅವರೆಲ್ಲ ಅವುಗಳನ್ನು ದುಪ್ಪಟ್ಟು ದರದಲ್ಲಿ ...ಟುಕೊಳ್ಳುತ್ತಾರೆ. ಹೀಗೆ, ಭಕ್ತರು ತಿಮ್ಮಪ್ಪನಿಗೆ ನೀಡುವ ...ಗಳನ್ನೇ ಮತ್ತೊಂದು ರೂಪದಲ್ಲಿ ಮತ್ತು ಹೆಚ್ಚಿನ ...ಾಗಿ ಅದೇ ಭಕ್ತರಿಗೆ ಮಾರುವ ವ್ಯಾಪಾರವನ್ನು ಅವರು ಕಂಡುಕೊಂಡಿದ್ದಾರೆ.

ಪ್ರತಿ ವರ್ಷ ಸುಮಾರು 20 ಲಕ್ಷ ಭಕ್ತರು ತಿರುಪತಿಗೆ ಭೇಟಿ ನೀಡುತ್ತಾರೆ. ಅವರಲ್ಲಿ ಬಡವರು ಕೇವಲ ತಮ್ಮ ಮುಂಡದ ಕೇಶವನ್ನು ಅರ್ಪಿಸಿ ಬಂದರೆ, ಶ್ರೀಮಂತರು ಧನ ಮತ್ತು ಇತರೆ ದುಬಾರಿ ವಸ್ತುಗಳನ್ನು ಅರ್ಪಿಸುತ್ತಾರೆ. ಒಂದು ಅಂದಾಜಿನ ಪ್ರಕಾರ ಪ್ರತಿ ವರ್ಷ ಕನಿಷ್ಟ 300 ಕೋಟಿ ರೂಪಾಯಿಗಳು, 350 ಕೇಜಿ ಚಿನ್ನ, 500 ಕೇಜಿ ಬೆಳ್ಳಿಯನ್ನು ಭಕ್ತರು ತಿಮ್ಮಪ್ಪನ ಪಾದಾರವಿಂದಗಳಿಗೆ ಕಪ್ಪ ಕಾಣಿಕೆಯಾಗಿ ನೀಡುತ್ತಾರೆ. ಇದಲ್ಲದೆ, ಲಡ್ಡು ಮಾರಾಟ, ರೂಮ್ ಬಾಡಿಗೆ, ಊರೂರುಗಳಲ್ಲಿ ತಿಮ್ಮಪ್ಪನ ಕಲ್ಯಾಣ, ಕೇಶ ಮಾರಾಟ (ಇದೊಂದೇ ಬಾಬತ್ತಿನಿಂದ ತಿಮ್ಮಪ್ಪನ ಹುಂಡಿಗೆ ಪ್ರತಿ ವರ್ಷ ಕನಿಷ್ಟ 27 ಕೋಟಿ ರೂಪಾಯಿಯ ಆದಾಯವಿದೆ!) ಇತ್ಯಾದಿಗಳಿಂದಲೂ ತಿಮ್ಮಪ್ಪ ಸುಮಾರು 600 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಸಂಪಾದಿಸುತ್ತಾನೆ.

ಕಳೆದ ವರ್ಷ ಕರ್ನಾಟಕದ ಗಣಿ ಕಳ್ಳ ಜನಾರ್ದನ ರೆಡ್ಡಿ 16 ಕೇಜಿ ತೂಕದ, 45 ಕೋಟಿ ರೂಪಾಯಿಗಳ ವಜ್ರ ಖಚಿತ ಕಿರೀಟವನ್ನು ತಿಮ್ಮಪ್ಪನಿಗೆ ಅರ್ಪಿಸಿದ್ದನ್ನು ಯಾರೂ ಮರೆತಿಲ್ಲ. ಆದರೆ ರೆಡ್ಡಿಗಿಂತಲೂ ಮುನ್ನ ಆತನಂತಹ ಇತರೆ ಏಳು ಕಳ್ಳಕಾಕರು ಇದೇ ತಿಮ್ಮಪ್ಪನಿಗೆ ಏಳು ಕಿರೀಟಗಳನ್ನು ದಾನ ಮಾಡಿದ್ದರು. ಆದರೆ ಅವರೆಲ್ಲರದ್ದಕ್ಕಿಂತ ರೆಡ್ಡಿ ನೀಡಿದ ಕಿರೀಟ ಅತಿ ದೊಡ್ಡದಾಗಿತ್ತು ಮತ್ತು ಹೆಚ್ಚು ದುಬಾರಿ ಆಗಿತ್ತು ಎಂಬುದೇ ರೆಡ್ಡಿಯ ಹೆಗ್ಗಳಿಕೆ.

ಅಂದಹಾಗೆ, ಈ ಕಿರೀಟವನ್ನು ಅರ್ಪಿಸುವ ಮುನ್ನ ರೆಡ್ಡಿ ಗ್ಯಾಂಗ್ ಐದು ವರ್ಷಗಳಲ್ಲಿ ರಾಜ್ಯದ ಅಮೂಲ್ಯ ಗಣಿಗಳನ್ನು ಲೂಟಿ ಮಾಡಿಯೇ ಅಂದಾಜು 4,000 ಕೋಟಿ ರೂಪಾಯಿಗಳ ಆದಾಯವನ್ನು ಕಂಡಿತ್ತು. ಇದೆಲ್ಲ ಅಕ್ರಮವಾಗಿ ಗಳಿಸಿದ್ದು ಎಂಬುದರ ಬಗ್ಗೆ ಯಾವುದೇ ಅನುಮಾನಗಳಿಲ್ಲ. ಆದರೆ ತಮ್ಮ ಈ ಕೊಳ್ಳೆಗೆ ದೇವರ ರಕ್ಷಣೆ ಇರಲಿ ಎಂದೇ ತಮ್ಮ ಆದಾಯದ ಶೇ 1 ರಷ್ಟರಲ್ಲಿ ಈ ಕಿರೀಟವನ್ನು ತಯಾರಿಸಿ ತಿಮ್ಮಪ್ಪನಿಗೆ ಲಂಚವಾಗಿ ನೀಡಿದ್ದರು. ವಿಪರ್ಯಾಸ ನೋಡಿ: ಇವತ್ತು ಯಾವುದೇ ಸರ್ಕಾರಿ ಗುತ್ತಿಗೆಗೆ ಶೇ 20 ರಷ್ಟು ಲಂಚ ಕೊಡಬೇಕು. ಯಾವುದೇ ಬಿಲ್ಲನ್ನು ಪಾಸ್ ಮಾಡಿಸಿಕೊಳ್ಳಲಿಕ್ಕೆ ಶೇ 5 ರಷ್ಟು ಲಂಚ ನೀಡಬೇಕು. ಆದರೆ ಗಣಿ ಲೂಟಿಯಿಂದ ಬಂದ ಆದಾಯದಲ್ಲಿ ಕೇವಲ ಒಂದು ಪರ್‌ಸೆಂಟ್ ಕೊಟ್ಟು ತಿಮ್ಮಪ್ಪನನ್ನೇ ಯಾಮಾರಿಸಿತ್ತು ರೆಡ್ಡಿ ಗ್ಯಾಂಗ್!

1750ರ ದಶಕದಲ್ಲೇ ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿ ಈ ತಿರುಪತಿ ತಿಮ್ಮಪ್ಪನಿಂದ 25,000 ಪೌಂಡ್‌ಗಳನ್ನು (ಈಗಿನ ಬೆಲೆ 1,80,000 ರೂಪಾಯಿಗಳು) ಪ್ರತಿ ವರ್ಷ ತೆರಿಗೆ ರೂಪದಲ್ಲಿ ಪಡೆಯುತ್ತಿತ್ತು. ಅದೇ ರೀತಿ ಇವತ್ತು ಕೂಡ ಈ ತಿಮ್ಮಪ್ಪನ ಉಸ್ತುವಾರಿಯನ್ನು ಟಿಟಿಡಿ ಟ್ರಸ್ಟಿನವರಿಗೆ ಬಿಟ್ಟು ಕೊಡದೆ ಅದನ್ನು ಸರ್ಕಾರ ತನ್ನ ಸ್ವತ್ತಾಗಿಸಿಕೊಂಡು ತಿಮ್ಮಪ್ಪನ ಆದಾಯದ ಮೇಲೆ ತೆರಿಗೆ ವಿಧಿಸಿದರೆ ಆಂಧ್ರಪ್ರದೇಶ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಹಣ ಬರುತ್ತದೆ. ಆ ಹಣದಿಂದ ಸಮಾಜೋದ್ಧಾರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬಹುದು.

ಹೇಗಿದ್ದರೂ ತಿಮ್ಮಪ್ಪನಿಗೆ ಕಾಣಿಕೆಯಾಗಿ ಬರುವುದೆಲ್ಲ ಕಪ್ಪು ಹಣವೇ. ಕಪ್ಪು ಹಣವನ್ನು ಹೀಗಾದರೂ ಬಿಳಿ ಹಣವಾಗಿ ಪರಿವರ್ತಿಸಿ ಅದನ್ನು ಮುಖ್ಯವಾಹಿನಿಗೆ ತರಬಹುದಲ್ಲವೇ?



# ಕುಮಾರಣ್ಣನ ಆಮರಣಾಂತ ಯಶಸ್ವಿಯಾಗ್ಲಿ!

ಧತ್ತೇರಿ — ಯಾಹೂ

ಯಡ್ಡಿ ಸರಕಾರವನ್ನು ಕೆಡವಿ ಹಾಕಲು ಇನ್ನಿಲ್ಲದ ತಂತ್ರ ರೂಪಿಸಿ, ಸೋತು, ಹತಾಶರಾಗಿರುವ ಕುಮಾರಸ್ವಾಮಿ ಕಡೆಗೆ ಆಮರಣಾಂತ ಉಪವಾಸ ಕೈಗೊಳ್ಳಲಿದ್ದಾರಂತಲ್ಲಾ. ಕಡೆಗೂ ಗಾಂಧಿಮಾರ್ಗಕ್ಕಿಳಿದ ಕುಮಾರಣ್ಣನನ್ನು ಅಭಿನಂದಿಸುವುದು ನಮ್ಮ ಕರ್ತವ್ಯವಲ್ಲವೆ ಎಂದು ಫೋನ್ ಮಾಡಿದಾಗ ರಿಂಗಾಯ್ತು.

"ಹಲೋ ಯಾರು?"

"ನಾನು ಸಾರ್ ಯಾಹೂ ಅಂತ ಪತ್ರಕರ್ತ."

"ಏನ್ ಬ್ರದರ್ ಈಚೆಗೆ ಸಿಕ್ಕಲೇಯಿಲ್ಲ ನೀವು?"

"ನೀವು ತುಂಬ ಬಿಜಿ ಇದ್ರಲ್ಲ ಸಾರ್, ಅದ್ಕೆ ತೊಂದ್ರೆ ಕೊಡಲಿಲ್ಲ."

"ಇದರಲ್ಲಿ ತೊಂದ್ರೆ ಏನು ಬಂತು ಬ್ರದರ್. ರಾಜಕಾರಣಕ್ಕೆ ಪ್ರವೇಶ ಮಾಡಿದ ಮೇಲೆ ತೊಂದರೆಗೆಲ್ಲಾ ಹೆದರಬಾರ್ದು."

"ಯಾಕ್ ಸಾರ್ ಅಮರಣಾಂತ ಉಪವಾಸ ಕೂರೊ ತೀರ್ಮಾನ ತಗೊಂಬಿಟ್ರಿ. ತುಂಬ ಅಪಾಯಕಾರಿ ತೀರ್ಮಾನ ಅಲ್ವ?"

"ಅಪಾಯಕಾರಿ ತೀರ್ಮಾನ ಅಲ್ಲ ಇದು. ಸುಮಾರು ಜನ ಬರೀ ಉಪವಾಸ ಅಂತ ಕುಳುತು ಅದರ ಒಂದು ಇದನ್ನೇ ಹಾಳು ಮಾಡಿದಾರೆ. ಅದ್ಕೆ ನಾನು ಅಮರಣ ಅಂತ ಘೋಷಣೆ ಮಾಡಿದ್ದು?"

"ಎಡೂರಪ್ಪ ತುಂಬ ಕೆಟ್ಟ ಮನುಸ. ನಿಮ್ಮ ಅಮರಣಕ್ಕೂ ಜಗ್ಗದೆ ಸುಮ್ಮನಿದ್ರೆ ಏನು ಮಾಡ್ತಿರಿ?"

"ನಾನು ಈ ತರದ ಒಂದು ಕಠಿಣ ಪರಿಸ್ಥಿತಿ ಏನು ತಗೊಂಡಿದ್ದಿನಿ, ಇದು ಬಿಟ್ರೆ ಬೇರೆ ಮಾರ್ಗನೆ ಇಲ್ಲ. ಮೊದಲಿನ ತರ ಶಾಸಕರನ್ನು ರೆಸಾರ್ಟಿಗೆ ಕರಕಂಡೋಗಕ್ಕಾಗದಿಲ್ಲ. ಯಂಗೂ ಈ ಹಾಳು ಎಡೂರಪ್ಪ ವಿಸ್ತಾರ ಮಾಡಿಕೊಂಡು ಹಾಳಾಗೋಗ್ಲಿ ಅಂತ ನಾನು ಸುಮ್ಮನಿದ್ರೆ, ನಮ್ಮ ಕುಟುಂಬದ ಆಸ್ತಿ ಅಕ್ರಮದ ಆಸ್ತಿ ಅಂತ ಹೇಳಿ. ಆ ತಿರುಬೋಕಿ ಪುಟ್ಟಸ್ವಾಮಿ ಮುಂದು ಬುಟ್ಟಕೊಂಡು ಸುಳ್ಳು ಬೊಗಳಿದ್ರೆ ಸುಮ್ಮನಿರಕ್ಕಾಯ್ತದೇನ್ರಿ?"

"ಪುಟ್ಟಸ್ವಾಮಿ ತಿರುಬೋಕಿ ಅನ್ನದ್ರಲ್ಲಿ ಅನುಮಾನಿಲ್ಲ, ಆದ್ರು ಆತ ಕೇಳ್ತಾಯಿರೊ ಪ್ರಶ್ನೆಲಿ ಸತ್ಯಾಂಶ ಇರಂಗೆ ಕಾಣ್ತ ಅದೆ ಸಾರ್. ಹಿಂದೆ ನಿಮ್ಮ ತಂದೆಯವರು ಪದ್ಮನಾಭನಗರದಲ್ಲಿ ಅಕ್ರಮವಾಗಿ ಸೈಟ್ ಹೊಡದವ್ರುರೆ ಅಂತ ಸದನದಲ್ಲೇ ಆಪಾದನೆ ಮಾಡಿ. ಆ ನಂತರ ನೋಡಿದ್ರೆ ಅದು ನಿಜ ಆಗಿತ್ತು, ಈಗ ಪದ್ಮನಾಭ ನಗರದಲ್ಲಿ ಇರೊ ನಿಮ್ಮ ಮನೆ ಅಕ್ರಮದ ಆಸ್ತಿಯಲ್ಲವೆ?"

"ಅದೇಗ್ರಿ ಅಕ್ರಮ ಆಗುತ್ತೆ? ನಮ್ಮ ತಂದೆ ಶಾಸಕರಾಗಿ, ಮಂತ್ರಿಯಾಗಿ, ಕಡೆಗೆ ಈ ದೇಶದ ಪ್ರಧಾನಿಯಾಗಿದ್ರು. ಅವರ ಒಂದು ದೇಶ ಸೇವೆ ಏನಿದೆ, ಅದನ್ನ ನಾವು ಪರಿಗಣಿಸಿದ್ರೆ ಅವ್ರುರು ಇರೋದಕ್ಕೆ ಒಂದು ಮನೆ ಬೇಡವೇನ್ರಿ?"

"ಖಂಡಿತ ಬೇಕು ಸಾರ್. ಆದ್ರೆ ಅದು ಅಕ್ರಮವಾಗಿರಬಾರ್ದು."

"ಈ ಅಕ್ರಮ ಸಕ್ರಮದ ಮಾತೆಲ್ಲಾ ಹಳೆ ಮಾತು ಕಂಡ್ರಿ."


"ಹೌದು ಸಾರ್, ನೀತಿನಿಯಮ ಅನ್ನೊ ಮಾತೆಲ್ಲಾ ಸೋತೋಗ್ತಾ ಅವೆ. ಆದೇನೇ ಆದ್ರು ನಿಮ್ಮಂತ ತರುಣ, ಅದರಲ್ಲೂ ಎರಡು ಮೂರು ವರ್ಷದ ಹಿಂದೆ ಎರಡನೇ ಮದುವೆಯಾಗಿ ಮಗು ಪಡೆದು ಸುಖವಾಗಿರೊ ಟೈಮಲ್ಲಿ, ಅಮರಣಾಂತ ಉಪವಾಸ ತುಂಬ ಅಪಾಯಕಾರಿ ತೀರ್ಮಾನ. ನೀವು ಕೂರೊ ಬದ್ಲು ಈ ಭೂಮಿಗೆ ಹೊರೆಯಾಗಿರೊ ಬಂಗಾರಪ್ಪ, ದೇವೇಗೌಡ್ರು, ಮಂಜುನಾಥ ಇಂತ ಹಳೆ ಘಟಗಳನ್ನು ಕೂರುಸಬವುದಿತ್ತು."

"ಕೂರುಸಬವುದಿತ್ತು, ಅವ್ರುರೂ ಕೂಡ ನೀನು ಬೇಡ ನಾವೇ ಕೂರ್ತಿವಿ ಅನ್ನಬವುದಿತ್ತು. ಅಷ್ಟಕ್ಕೂ ಅಕ್ರಮ ಆಸ್ತಿ ಗಳಿಕೆ ದೂರಿರದು ನಮ್ಮ ಮೇಲೆ. ಅದನ್ನು ಓಗಲಾಡಿಸೋದಕ್ಕೆ ನಾನೇ ತಯಾರಾದ್ರೆ."

"ಹಾಗಾದ್ರೆ ಪುಡಸಾಮಿ ದೂರುಗಳು ಸುಳ್ಳಾಯ್ತವ?"

"ಹಂಡ್ರೆಡ್ ಪರಸೆಂಟು ಬರದಿಟ್ಗಳಿ. ನಾವು ನಾಲ್ಕು ಜನ ಅಣ್ಣತಮ್ಮಂದಿರು ಏನಿದ್ದಿವಿ, ಮಾಜಿ ಪ್ರಧಾನಿ ಮಕ್ಕಳು ಏನೂ ಇಲ್ದೆ ಬಿಕಾರಿಗಳ ತರ ಇರಕ್ಕಾಗುತ್ತೇನ್ರಿ, ಜನ ಏನನ್ನಕಳ್ತರೆ? ಅದಕ್ಕೆ ನಮ್ಮ ಯೋಗ್ಯತಾನುಸಾರ ಕಾನೂನಿನ ರೀತಿಗೆ ಒಳಪಟ್ಟು ಕೆಲವು ಆಸ್ತಿಯನ್ನು ಸಂಪಾದನೆ ಮಾಡಿದ್ದಿವಿ. ಕೆಲವು ಆಸ್ತಿನ ಬೇರೆಯವರ ಹೆಸರಲ್ಲಿ ಮಾಡಿದ್ದಿವಿ. ಎಲ್ಲವೂ ಲೀಗಲ್ಲಾಗೆ ನಡೆದಿದೆ."

"ಇನ್ನೊಂದು ವಿಷಯ ಸಾರ್.




ಮಾಜಿ ಮಂತ್ರಿ ಗೋವಿಂದೇಗೌಡ್ರ ಅಳಿಯನ ತೋಟ, ಮನೇನೆಲ್ಲಾ ಒಬ್ಬ ಜೆಡಿಎಸ್ ಬಿಕಾರಿ ಕೊಂಡು ಕೊಂಡವ್ರುನೆ. ಮನೇಲಿ ನೀವು ಆತನ ಭುಜದ ಮೇಲೆ ಕೈಹಾಕಿ ತೆಗಿಸಿಕೊಂಡಿರೊ ಫೋಟೋ ಬಿಟ್ರೆ ಇನ್ನೇನು ಇಲ್ಲ. ಜನ ಏನೇಳ್ತರೆ ಅಂದ್ರೆ ಆ ಭಿಕಾರಿಗೆ ಇಷ್ಟು ದೊಡ್ಡ ತೋಟ, ಮನೆ, ಕೊಳ್ಳೊಶಕ್ತಿ ಎಲ್ಲಿಂದ ಬರಬೇಕ್ರಿ? ಅದೆಲ್ಲಾ ಕುಮಾರಣ್ಣ ಸೊತ್ತು ಅಂತರೆ. ಈ ಬಗ್ಗೆ ಏನೇಳ್ತಿರಿ ಸಾರ್!"

"ಅದೂ ಕೂಡ ಸಿಬಿಐ ತನಿಖೆಗೆ ಯೋಗ್ಯವಾಗಿದ್ರೆ ಮಾಡ್ಲಿ ಬಿಡಿ. ನಾವು ನಾಲ್ಕು ಜನ ಅಣ್ಣತಮ್ಮಂದಿರು ಬೇರೆಬೇರೆಯಾಗಿ ನಮ್ಮ ಯೋಗ್ಯ ತಾನು ಸಾರ ಸ್ವಂತ ಜಮೀನು ಖರೀದಿ ಮಾಡಿದ್ರೆ ಅದ್ಕೆ ನಾನು ಹೊಣೆಗಾರನೆ? ಬಾಲಕೃಷ್ಣ ಸಂಪಾದನೆ ಮಾಡಿರೊ ಆಸ್ತಿಗೂ ನನಗು ಏನು ಸಮಂದರಿ?"

"ಸಮಂದಿಲ್ಲ ಸಾರ್. ಬಾಲಕೃಷ್ಣ ಅಧಿಕಾರಿಯಾಗಿ ಹೊಡದಿರೊ ಲಂಚದಲ್ಲಿ ಬೆಂಗಳೂರಿಂದ ಮೈಸೂರಿಗೆ ಹೋಗಿರೊ ರಸ್ತೆ ಪಕ್ಕದ ಖಾಲಿ ಜಾಗನ್ನೆಲ್ಲ ಲಪಟಾಯಿಸಿರದ್ದೂ ಯಾವ ಸಮಂದನೂ ಇಲ್ಲ, ಇನ್ನ ಮೈನಿಂಗ್‌ನದೂ ಅದೇ ಕತೆ. ಒಟ್ಟನಲ್ಲಿ ನೀವೇ ಗೆಲ್ಲದು."

"ಅದರಲ್ಲಿ ಅನುಮಾನನೇ ಬೇಡಿ. ನಾವು ಯಾವುದೇ ಆಸ್ತಿ ಖರೀದಿ ಮಾಡಿದ್ರೂ ತನಿಖೆಗೆ ಸಿಕ್ಕದಂಗೆ ಮಾಡಿದ್ದಿವಿ. ಅದೇ ಈ ಎಡೂರಪ್ಪ ಅಡಗಲು ಯಾವುದೇ ಮಾನಮರಿಯಾದಿ ಬಿಟ್ಟು ಮಾಡಿದಾನೆ. ಆತನ ಮಗಳು ಪತ್ರಕರ್ತರಲ್ಲದವರಿಗೆ ಪತ್ರಿಕಾ ಕೋಟಾದಲ್ಲಿ ನಾಲ್ಕು ಸೈಟ್ ಮಂಜೂರು ಮಾಡಿಸಿ, ಕಡೆಗೆ ತಾನೇ ಬರಿಸಿಕೊಂಡವ್ಳುಳೆ. ಅವುಳಿಗೇ ಅಂತ ಧೈರ್ಯ ಬರಬೇಕಾದ್ರೆ, ಅವರಪ್ಪನ ಸಪ್ರೋರ್ಟು ಇರಲೇಬೇಕಲ್ಲವ. ಆದ್ರೆ ನಾವು ಮಾತ್ರ ನಮ್ಮ ತಂದೆಯವರ ಪ್ರಭಾವ ಇಲ್ಲದೆ, ಸ್ವಂತ ಶಕ್ತಿಯಿಂದ ಸಂಪಾದನೆ ಮಾಡಿದ್ದಿವಿ ಗೊತ್ತ?"

"ಅಷ್ಟೊಂದಾಸ್ತಿ ಯಾಕ್ ಸಾರ್ ನಿಮಗೆ?"

"ಈ ಪ್ರಶ್ನೆನ ಎಡೂರಪ್ಪನಿಗೇ ಕೇಳಿ. ನಾನು ನೀವು ಮಾತಾಡ್ತಯಿರೊ ಈ ಸಮಯದಲ್ಲೂ ಕೂಡ, ಎಡೂರಪ್ಪ ಮತ್ತವನ ಮಕ್ಕಳು ಯಾವುದಾದ್ರು ಜಮೀನು ಖರೀದಿ ಮಾಡ್ತಾಯಿರತರೆ"?

"ಹೌದಾ ಸಾರ್?"

"ಹೌದಾ ಅಂತ ಕೇಳ್ತಿರಲ್ಲ? ಬೆಂಗಳೂರಲ್ಲಿ ಡೀನೋಟಿಫಿಕೇಷನ್ ಜಗಳ ನಡೀತಾಯಿದ್ರೆ ಆ ಕಡೆ ಶಿಕಾರಿಪುರ ಶಿವಮೊಗ್ಗದಲ್ಲಿ ಎಡೂರಪ್ಪನ ಆಸ್ತಿ ಖರೀದಿ ನ್ಯಡಿತನೇಯಿತ್ತು ಗೊತ್ತಾ."

"ಅಂತೂ ಇದೊಂದು ಸಮಬಲದ ಹೋರಾಟ ಸಾರ್. ದೇವೇಗೌಡ್ರ ಫ್ಯಾಮಿಲಿನ ಯಾರೂ ಹೆದರಿಸಕ್ಕಾಗಿರಲಿಲ್ಲ. ಎಡೂರಪ್ಪ ಒಳ್ಳೆ ಫೈಟ್ ಕೊಡ್ತಾ ಅವ್ನೆ ಅಂತ ಜನಗಳೆಲ್ಲ ಮಾತಾಡ್ತ ಅವ್ರೆ. ಆದೇನೇ ಆಗ್ಲಿ ನಿಮ್ಮ ಅಮರಣಾಂತ ಉಪವಾಸ ಯಶಸ್ವಿಯಾಗ್ಲಿ, ಯಶಸ್ವಿ ಅಂದ್ರೆ ತಪ್ಪು ತಿಳಕೊಬೇಡಿ ಸಾರ್."

"ಯಶಸ್ವಿಯಾಗಕ್ಕೆ ಬಿಡಲ್ಲ ಕಂಡ್ರಿ ಅವ್ರುರು. ಒಂದಿಷ್ಟು ಸುಸ್ತಾದ ಕೂಡ್ಲೆ ಆಸ್ಪತ್ರೆಗೆ ಸೇರಿಸಿಬುಡ್ತರೆ."

"ಹೌದು ಸಾರ್. ಅಲ್ಲಿಗೆ ಅನಿತಕ್ಕ ಬಂದು ಉಪವಾಸ ನಿಲ್ಲಿಸಿ ಅಂತರೆ. ಅದಕೂ ನೀವು ಬಗ್ಗದಿಲ್ಲ, ಕಡೆಗೆ ರಾಧಿಕಾ ಶಮಿಕ ಕೆ. ಸ್ವಾಮಿನ ಎತ್ತಿಕೊಂಡು ಬರ್ತರೆ. ಆಗ ನೀವು ನಿಂಬೆರಸನೊ ಹಾಲನೊ ಕುಡುದು "ಶಮ್ಮೀ ಟ ..." ಅಂತ ಮಗಳ ಮುದ್ದಾಡ್ತ ಉಪವಾಸ ನಿಲ್ಲುಸ್ತಿರಲ್ಲ ಸಾರ್."

"ಹೌದು ಕಂಡ್ರಿ, ರಾಧಿಕಾ, ನನ್ನ ಮಗಳು ಶಮಿಕನ್ನ ನೋಡಿದ್ರೆ ಈ ರಾಜಕಾರಣನೆ ಬ್ಯಾಡ ಅನ್ನುತ್ತೆ."

"ಥೂತ್ತೇರಿ!!!

# ಮಾರಿಕೋಣ

ಕತೆ

• ಡಾ.ಭೂಮೀಗೌಡ

ಮೇಲೆ ಝಾರಣ ಬಿಸಿಲು. ಕೆಳಗೆ ತಮಟೆ ಕಾದ ಹಾಗೆ ಸುಡುತ್ತಿರುವ ನೆಲ. ಕೈಯಲ್ಲಿ ಒಂದು ಆದು, ಕಂಕುಳಲ್ಲಿ ಅದಕ್ಕೆ ಸೊಪ್ಪಿನ ಕಂತೆ, ತಲೆಮೇಲೆ ಎಮ್ಮೆ ಗೆಂದು ಕೊಯ್ದ ಹುಲ್ಲು ಮತ್ತು ಒಲೆಬಂಗಕ್ಕೆಂದು ಆಯ್ದ ಒಣಪುಳ್ಳೆಗಳ ಹೊರೆ. ಮಳೆಯಲ್ಲಿ ತೊಯ್ದಂತೆ ಕಾಣುವ, ಬೆವರಿನಲ್ಲಿ ಒದ್ದೆಯಾದ ಮೈ. ಈ ಅವತಾರದಲ್ಲಿ ಹೊಲದಿಂದ ಮನೆಗೆ ಬಂದಳು ಕರಗಮ್ಮ. ಹೊರೆಯನ್ನು ಒಂದು ಮೂಲೆಗೆ ಒಗೆದು, ಆಡನ್ನು ಗೂಟಕ್ಕೆ ಕಟ್ಟಿ, ನೀರಿನ ಹಂಡೆಯಿಂದ ನೀರು ಮೊಗೆದು ತಲೆ, ಎದೆ, ಮುಖಕ್ಕೆ ತಪತಪನೆ ತಟ್ಟಿಕೊಂಡು, ಹರಿದ ಸೀರೆಯ ಸೆರಗಿನಿಂದ ಒರೆಸಿಕೊಂಡು, ಮೋಟುಗೋಡೆ ಗೊರಗಿ 'ಉಸ್ಸಪ್ಪಾ' ಎಂದು ಕುಳಿತಳು. ಕೊಟ್ಟಿಗೆ ಕಡೆಗೆ ಕಿವಿಗೊಟ್ಟು ಆಲಿಸಿದವಳೇ ಅನುಮಾನವಾಗಿ ಎಸ್ಸೆಲ್ಸಿ ಪರೀಕ್ಷೆಗೆಂದು ಮೂಲೆಯಲ್ಲಿ ಓದುತ್ತಾ ಕುಳಿತಿದ್ದ ಮೊಮ್ಮಗನನ್ನು ಕರೆದು "ಅಜೊ ಮೊಗ ಸಂಕ್ರಾ, ಎಮ್ಮೆ ಕೊಟ್ಗೇಲಿ ಏನೋ ಸದ್ದಾದಂಗದೆ ನೋಡ್ಲಾ, ಆ ಆದ್ರುಕ್ಕುಟ್ಟಿದ್ ಮಾರಿಕೋಣ ಪುನ ಬಂದಿದ್ದದೋ ಏನೋ ನೋಡಪ್ಪಾ" ಅಂದ್ಲು. "ಇದ್ರ ಮನೆ ಹಾಳಾಗ, ಎಮ್ಮೆ ಗೊಂತಲ್ಲಿ ಒಂದ್ ಕಡ್ಡಿ ಉಲ್ಲೂ ಮಡುಗುದಿಲ್ಲ, ಅದ್ಯಾವ್ ಮಾಯ್ದಲ್ ಬಂದು ಎಲ್ಲಾನು ಮೆಯ್ಕಂಡ್ ಅದ್ಯಾವ್ ಮಾಯ್ದಲ್ ಒಂಟೋದದೊ ನನ್ಗೂ ಸಾಕಾ ಗೋಗದೆ"- ಕರಗಮ್ಮನ ಗೊಣಗಾಟ ನಡೆದೇ ಇತ್ತು.

ಮೂಲೆಯಲ್ಲಿ ಓದುತ್ತಾ ಕುಳಿತಿದ್ದ ಶಂಕರೇಗೌಡ ಪುಸ್ತಕ ಮುಚ್ಚಿಟ್ಟು ಕೊಟ್ಟಿಗೆಗೆ ಹೋಗಿ ನೋಡಿದ. ಗೊಂತಲ್ಲಿ ಆಗತಾನೇ ಹಾಕಿ ಬಂದಿದ್ದ ಹುಲ್ಲಿನ ಒಂದು ಕಡ್ಡಿಯೂ ಇಲ್ಲ, ಸಾಲದ್ದಕ್ಕೆ ಇವನು ಹೋಗಿ ನೋಡುವಾಗ ಮಾರಿಕೋಣ ಎಮ್ಮೆಯ ಕೆಚ್ಚಲಿಗೆ ಬಾಯಿ ಹಾಕಿ ಹಾಲು ಕುಡಿಯುತ್ತಿದೆ, ಅದರ ಕಟ ಬಾಯಿಂದ ನೊರೆಹಾಲು ಜಿನುಗುತ್ತಿದೆ. ಇದನ್ನು ನೋಡಿ ಬಂದು ಅಜ್ಜಿಗೆ ತಿಳಿಸಿದ್ದೇ ತಡ, ತನ್ನ ಗಂಡ ಸತ್ತ ದಿನದಿಂದಲೂ ಜೋಪಾನವಾಗಿರಿಸಿದ್ದ ಕೊಕ್ಕೆ ಜೋಡನ್ನು ಹಿಡಿದವಳೇ ಕೊಟ್ಟಿಗೆಗೆ ಬಂದು ಮಾರಿಕೋಣಕ್ಕೆ ರಪರಪನೆ ಬಾರಿಸತೊಡಗಿದಳು. ಹಿಂದಿನಿಂದಲೇ ಬಂದ ಶಂಕರ "ಹೊಡಿಯಮ್ಮ ಹೊಡಿ" ಎಂದವನೇ ತನ್ನ ಹವಾಯ್ ಚಪ್ಪಲಿಯನ್ನೂ ತಂದು ಅದರ ಬಾಯಿಗೆ ಪಟಪಟನೆ ಬಾರಿಸಿದ.

ಕರಗಮ್ಮ ಲಾಗಾಯ್ತಿನಿಂದ ಕಷ್ಟದಲ್ಲೇ ಬೆಳೆದವಳು. ಅವಳಿಗೀಗ 65-70 ವರ್ಷ. ಮದುವೆ ಯಾದಾಗ ಅವಳಿಗೆ ಹದಿನೈದು ವರ್ಷ. ಐವತ್ತು ವರ್ಷಗಳ ಹಿಂದೆ ಇವಳು ತುಂಬು ಗರ್ಭಿಣಿಯಾಗಿದ್ದಾಗ ಗಂಡ ಅನ್ನಿಸಿಕೊಂಡವನು ಪ್ಲೇಗ್ ಮಾರಿಗೆ ಬಲಿಯಾದ. ಗಂಡ ಅಂದರೆ ಅಂತಿಂಥ ಗಂಡನಲ್ಲ, ನಿಯತ್ತಿನ ಮನುಷ್ಯ. ನಾಲ್ಕು ಜನರ ಕೈಯಲ್ಲಿ ಸೈ ಅನ್ನಿಸಿಕೊಂಡು ಸಂಸಾರ ಮಾಡಿದ್ದ. ಅತ್ತ ಗಂಡ ಸತ್ತು ಸ್ಮಶಾನ ಸೇರಿದ, ಇತ್ತ ಕರಗಮ್ಮ ಗಂಡಸತ್ತ ತಿಂಗಳೊಪ್ಪತ್ತಿನಲ್ಲಿ ಗಂಡುಮಗುವಿಗೆ ಜನ್ಮ ಕೊಟ್ಟಿದ್ದಳು. ಇದ್ದ ಇಪ್ಪತ್ತು ಗುಂಟೆ ಹೊಲದಲ್ಲಿ ಮಳೆ ಆದರೆ ಬೆಳೆ. ಬೆಳೆ ಅಂದ್ರೆ ಎಂಥಾ ಬೆಳೆ? ರಾಗಿ, ಹುರುಳಿ ಇಂಥದ್ದು. ಮನೆಯಲ್ಲಿ ಕೈಲಾಗದ ಅತ್ತೆ ಮಾವ, ತಾನು, ತನ್ನ ಎಳೆಗೂಸು. ತಾಯಿಯಿಲ್ಲದ ತವರು. ಮದುವೆ ಮಾಡಿಕೊಡುವಾಗ ಅಪ್ಪ ಕೊಟ್ಟಿದ್ದ ಒಂದು ಎಮ್ಮೆ ಬಿಟ್ಟರೆ ಮತ್ತೇನೂ ಆಸರೆ ಇರಲಿಲ್ಲ ಅವಳಿಗೆ. ಬಾಣಂತಿ ಬೆನ್ನಲ್ಲೇ ಹಸಿಮೈಯಲ್ಲೇ ಸಂಸಾರದ ನೊಗ ಎಳೆಯೋ ಎತ್ತಾದಳು ಕರಗಮ್ಮ. ಅತ್ತೆಮಾವನ ಪಾದ ಮತ್ತೆ ಸಿವನ ಪಾದ....ದಲ್ಲಿ ನಂಬಿಕೆಯಿಟ್ಟ ಕರಗಮ್ಮ ಅತ್ತ ಅತ್ತೆ ಮಾವನನ್ನೂ ನೋಡಿಕೊಳ್ಳುತ್ತಾ ಇತ್ತ ತನ್ನ ಗಂಡುಮಗ ನನ್ನೂ ನೋಡಿಕೊಳ್ಳುತ್ತಾ ಹತ್ತಾರು ವರ್ಷ ಹೆಣಗಾಡಿ ದಳು. ಮಗನಿಗೆ ತನ್ನ ಗಂಡನ ಹೆಸರನ್ನೇ ಇಟ್ಟು ಚಿಕ್ಕಭೈರ ಎಂದು ಕರೆದಳು. ಪ್ರೀತಿಯಿಂದ ಭೈರ, ಭೈರಪ್ಪ ಎಂದೂ ಕರೆಯುತ್ತಿದ್ದರು. ದಿನಕಳೆದಂತೆ ಅತ್ತೆ ಮಾವಂದಿರೂ ಶಿವನ ಪಾದ ಸೇರಿದರು. ಮನೆಯಲ್ಲಿ ಉಳಿದಿದ್ದು ಅವಳು ಮತ್ತು ಮಗ ಭೈರ ಮಾತ್ರ. 'ಭೈರನಿಗೆ ನಾಲಕ್ಷರ ಕಲಿಸಬೇಕು, ಅವನು ತಮ್ಮಂತೆ ಈ ಬಂಗದ ಬಾಳು ಬಾಳಬಾರದು' ಅಂತ ಮಾಡಿದ ಪ್ರಯತ್ನವೆಲ್ಲಾ ಹೊಳೆಯಲ್ಲಿ ಹುಣಸೆಹಣ್ಣು ತೇದಂಗಾ ಗಿತ್ತು. "ಇಸ್ಕೂಲ್‌ಗೋಗೋ ಬೈರ" ಅಂದ್ರೆ "ಊಂ, ಒಯ್ತಿನ್ ಕನವ್ವಾ" ಅಂತ ಬ್ಯಾಗು ತಗಲಿಸಿಕೊಂಡು ಹೋದವನು ಸೀದಾ ಮಾರಿಗುಡಿಯಲ್ಲಿ ಸದಾಕಾಲ ಇಸ್ಪೀಟಾಡ್ತ ಕೂತಿದ್ದವರ ಮಧ್ಯಕ್ಕೆ ಬಂದ್ ನಿಲ್ಲೋನು; ಅವರಿಗೆ ಬೇಕಾದ ಬೀಡಿ, ಬೆಂಕಿಪೊಟ್ಟಣ, ಟೀ, ವಡೆ ಇತ್ಯಾದಿಗಳನ್ನು ಸಪ್ಲೈ ಮಾಡ್ಕೊಂಡು ಕಾಲಕಳೆಯೋನು. ಎಲೆಕ್ಷನ್ ಯಂಗ್ಟಯ್ಯ ಆ ಪೋಲಿ ಗುಂಪಿನ ಲೀಡರು. ಅವರಿಗಷ್ಟೇ ಏನು ಅಕ್ಷರದ ಗಂಧಗಾಳಿಯೇ ಇಲ್ಲದ ಆ ಇಡೀ ಊರಿಗೇ ಲೀಡರು. ಶ್ರೀಮಂತ ಅಪ್ಪನ ಶಿಸ್ತಿನ ಕಾರಣಕ್ಕಾಗಿ ಯಂಗ್ಟಯ್ಯ ಏಳನೇ ತರಗತಿಯವರೆಗೆ ಓದಿಕೊಂಡಿದ್ದ. ಅಪ್ಪನ ಬಡ್ಡಿ ಸಾಲದ ಲೆಕ್ಕ ಬರೆಯೋ ವಷ್ಟನ್ನು ಕಲ್ತಿದ್ದ. ಅಪ್ಪ ಸತ್ತ ಮರುದಿನದಿಂದ್ಲೇ ಅಪಾಪೋಲಿ ಯಾದ. ಊರಿನ ತುಂಡು ಹುಡುಗರಿಗೆಲ್ಲಾ ಸರ್ಕಾರಿ ಸರಾಯಿ ಕುಡಿಯೋದು ಕಲಿಸಿದ. ಸದಾ ಒಂದು ಗುಂಪು ತನ್ನ ಹಿಂದೆ ತಿರುಗೋ ಹಾಗೆ ಮಾಡಿದ. ಯಾವುದೇ ಎಲೆಕ್ಷನ್ ಬಂದರೂ ಎಲ್ಲ ಪಕ್ಷದವರಿಗೂ ಬೇಕಾದವನಾದ. ಪುಢಾರಿಗಳ ಭಾಷಣಕ್ಕೆ ಜನ ಸೇರಿಸೋದು, ಹೆಚ್ಚು ಹಣ ಕೊಟ್ಟವರಿಗೆ ಓಟು ಹಾಕ್ಸೋದು, ರಾಜಕೀಯ ರ್‍ಯಾಲಿಗಳಿಗೆ ಲಾರಿಯಲ್ಲಿ ಜನರನ್ನು ಕೊಂಡೊಯ್ಯೋದು, ಇದರಲ್ಲೆಲ್ಲಾ ಯಂಗ್ಟಯ್ಯನದು ಎತ್ತಿದ ಕೈ. ಯಾವುದೇ ಎಲೆಕ್ಷನ್ ಬಂತು ಅಂದ್ರೆ ತಾನೇ ಕ್ಯಾಂಡಿಡೇಟೇನೋ ಅನ್ನೋ ಹಾಗೆ ಹರಿದಾಡೋನು. ಹಾಗಾಗಿ ಸುತ್ತಮುತ್ತಲಿನ ಹಳ್ಳಿಯವರೆಲ್ಲಾ ಇವನನ್ನು ಎಲೆಕ್ಷನ್ ಯಂಗ್ಟಯ್ಯ ಅಂತಲೇ ಕರೆಯೋರು. ಭೈರ ಕಡೆಗೆ ಎಲೆಕ್ಷನ್ ಯಂಗ್ಟಯ್ಯನ ಬೆನ್ನುಬಿದ್ದ.

ಕರಗಮ್ಮ ಮಗನನ್ನು ಸರಿದಾರಿಗೆ ತರೋ ದಾರಿಕಾಣದೆ ಕಂಗಾಲಾದಳು. ವರ್ಷಗಳು ಉರುಳಿದರೂ ಭೈರ ಬದಲಾಗ್ಲಿಲ್ಲ, ಕಡೆಗೆ 'ಒಂದು ಮದುವೆ ಮಾಡ್ಬುಟ್ರೆ ತಾನಾಗೇ ದಾರಿಗೆ ಬರ್‍ತಾನೆ' ಎಂದುಕೊಂಡವಳೆ ಎಲೆಕ್ಷನ್ ಯಂಗ್ಟಯ್ಯನನ್ನೇ ಮೊರೆಹೋಗಿ ಬೇಡಿಕೊಂಡಳು. ಯಂಗ್ಟಯ್ಯ 'ಒಳ್ಳೇದೇ ಆಯ್ತು' ಅಂತ ಅಂದುಕೊಂಡ. ಅದೇ ಊರಿನ ಗರೀಬಿ ಹಠಾವೋ ಸೈಟಿನಲ್ಲಿ ಮನೆಮಾಡಿಕೊಂಡು, ಇದ್ದೊಬ್ಬ ಮಗಳನ್ನು ವಯಸ್ಸು ಮೂವತ್ತಾದರೂ ಮದುವೆ ಮಾಡಲಿಕ್ಕಾಗದೆ ಪರದಾಡುತ್ತಿದ್ದ ಕೆಂಪೇಗೌಡನ ಮಗಳು ನಿಂಗಮ್ಮನನ್ನು ಕಮಿಷನ್ ಪಡೆದು ವರದಕ್ಷಿಣೆ ಇಲ್ಲದೆ ಮದುವೆ ಮಾಡಿಸಿದ. ನಿಂಗಿ ನಿಯತ್ತಿನ ಹೆಂಗಸು. ಅವಳು ಬಂದ ಮೇಲೂ ಭೈರನ ಚಾಳಿಯಲ್ಲಿ ಬದಲಾವಣೆ ಯೇನೂ ಆಗಲಿಲ್ಲ. ಆದರೆ ಕರಗಮ್ಮ ಮತ್ತು ನಿಂಗಮ್ಮ ಅತ್ತೆ-ಸೊಸೆಯರಾದರೂ ತಾಯಿ-ಮಗಳಂತೆ ಅನ್ಯೋನ್ಯ ವಾಗಿದ್ದರು. ಕರಗಮ್ಮನ ಕಷ್ಟದ ದಿನಗಳು ಕಳೆದು ಹೋದೋ ಅನ್ನುವಾಗಲೆ ನಿಂಗಮ್ಮ ಬಸುರಿಯಾಗಿ ತಿಂಗಳು ತುಂಬುತ್ತಾ ಬಂದವು. ಅಸೆಂಬ್ಲಿ ಎಲೆಕ್ಷನ್‌ಗೆ ಹತ್ತೇ ದಿನಗಳು ಬಾಕಿ. ಈ ಬಾರಿ ಇಲ್ಲೀತನಕ ಹೆಸರೇ ಕೇಳದಿದ್ದ 'ಪಂಚರಂಗಿ ಪಕ್ಷ'ದ ಭರಾಟೆ ಬಹಳ ಜೋರಾಗಿತ್ತು, ಎಲೆಕ್ಷನ್ ಯಂಗ್ಟ-ಭೈರ ಇಬ್ಬರೂ ಇಡೀ ಊರ ತುಂಬಾ ಓಡಾಡಿದರು. ಎಲ್ಲ ಪಕ್ಷದವರಿಂದಲೂ ಜನರಿಗೆ ಹಂಚುವುದಕ್ಕೊದು ಹಣ ಪಡೆದರು. ಆದರೆ ಪಂಚರಂಗಿ ಪಕ್ಷದವರು ತಿರುಪತಿ ತಿಮ್ಮಪ್ಪನ ಮೇಲೆ ಆಣೆಮಾಡಿಸಿಕೊಂಡು ಹಂಚಿದ್ದ ಹಣ, ಹೆಂಡ, ಸೀರೆ ಇಡೀ ಊರಿಗೇ ಆಕರ್ಷಕವಾಗಿ ಕಂಡವು. ಹೆಂಡ, ಸೀರೆ, ಅಂಗಿ, ಲುಂಗಿ ಗಳಲ್ಲದೆ ಒಂದೊಂದು ಓಟಗೂ ಗರಿಗರಿ 500ರ ಒಂದೊಂದು ನೋಟುಗಳನ್ನು ನೀಡಿದರು. ಕರಗಮ್ಮ ಮತ್ತು ನಿಂಗಮ್ಮ 'ಈ ಪಾಪದ ಹಣ ನಮಗೆ ಬ್ಯಾಡ' ಎಂದು ಎಲ್ಲವನ್ನೂ ನಿರಾಕರಿಸಿದರು. ಆದರೆ ರಾತ್ರಿಗೆ ಹೆಂಡತಿಯನ್ನು ಪುಸಲಾಯಿಸಿದ ಭೈರ "ಆ ಮುದುಕಿ ನಮ್ಮವ್ವಂಗೇನು ಗೊತ್ತಾಯ್ತದೆ. ಅವ್ರೇನು ಪುಗ್ಸಟ್ಟೆ ಕೊಟ್ಬಾರಾ. ಗೆದ್ದಮೇಲೆ ಅವ್ರ್ನ ಮಾತಾಡ್ಸಕಾಯ್ತದಾ, ಬೆಂಗ್ಳೂರ್ ಸೇರ್ಕೊಂಡು ಕೋಟಿಕೋಟಿ ಗುಡ್ಡೆ ಆಕ ತ್ತಾರೆಕನ, ತಕ್ಕೋ" ಎಂದವನೆ ಮರುಳುಮಾಡಿ ಸೀರೆ ಕೊಟ್ಟು ಹಣ ತಾನೆ ಇಟ್ಕೊಂಡ.

ಎಲೆಕ್ಷನ್ ದಿನ ಬಂತು. ನಿಂಗಿಗೆ ಸಣ್ಣಗೆ ಹೊಟ್ಟೆ ನೋವು ಕಾಣಿಸಿಕೊಳ್ತು. ಕರಗಮ್ಮ ಎದ್ದವಳೆ "ಮೊಗ ನಿಂಗಿ, ನೀನೇನೂ ಓಟಾಕಕೆ ಬರೂದು ಬ್ಯಾಡ. ನಾನೋಗಿ ಆಕಿಬತ್ತೀನಿ" ಎಂದವಳೆ ತಾನು ಹೋಗಿ ಓಟು ಮಾಡಿ ಬಂದಳು. ಸಂಜೆಯಾಗುತ್ತಿದ್ದಂತೆ ಯಂಗ್ಟಯ್ಯ ಮತ್ತು ಭೈರ ಓಟಿನ ಪಟ್ಟಿ ಹಿಡಿದುಕೊಂಡು, ಹಣ-ಸೀರೆ ಪಡೆ ದವರಲ್ಲಿ ಯಾರ್‍ಯಾರು ಓಟಿಗೆ ಬರಲಿಲ್ಲ ಎಂಥು ಲೆಕ್ಕ ಹಾಕುತ್ತಿದ್ದರು. ತಮ್ಮ ಮನೆಯಲ್ಲೇ ಓಟಿಗೆ ಬರಲಿಲ್ಲ ವೆಂಬುದನ್ನು ತಿಳಿದ ಭೈರ ಯಂಗ್ಟಯ್ಯನ ಜೊತೆಗೂಡಿ ಓಡೋಡಿ ಮನೆಗೆ ಬಂದ. ಹೊಟ್ಟೆನೋವೆಂದು ಮಲಗಿದ್ದ ನಿಂಗಮ್ಮನನ್ನು ಕಂಡು ಭೈರ ಅಬ್ಬರಿಸಿದ. ನಿಜಸ್ಥಿತಿಯ ಅರಿವು ಇಬ್ಬರಿಗೂ ಬೇಕಿರಲಿಲ್ಲ, ಧಾರಾಳವಾಗಿ ಹಣ-ಹೆಂಡ ಕೊಟ್ಟವರಿಗೆ ತಮ್ಮ ಬೂತಿನಲ್ಲಿ ಎಷ್ಟು ಲೀಡ್ ಕೊಟ್ಟೆವು ಎಂದು ತೋರಿಸಿಕೊಡುವುದೇ ಅವರಿಗೆ ಮುಖ್ಯವಾಗಿತ್ತು. ನಿಂಗಮ್ಮ "ನಾನು ಓಟಿಗೆ ಬರ್‍ನಾರಿ" ಎಂದು ಖಡಾಖಂಡಿತವಾಗಿ ಹೇಳಿದಳು. ಯಂಗ್ಟಯ್ಯ ಕೆಂಡಾಮಂಡಲನಾದ. "ಹಣ-ಸೀರೆ ನಿನ್ನ ಮಿಂಡಂದ, ಎದ್ದ್ ಬಂದು ಓಟಾಕಿಯೋ ಇಲ್ಲ, ನಿನ್ನ ಪುಟ್ಟಿ ಮ್ಯಾಲೆ ಒದ್ದು ಹೊತ್ಕೊಂಡೋಗಿ ಓಟು ಒತ್ತಿಸ್ಟೇಕೋ" ಎಂದು ಅಬ್ಬರಿಸಿದ. ಮಲಗಿದಲ್ಲಿಂದ ಮೆಲ್ಲನೆ ಎದ್ದುಕುಳಿತ ನಿಂಗಮ್ಮನಿಗೂ ಕ್ಯಾಣ ಬಂದದ್ದೇ "ನಿನ್ ಸೀರೆಗೆ ನನ್ ಯಕ್ಡ ಸಿಕಾಕ. ತಕ್ಕೋ ನಿನ್ ಸೀರೇನ" ಎಂದವಳೆ ತಲೆದೆಸೆಯಲ್ಲೇ ಇದ್ದ ಸೀರೇನ ಅವನ ಮುಖದ ಮೇಲೆ ಎಸೆದು ಕ್ಯಾಕರಿಸಿ ಉಗಿದುಬಿಟ್ಟಳು. ತನ್ನ ಗಂಡನನ್ನು ಹಾಳುಮಾಡಿದವನು ಎಂಬ ಸಿಟ್ಟು ಅವಳಿಗೆ ಮದುವೆಯಾದಾಗಿನಿಂದಲೂ ಇತ್ತು. ಅದೇವೇಳೆಗೆ ಹೊರಗೋಗಿದ್ದ ಕರಗಮ್ಮ "ಏನಪ್ಪಾ ಗಲಾಟೆ" ಎಂದುಕೊಂಡು ಒಳಗೆ ಕಾಲಿಟ್ಟಳು. ಇದನ್ನೆಲ್ಲಾ ನೋಡುತ್ತಾ ತಣ್ಣಗೆ ನಿಂತಿದ್ದ ಭೈರ. ಯಂಗ್ಟಯ್ಯ ತನಗಾದ ಅವಮಾನ ತಡೀಲಾರ್‍ದೆ "ಎಷ್ಟಮ್ಮಿ ಕೊಬ್ಬು ನಿನ್ಗೆ, ಬೋಸುಡಿಮಗ್ಳೆ" ಎಂದವನೆ ಗೋಡೆಗೊರಗಿ ಕುಳಿತಿದ್ದ ನಿಂಗಮ್ಮನ ಕೆನ್ನೆಗೆ ಬಾರಿಸಿಯೇ ಬಿಟ್ಟ. ಕರಗಮ್ಮ ಗರಬಡಿದಂತಾ ದಳು. ನಿಂಗಮ್ಮ ಕಿಟಾರನೆ ಕಿರುಚಿ ಒದ್ದಾಡತೊಡಗಿದಳು. ಯಂಗ್ಟಯ್ಯ ಬೈರ ಇಬ್ಬರೂ "ಸಾಯಿ ನಾಯಿಮುಂಡೆ" ಎಂದು ಬೈದುಕೊಳ್ಳುತ್ತಾ ಹೊರನಡೆದರು. ನಿಂಗಮ್ಮನಿಗೆ ಹೆರಿಗೆಯಾಗಿ ಹೋಯಿತು. ಹೊರಬಂದ ಮಗು ಕಿಟಾರನೆ ಕಿರುಚಿಕೊಂಡರೆ, ಇತ್ತ ನಿಂಗಮ್ಮ ಮುಚ್ಚಿದ ಕಣ್ಣನ್ನು ತೆರೆಯಲಿಲ್ಲ, ದಿಕ್ಕೆಟ್ಟ ಕರಗಮ್ಮನಿಗೆ ಅಪ್ಪರಲ್ಲಾಗಲೇ ನೆರೆದಿದ್ದ ಅಕ್ಕಪಕ್ಕದ ಹೆಂಗಸರು ಆಸರೆಯಾದರು. ಹೆಣದ ಎದೆಯಿಂದಲೇ ಹಾಲನ್ನು ಹಿಂಡಿ ಮಗುವಿಗೆ ಉಣಿಸಿ ದರು. ಅಲ್ಲಿಂದಾಚೆಗೆ, ಎರಡುದಿನ ಮೊದಲು ಹಡೆದಿದ್ದ ಹೊಲಗೇರಿಯ ಕಾಮನಜೋಗಿ ಮಗಳು ಕಲಾವತಿಯ ಎದೆಹಾಲೇ ಕೂಸಿಗೆ ಗತಿಯಾಯ್ತು.

ಅಂದು ಹೊರನಡೆದ ಭೈರ ಮತ್ತೆ ಊರು ಸೇರಲಿಲ್ಲ, ಅಲ್ಲಿ ಇಲ್ಲಿ ಅಲೆಯುತ್ತಾ ಏಳೆಂಟು ವರ್ಷಗಳ ನಂತರ ಊರಿಗೆ ಬಂದು ಯಂಗ್ಟಯ್ಯ ನನ್ನು ಸೇರಿಕೊಂಡಿದ್ದ. ಊರಿಗೆ ಬಂದ ಕೆಲದಿನಗಳಲ್ಲಿ ಊರಲ್ಲಿ ಮುತ್ತತ್ತಿಯ ಮುತ್ತೂರಾಯನ ಸೇವೆಗೆಂದು ಜನ ಹೋಗು ತ್ತಿದ್ದರು. ಅಲ್ಲಿಗೆ ತಾನೂ ಹೋದ. ಮುತ್ತತ್ತಿಗೆ ಹೋಗು ವವರು ಕುರಿ-ಕೋಳಿ ಗಳನ್ನು ಕೊಂಡು ಹೋಗಿ ಅಲ್ಲೇ ಕುಯ್ದು ಅಡುಗೆ ಮಾಡಿ ದೇವರಿಗೆ ನೈವೇದ್ಯ ಒಪ್ಪಿಸಿ, ಅನಂತರ ತಾವೂ ಉಂಡು, ಕುಡಿದು ನಿಶಾ ಇಳಿಯು ವವರೆಗೆ ಕಾವೇರಿಯಲ್ಲಿ ಈಜಾಡಿ ಸಂಜೆಗೆ ವಾಪಸ್ಸಾಗು ವುದು ಪದ್ಧತಿ. ಹೀಗೆ ಕುಡಿದ ಅಮಲಿನಲ್ಲಿ ಈಜಾಡುತ್ತಿದ್ದ ಭೈರ ಸುಳಿಗೆ ಸಿಕ್ಕಿ ಕಾಣೆಯಾದ. ಎಷ್ಟು ಹುಡುಕಿದರೂ ಹೆಣ ಸಿಗಲಿಲ್ಲ. ಸಂಜೆಯವರೆಗೆ ಹುಡುಕಿದ ಜನ ಬರಿಗೈಯಲ್ಲಿ ವಾಪಸಾದರು. ಭೈರನ ಸಾವು ಅಲ್ಲಿದ್ದ ಯಾರ ಎದೆಯನ್ನೂ ಕಲಕಲಿಲ್ಲ, ಊರಿಗೆ ಬಂದು ಮುದುಕಿಗೆ ಸುದ್ದಿ ಮುಟ್ಟಿಸಿದಾಗ ಕರಗಮ್ಮ ನಿಡಿದಾಗಿ ಒಂದು ನಿಟ್ಟುಸಿರು ಬಿಟ್ಟದ್ದು ಬಿಟ್ಟರೆ ಎಳ್ಳನೀರು ಬಿಡುವುದಕ್ಕೂ ಮುಂದಾಗಲಿಲ್ಲ.

ಕರಗಮ್ಮನಿಗೆ ಅವಳ ಮದುವೇಲಿ ಬಳುವಳಿಯಾಗಿ ಬಂದ ಎಮ್ಮೆಯ ಸಂತತಿಯೇ ಈವರೆಗೂ ಅವಳ ಬದುಕಿಗೆ ಆಸರೆಯಾಗಿ ಬಂದಿವೆ. ಹಿಂದೆ ಅವಳ ಹಟ್ಟಿಯಲ್ಲಿ ಒಂದೆರಡು ಕೋಣಗರು ಹುಟ್ಟಿದ್ದಿದ್ದ ಅವುಗಳನ್ನು ವರ್ಷ ಕಳೀತಿದ್ದ ಹಾಗೆ ಕಿರುಗಾವಲ ಸಾಬರಿಗೆ ಮಾರಿಬಿಡುತ್ತಿದ್ದಳು. ಈಗ ಇದೊಂದು ಕೋಣಗರು ಹುಟ್ಟಿ ಅವಳಿಗೆ ಕಂಟಕವಾಗಿ ಕಾಡಿದ ಈ ಮಾರಿಕೋಣಕ್ಕೀಗ ಹರೆಯದ ಪ್ರಾಯವಾಗಿದ್ದರೂ ಆ ಎಮ್ಮೆ ಇನ್ನೊಂದು ಕರು ಹಾಕಿದ್ದರೂ ಕದ್ದು ಬಂದು ಹಾಲು ಕುಡಿಯೋದು, ಎಮ್ಮೆಗೆಂದು ಹಾಕಿದ್ದ ಹುಲ್ಲು ತಿಂದು ಹೋಗೋದು ತಪ್ಪಿಲ್ಲ, ಆ ಎಮ್ಮೆಯೂ ಅಷ್ಟೆ ಆ ಕೋಣನ ಮೇಲೆ ಅಪಾರ ಪ್ರೀತಿ. ಅದು ಬಂತೆಂದರೆ ಅದರ ಬಾಯಿಗೆ ಕೆಚ್ಚಲು ಕೊಟ್ಟು ನಿಂತುಬಿಡುತ್ತದೆ. ಇದನ್ನು ಕಾಯೋದೇ ಕರಗಮ್ಮನಿಗೆ ದೊಡ್ಡ ತಲೆನೋವು.

ಕೋಣಗರು ಎಮ್ಮೆಗೆ ಹಾಕಿದ ಹುಲ್ಲನ್ನು ತಿಂದದ್ದ ಕ್ಕಿಂತಲೂ ಸಂಜೆ ಡೈರಿಗೆ ಹಾಕಬೇಕಾದ ಹಾಲನ್ನೆಲ್ಲಾ ಕುಡಿದುಬಿಡ್ತಲ್ಲಾ ಎಂಬ ದುಃಖ ಅವಳನ್ನು ಬಾಧಿಸುತ್ತಿತ್ತು. ಹಾಲಿನಿಂದ ಸಿಗುವ ಒಂದೊಂದು ರೂಪಾಯಿಯೂ ಕರಗಮ್ಮನಿಗೆ ಮೊಮ್ಮಗನ ಬದುಕು ರೂಪಿಸಲು ನೆರವಾಗುವ ಮುಡುಪಿನ ಹಣವಿದ್ದ ಹಾಗೆ.

"ಅಜೋ ಸಂಕ್ರಾ, ಇದ್ಯೇನಾರಾ ಗತಿ ಕಾಣಿಸ್ಬೇಕಲ್ಲಾ. ಕಿರಗಾವಲ ಸಾಬ್ರು ಯಾಕ್ಲಾ ಬತ್ತಾಯಿಲ್ಲಾ? ದುಡ್ಡು ಬ್ಯಾಡ ಅಂಗೆ ಹಿಡ್ಕೊಂಡೋಗಿ ಅಂತ್ಲಾದ್ರೂ ಏಳ್ಬೇಕಲ್ಲಾ" ಅಂದ್ಲು. ಅದಕ್ಕೆ ಶಂಕ್ರ ಇದ್ದವನು,

"ಅಮ್ಮೋ ಕಿರುಗಾವಲ ಸಾಬ್ರೂ ಬರಲ್ಲ, ಮಳವಳ್ಳಿ ಸಾಬ್ರೂ ಬರಲ್ಲ" ಅಂದ.

"ಅದ್ಯಾಕ್ಲ ಮೊಗ, ಅವರು ದನ ಎಮ್ಮೆ ತಿನ್ನೂದ್ ಬುಟ್ಬುಟ್ರಾ?"


"ಅಂಗಲ್ಲ ಕನಮ್ಮಾ, ನಾನು ನಿನ್ಗೆ ಅವತ್ತೇ ಏಳ್ಲಿಲ್ವಾ, ಸರ್ಕಾರದೋರು ಎಮ್ಮೆ, ದನ ಯಾವ್ದನ್ನೂ ಕಡಿಬಾರ್‍ದು ಅಂತ ಕಾನೂನ್ ಮಾಡವ್ರೂ."

"ಯಾಕಂತೆ ಅಂತ ಕಾನೂನ್ ಮಾಡಿದ್ದಾರು? ಮುದೆತ್ತು ಮುದೆಮ್ಮೆ, ಕೋಣ್ಗರನೆಲ್ಲಾ ಏನ್ಮಾಡ್ಬೇಕಂತೆ? ಎಲ್ಲಾನೂ ತಕ್ಕಂಡೋಗಿ ಇದಾನ್‌ಸೌದದ್ ತಾವು ಕಟ್ಟಾಕುಟ್ಟ್ ಬಂದ್ರೆ ಗೊತ್ತಾಯ್ತದವ್ರ್ಗೆ. ಹುಲ್ಲು, ಸೊಪ್ಪು ಆಕ್ಕಂಡು, ತೊಪ್ಪೆ ಕೂರೆ ಬಾಚ್ಕೊಂಡು ಬಿದ್ದಿರ್ಲಿ, ನನ್ನಕುತ್ತ ಇನ್ನೊಂದ್ಸಲ ಓಟ್ ಕೇಳೂಕ್ ಬರ್ಲಿ" ಎಂದು ಕ್ಯಾಕರಿಸಿ ಉಗಿದು ಕುದಿಯತೊಡಗಿದಳು.

2

ಮಾದಳ್ಳಿ ಲಾಗಾಯ್ತಿನಿಂದಲೂ ಕರಾವಿಗೆ ಹೆಸರಾದ ಹಳ್ಳಿ, ಪ್ರತಿ ಮನೆಯಲ್ಲೂ ಕನಿಷ್ಠ 2-3 ಎಮ್ಮೆಗಳಿರುತ್ತವೆ. ವರ್ಷದುದ್ದಕ್ಕೂ ಒಂದಲ್ಲ ಒಂದು ಎಮ್ಮೆ ಕರೆಯುತ್ತಿರುತ್ತದೆ. ಹಿಂದಾಗಿದ್ದರೆ ಹಳ್ಳಿ ಹೆಂಗಸರು ವಾರಕ್ಕೊಮ್ಮೆ ನಡೆಯುವ ಮಳವಳ್ಳಿ ಸಂತೆಗೆ ಮೊಸರು, ಬೆಣ್ಣೆಯನ್ನು ಹೊತ್ತೊಯ್ದು ಮಾರಾಟ ಮಾಡಿಬರುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಊರಲ್ಲೇ ಸಹಕಾರಿ ಹಾಲಿನ ಡೈರಿ ಇರುವುದರಿಂದ ಹೊತ್ತು ಮಾರುವ ಸ್ಥಿತಿಯಿಲ್ಲ. ಹಾಲಿನ ಡೈರಿಗಳು ಬಂದ ಮೇಲೆ ಹೆಚ್ಚು ಹಾಲು ಕೊಡುವ ಹೈಬ್ರೀಡ್ ಹಸುಗಳು ಚಾಲ್ತಿಗೆ ಬಂದಿದ್ದರೂ ಈ ಊರಿನ ಜನರಿಗೆ ಮಾತ್ರ ಎಮ್ಮೆ ಸಾಕಾಣಿಕೆಯಲ್ಲೇ ಅಪಾರ ವಿಶ್ವಾಸ. 'ಎಮ್ಮೇಹಾಲು-ಮೊಸರು, ಬೆಣ್ಣೆಲಿರೋ ಬನಿ ಈ ಪರದೇಶಿ ಹಸುಗಳಿಗೆಲ್ಲಿಂದ ಬರಬೇಕು. ಅದೂ ಅಲ್ದೆ ಅವಕ್ಕೆ ಮೂಟೆಗಟ್ಲೆ ಹಿಂಡಿ ಬೂಸಾ ಹಾಕ್ಬೇಕಂತೆ. ನೂರೆಂಟ್ ರೋಗ್‌ವಂತೆ'- ಎಂದು ಹೊಸ ಆವಿಷ್ಕಾರಕ್ಕೆ ಸುಲಭದಲ್ಲಿ ಒಗ್ಗಿಕೊಳ್ಳದ ಜನ ಎಮ್ಮೆ ಸಾಕಾಣಿಕೆಯನ್ನೇ ನಂಬಿ ನಡೆಯುತ್ತಾ ಬಂದಿದ್ದಾರೆ. ಎಷ್ಟೋ ಕುಟುಂಬಗಳಲ್ಲಿ ಗಂಡಸರು ಉಂಡಾಡಿಗಳಾಗಿ ಹೆಂಡ-ಇಸ್ಪೀಟ್-ಗುಟ್ಕಾ-ಸಿನಿಮಾ ಅಂತ ಕಾಲತಳ್ಳಿದರೆ, ಮಹಿಳೆ ಯರು ಕರಾವಿನಿಂದಲೇ ಕಾಸಿಗೆ ಕಾಸು ಕೂಡಿಸಿ ಸಂಸಾರ ಸಾಗಿಸಿ ಕೊಂಡು, ಕೈಲಾದಷ್ಟು ಮಕ್ಕಳನ್ನೂ ಓದಿಸಿಕೊಂಡು, ಮಾನವಂತ ಬದುಕು ಸಾಗಿಸುತ್ತಿದ್ದಾರೆ.

ಮಾರಮ್ಮನ ಹೆಸರಲ್ಲಿ ಕೋಣ ಬಿಡೋದು ಇದೇನು ಹೊಸದಲ್ಲ, ಬಹಳ ಹಿಂದಿನಿಂದಲೂ ಇದು ನಡೆದು ಬಂದ ಪದ್ಧತಿ. ಹಾಗೆ ಬಿಡುವಾಗ ಊರವರೆಲ್ಲಾ ಸೇರಿ ಊರೊಟ್ಟಿನ ಹಣದಲ್ಲಿ ಒಂದು ಕೋಣಗರುವನ್ನು ಖರೀದಿಸಿ ಬಿಡುತ್ತಿದ್ದರು. ಅಪರೂಪಕ್ಕೊಮ್ಮೆ ಹರಕೆ ಹೊತ್ತ ಯಾರಾದರೊಬ್ಬರು ತಮ್ಮ ಮನೆಯಲ್ಲಿ ಹುಟ್ಟಿದ ಕೋಣಗರುವನ್ನೇ ಸ್ವಇಚ್ಛೆಯಿಂದ ಬಿಡುತ್ತಿದ್ದುದೂ ಇತ್ತು. ಹೀಗೆ ಬಿಟ್ಟ ಕೋಣ ವರ್ಷವಿಡೀ ಎಲ್ಲೆಂದರಲ್ಲಿ ಮೇಯ್ದು ಕೊಬ್ಬುತ್ತಿತ್ತು, ಅದನ್ನು ಹಬ್ಬದ ದಿನ ಊರವರೆಲ್ಲಾ ಸೇರಿ 'ಊರಿಗೆ ಒಳ್ಳೇದ್ ಮಾಡವ್ವಾ ನಂತಾಯಿ' ಎಂದು



) ಬಲಿಕೊಟ್ಟು ಹರಕೆ ಒಪ್ಪಿಸುತ್ತಿದ್ದರು. ಯಾವಾಗ ...ರ ಪ್ರಾಣಿಬಲಿಯನ್ನು ನಿಷೇಧಿಸಿತೋ ಅಂದಿನಿಂದ ...ಮ್ಮನಿಗೆ ಕೋಣ ಬಿಡುವುದು ನಿಂತುಹೋಯ್ತು. ...ಮೂ ಒಂದು ಸಾರಿ ಊರಲ್ಲಿ ಹುಲುಸಾಗಿ ಬೆಳೆದು ...ದ್ದ ಗೌರಿಸಣ್ಣ ತಳಿಯ ಭತ್ತ ಬೆಂಕಿರೋಗ ಬಂದು ...ನಾಶ ಆಗಿ ಎಕರೆಗೆ ಒಂದು ಖಂಡುಗ ಭತ್ತವೂ ...ಲ್ಲ. ಜನರೆಲ್ಲಾ 'ಇದು ಮಾರಮ್ಮನ ಮುನಿಸಿನಿಂದ್ಲೇ ...ದ್ದು. ಇದಕ್ಕೇನಾದ್ರೂ ಸಾಂತಿ ಮಾಡ್ಬೇಕು' ಅಂದು ...ತವರೇ ಮಾರಿಗುಡಿ ಮಗ್ಗುಲ ಹಟ್ಟಿ ಬೋರೇ ...ರ ಮನೆಯಲ್ಲಿದ್ದ ಎಂಟು ತಿಂಗಳ ಕೋಣಗರುವನ್ನೇ ...ದಿಸಿ ಗುಟ್ಟಾಗಿ ಮಾರಮ್ಮನಿಗೆ ಹರಕೆ ಒಪ್ಪಿಸಿ ...ೊಡುವುದಕ್ಕೂ ಅದೇ ವೇಳೆಗೆ ಊರಿಗೆ ಮೂರೇ ...) ದೂರದಲ್ಲಿದ್ದ ಮಳವಳ್ಳಿ ಪೊಲೀಸ್ ಸ್ಟೇಶನ್ನಿಗೆ ಹೇಗೋ ಸುದ್ದಿ ಮುಟ್ಟಿ, ಅವರು ಬಂದು ...ಸಾಗುವುದಕ್ಕೂ ಸರಿಹೋಗಿತ್ತು. ಕೋಣನ ಕುತ್ತಿಗೆ ...ಕಾಮನ ಜೋಗಿ ಹಾಗೂ ಐದಾರು ಜನ ...ನ ಪ್ರಮುಖರನ್ನು ಸ್ಟೇಶನ್ನಿಗೆ ಎತ್ತಾಕಂಡೋಗಿದ್ರು. ...ು ದಿನ ಸತಾಯ್ಸಿದ ಮೇಲೆ ಜೇಬೆಲ್ಲಾ ಖಾಲಿ ...ಕ್ಕೊಂಡು ಮುಚ್ಚಳಿಕೆ ಬರ್ಕೊಟ್ಟು ಅವ್ರು ಊರಿ ...ದ್ರು. ಆಮೇಲೆ ಈ ಸಾವಾಸ್ವೆ ಬೇಡ ಅಂದ್ಕಂಡವರೆ ...ದೀಚೆಗೆ ಕೋಣ ಬಿಡೋದು, ಕಡಿಯೋದು

ಮಾರಿಕೋಣವನ್ನು ಹೊಡೆಯಲು, ಓಡಿಸಲು ಹೆದರುತ್ತಿದ್ದವರಿಗೆ ಈಗ ಮಾರಿಭಯಕ್ಕಿಂತ ತಮ್ಮ ಹೊಲಗದ್ದೆಗಳ ಬೆಳೆ ಉಳಿಸಿಕೊಳ್ಳೋದೇ ಮುಖ್ಯವಾಗಿದೆ. ಅವುಗಳ ಕಾಟ ಹೆಚ್ಚಾದ ಹಾಗೆ ಕೋಣಗಳಿಗೆ ಬಯ್ಯುವುದಕ್ಕೆ ಬಡಿಯುವುದಕ್ಕೆ ಓಡಿಸುವುದಕ್ಕೆ ಜನ ಹೆದರುವುದಿಲ್ಲ. ದೇವರು ದಿಂಡರು ಅಂದರೆ ಭಯಭಕ್ತಿ ಇರಿಸಿಕೊಂಡಿದ್ದ ಕರಗಮ್ಮನೂ ಈಗ ಬದಲಾಗಿದ್ದಾಳೆ.

3

ದೂರದಲ್ಲಿ ಯಾರೋ ವಾಚಾಮಗೋಚರ ಬೈಯುತ್ತಾ ಇತ್ತಲೇ ಬರುತ್ತಿರುವುದು ಕಂಡು ತಲೆಬಾಗಿಲಿಗೆ ಬಂದು ಕರಗಮ್ಮ ಹಣೆಗೆ ಕೈ ಆನಿಸಿ ನೋಡಿದಳು. ಕುಂಬಾರರ ಕೆಂಪಶೆಟ್ಟಿ ಹೆಂಡತಿ ಈರಮ್ಮ ಕೈಯಲ್ಲಿ ಒಂದು ಕೋಲು ಹಿಡಿದು ಕೋಣಗರುವೊಂದನ್ನು ರಪರಪ ಬಾರಿಸುತ್ತಾ ಮಾರಮ್ಮನಿಗೆ, ಮಾರಿಕೋಣಕ್ಕೆ, ಕರಗಮ್ಮನಿಗೆ ಹೀಗೆ ಯಾರ್‍ಯಾರಿಗೋ ಕಲಿತ ಬೈಗುಳ ವನ್ನೆಲ್ಲಾ ಬಳಸುತ್ತ ಬರುತ್ತಿದ್ದಳು. ಈರಮ್ಮ ಬಂದವಳೇ ಬೈಯ್ಗುಳದ ರಭಸವನ್ನು ತಗ್ಗಿಸಿ, ನೇರವಾಗಿ ಕರಗಮ್ಮನನ್ನೇ ದಿಟ್ಟಿಸಿ,




ತರ ಕಾಣ್ತವೆ. ಅಲ್ಲಾ ನೆನ್ನೆ ರಾತ್ರಿ ಅದ ಇದ್ಕಂದೋಗಿ ಅಡಿನಲ್ಡಾಚ್ಗೆ ಬುಟ್ಬುಟ್ ಬಂದ್ರೊ ಅಂದ್ರುಲ್ಲಪ್ಪಾ, ಅದ್ಯಾವಾಗ್ ಪುನ ಮನೆ ಉಡಿಕ್ಕಂಡ್ ಬಂತಪ್ಪಾ' ಅನ್ಕಂಡ್ ನನ್ಮೊಕಾನೂ ನೋಡ್ದೆ ಒಳಕ್ಕೊಂಟೋದ್ನು, ಆಗ ಚಲುವರಾಜು 'ನಮ್ಮವ್ವ ಬೊಯ್ತಾ ಇದ್ದುದ್ದು ನಿಮ್ಮಜ್ಜಿತಾವು ಏಳ್ಬೇಡ, ಏಳಿದ್ರೆ ಇಬ್ರುಗೂ ಜಗಳ ಆಯ್ತದೆ. ಆಗ ನಾವಿಬ್ರೂ ಜೊತೆಲಿರೂಕಾಗುದಿಲ್ಲ' ಅಂತ ಅಳ್ತಾ ಇದ್ನ. ಅದ್ಕೆ ನಾನೇನೂ ಏಳೂದಿಲ್ಲ ಅಳ್ಬೇಡ ಓಗು ಅಂತ ಏಳ್ಬುಟ್ ಬಂದಿ" ಅಂದವನೇ ಮುಂದುವರಿದು "ಅಮ್ಮೊ ಚಲುರಾಜು ಲೆಕ್ಕ ಮಾಡುದ್ರಲ್ಲಿ ನಮ್ಮಿಸ್ಕೂಲ್ಗೆ ಫಸ್ಟು. ನನ್ಗೂ ಲೆಕ್ಕ ಏಳ್ಕೊಡ್ತಾನೆ. ನನ್ಕಂಡ್ರೆ ಅವನ್ಗೆ ಇಷ್ಟ, ಅವರವ್ವನ್ ತಾವು ಜಗಳಕ್ಕೋಗ್ ಬೇಡ ಕನಮ್ಮೋ" ಅಂದ. ಆಗ ಕರಗಮ್ಮ "ನನ್ಕಂದ ಯಾರ್ ಏನ್ ಬೇಕಾದ್ರೂ ಬೊಯ್ಕಳ್ಲಿ ನಾನು ಯಾರೊಂದ್ಗೂ ಜಗಳಾಡುದಿಲ್ಲ ನೀನು ಚಂದಾಗೋದಿ ದೊಡ್ಡಾ ಪೀಸರಾಗು ಸಾಕು" ಅಂದವಳೆ ಮೊಮ್ಮಗನ ತಲೆ ಸವರಿದಳು.

ಕರಗಮ್ಮನ ಕ್ವಾಣನ ಹಾವಳೀನೂ ಅಷ್ಟಿಷ್ಟಲ್ಲ. ಈಚೆಗೆ ಕರಗಮ್ಮ ತನ್ನ ಎಮ್ಮೆಗಳನ್ನು ಮೇಯ್ಸಲಿಕ್ಕೆ

ಈಗ ಪರಿಸ್ಥಿತಿ ಹಿಂದಿನಂತಿಲ್ಲ. ಊರ ತುಂಬಾ ಮಾರಿಕೋಣಗಳೇ. ಊರಿನಲ್ಲಿ ಹುಟ್ಟಿದ ಎಲ್ಲ ಕೋಣಗರುಗಳನ್ನೂ ಎಲ್ಲರೂ ಮಾರಿಗೆ ಬಿಡುವವರೆ. ಅದೊಂದೇ ಅವರಿಗಿದ್ದ ಸುಲಭದ ದಾರಿ. ಹಿಂದೆ ಪ್ರಾಣಿಬಲಿ ನಿಷೇಧಿಸಿದ್ದಾಗ ಹುಟ್ಟಿದ ಕೋಣಗರುಗಳನ್ನು ಸಾಬರಿಗೆ ವ್ಯಾಪಾರ ಮಾಡಿಬಿಡುತ್ತಿದ್ದರು. 'ಈಗ ಸರ್ಕಾರ ಅದೆಂಥದೋ ಜಾನುವಾರು ಹತ್ಯೆ ನಿಷೇಧ ಅಂತ ಕಾನೂನು ತಂದು ಸಾಬರು ಊರುಗಳಿಗೆ ಕಾಲಿಡದ ಹಾಗೆ ಮಾಡಿದ್ದಾರೆ'. ಹಾಗಾಗಿ ಈಗ ಊರ ತುಂಬಾ ಕೋಣಗಳು ಬೀದಿನಾಯಿಗಳಂತೆ ಅಡ್ಡಾಡುತ್ತಿವೆ. ಹಿಂದೆಲ್ಲಾ ಮಾರಿಕೋಣವನ್ನು ಹೊಡೆಯಲು, ಓಡಿಸಲು ಹೆದರುತ್ತಿದ್ದವರಿಗೆ ಈಗ ಮಾರಿಭಯಕ್ಕಿಂತ ತಮ್ಮ ಹೊಲಗದ್ದೆಗಳ ಬೆಳೆ ಉಳಿಸಿಕೊಳ್ಳೋದೇ ಮುಖ್ಯವಾಗಿದೆ.

...ನಿಂತೋಗಿತ್ತು. ಮುಂದೆ ಊರವರೆಲ್ಲಾ ಸೇರಿ ...ನಪ್ಪಾ ಗತಿ, ಮಾರಮ್ಮ ನಮ್ಮ ಸುಮ್ನೆ ಬುಟ್ಟಾಳ, ...ಬಾರ್‍ದ್ ಮಾಡ್ತಾಳೆ, ಆಗ್‌ಬಾರದ್ದಾಯ್ತದೆ. ಆಗ ...ರ್ಕಾರದ ನನ್ಮಕ್ಳು ಪೊಲೀಸ್ ನನ್ಮಕ್ಳು ಬಂದಾರ? ...ಕಷ್ಟಕ್ಕಾದಾರಾ?' ಅಂದವರೆ ಪರ್ಯಾಯ ...ವನ್ನು ಕಂಡುಕೊಂಡಿದ್ರು. ಅದೇನಂದ್ರೆ, ಇದ್ದವರು ...ಹೆಸರಲ್ಲಿ ತಮ್ಮ ತಮ್ಮ ಮನೆಯಲ್ಲೇ ಟಗರು ...ಯ್ತಿದ್ರು. ಇಲ್ಲದವರು ಕೋಳಿ ಬಿಟ್ಕೋತಿದ್ರು. ಇಲ್ಲದವರು ಬ್ರಾಯ್ಲರ್ ಕೋಳಿ ತರ್‌ತಿದ್ರು. ಅವರವರ ಮನೇಲೇ ಹಬ್ಬದ ದಿನ ಮಾರಮ್ಮನ ...ಳಿ ಹರಕೆ ಒಪ್ಪಿಸಿ ಅವುಗಳನ್ನು ಕೊಯ್ದು ಹಬ್ಬ ...ುತ್ತಿದ್ದರು. ಮಾರಿಗೆ ಕೋಣ ತಪ್ಪಿದ್ದರಿಂದ ನಿಜವಾಗಿ ...ಆಗಿದ್ದೆಂದರೆ ಆ ಊರಿನ ತೋಟ-ತಳವಾರರಿಗೆ. ...ಗೆ ಕೋಣವನ್ನು ಬಲಿಕೊಟ್ಟ ಮೇಲೆ ಅದು ಆ ...ರ ತೋಟಿಗಳ ಪಾಲಾಗುತ್ತಿತ್ತು.

...ಂದೆ ಮನೆಯಲ್ಲಿ ಹುಟ್ಟಿದ ಗಂಡುಕರುಗಳನ್ನು ...) ನಿಲ್ಲುವವರೆಗೆ ಸಾಕಿ, ಆನಂತರ ಕಿರುಗಾವಲು-...ನಳ್ಳಿ ಕಡೆ ಸಾಬರಿಗೆ ಮಾರಿಬಿಡುತ್ತಿದ್ದರು. ...ಗಳನ್ನು ಸಾಕುವುದು ಅವರಿಗೆ ಹೊರೆ. ಹೀಗಾಗಿ ...) ತತ್ಕಾಲಕ್ಕೆ ಅವುಗಳನ್ನು ಸಾಕುವ ಹೊಣೆಯಿಂದ ...ಕೊಳ್ಳಲು ಹಗ್ಗ ಬಿಚ್ಚಿ ಮಾರಿ ಹೆಸರಲ್ಲಿ ಹೊರಗೆ ...ಡುವುದು ಇತ್ತೀಚೆಗೆ ರೂಢಿಯಾಗಿದೆ. ಹಿಂದೆಲ್ಲಾ ...ಕೋಣಕ್ಕೆ ಯಾವುದೇ ಕಟ್ಟುಪಾಡುಗಳಿರಲಿಲ್ಲ. ...ಯಾರ ಹೊಲಗದ್ದೆ; ತೋಟತುಡಿಕೆಗಳಿಗೆ ನುಗ್ಗಿ ...ದನ್ನು ತಿಂದು ಲೂಟಿ ಮಾಡಿದರೂ ಯಾರೂ ...ಯೋದು, ಹೊಡೆಯೋದು, ಬೈಯ್ಯೋದು ...ುತ್ತಿರಲಿಲ್ಲ. ಏಕೆಂದರೆ ಮಾರಿಗೆ ಬಿಡುತ್ತಿದ್ದುದೇ ...ಕೋಣ. ಅದರ ಹೊಟ್ಟೆಗೆ ಎಷ್ಟು ಬೇಕಾದೀತು? ...ಅಲ್ಲದೆ ಮಾರಿಕೋಣವನ್ನು ಓಡಿಸಿದರೆ ಮಾರಿ ...ದಾಳೆಂಬ ಭಯ ಬೇರೆ. ಕೆಲವರಂತೂ ಅದು ...ಹೊಲಗದ್ದೆಗಳಲ್ಲಿ ಬಂದು ಮೆಯ್ದು ಹೋದರೆ ...ಬರುತ್ತದೆಂದು ಭಾವಿಸಿದವರೂ ಇದ್ದರು.

...ಗ ಪರಿಸ್ಥಿತಿ ಹಿಂದಿನಂತಿಲ್ಲ. ಊರ ತುಂಬಾ ...ಕೋಣಗಳೇ. ಕರಗಮ್ಮನ ಕೋಣವನ್ನೂ ಸೇರಿಸಿ ...ಊರಲ್ಲಿ ಬರೋಬರಿ ಇಪ್ಪತ್ತರಷ್ಟು ಮಾರಿ ...ಗಳಿವೆ. ಊರಿನಲ್ಲಿ ಹುಟ್ಟಿದ ಎಲ್ಲ ಕೋಣಗರು ... ಎಲ್ಲರೂ ಮಾರಿಗೆ ಬಿಡುವವರೆ. ಅದೊಂದೇ ...ದ್ದ ಸುಲಭದ ದಾರಿ. ಹಿಂದೆ ಪ್ರಾಣಿಬಲಿ ...ಸಿದ್ದಾಗ ಹುಟ್ಟಿದ ಕೋಣಗರುಗಳನ್ನು ಸಾಬರಿಗೆ ...ರ ಮಾಡಿಬಿಡುತ್ತಿದ್ದರು. 'ಈಗ ಸರ್ಕಾರ ...ದೋ ಜಾನುವಾರು ಹತ್ಯೆ ನಿಷೇಧ ಅಂತ ...ನು ತಂದು ಸಾಬರು ಊರುಗಳಿಗೆ ಕಾಲಿಡದ ...ಮಾಡಿದ್ದಾರೆ' ಎಂದು ಅರೆಬರೆ ಓದ್ಕೊಂಡಿದ್ದ ...ಗರು ಅವರಪ್ಪ ಅಪ್ಪದೀರ್‍ಗೆ ಹೇಳಿಯೇ ಗೊತ್ತು. ... ಈಗ ಊರ ತುಂಬಾ ಮಾರಮ್ಮನ ಹೆಸರಲ್ಲಿ ...ಕೋಣಗಳು ಬೀದಿನಾಯಿಗಳಂತೆ ಅಡ್ಡಾಡುತ್ತಿವೆ. ...ಹೊಸಕೇರಿ ಕಡೆ ಕರಗಮ್ಮನ ಹಟ್ಟಿಯಲ್ಲಿ ಹುಟ್ಟಿದ ...ಗರು. ಈಗ ಊರ ಹತ್ತಿರದ ತೋಟತುಡಿಕೆ ...ಸ್ತಾ ಅಡ್ಡಾದ್ದದ ಒಬ್ಬೆ ಹಾಕಿದ್ದಾರೆ ಜನ. ಹಿಂದೆಲ್ಲಾ

"ಅಲ್ಲಾ ಕನ್ ಕರಗವ್ವ ನಿನ್ ಕ್ವಾಣನ್ ದೆಸಿಂದ ನಾವೇನ್ ಇರ್ಬೇಕೋ ಬ್ಯಾಡ್ವೋ? ನನ್ ಕಿರಿಯೆಣ್ಣು ನೀರಾಕಂದು ಏಡ್ ತಿಂಗ್ಳಾಗದೆ. ಅದ್ಕೆ ಅದೇನೋ ಕಾಣಿ ಬಾಯ್ಕಟ್ಕೋಗಿ ಹೊಟ್ಗೆ ಇಟ್ಟೇ ಸೇರುದಿಲ್ಲ ಅಂತದೆ. ಅದ್ಕೆ ಅಂತ ಒಂದ್ ಪಾವು ಬಾಡ ತಂದು ಉಪ್ಕಂಡ ಆಕಿ ಅಟ್ಟ ಮುಂದೆ ಒಣಾಗ್ಲಿ ಅಂತ ಮೊರ್ದಲ್ಲಾಕಿ ಬಿಸ್ಲಲಿ ಮಡ್ಗಿದ್ರೆ ಅದ್ಕೂ ಬಾಯಾಕಿ ಎಲ್ಲಾನೂ ನೆಕ್ಕಂದ್ ಬಂದದಲ್ಲ ಇದ್ಕೆ ಯಾತ್ರಲ್ಲಿ ಒಡೀನೆ ಏಳು?" ಅಂದವಳೆ ಕರಗಮ್ಮನಿಗೆ ಒಂದಷ್ಟು ದೂರ್‍ದಲ್ಲಿ ನೆಲಕ್ಕೆ ಅಂಡೂರಿದಳು. ಅಂಡೂರಿದವಳೆ ಮಾತನ್ನು ಮುಂದುವರಿಸಿ "ಅಲ್ಲ ಕನ್ ಕರಗವ್ವ, ಎಮ್ಮೆ ದನ ಉಲ್ಲು-ಸೊಪ್ಪು, ಕಾಳು-ಕಡ್ಡಿ ತಿನ್ನೂದ್ ನೋಡಿವ್ನಿ. ಬಾಡು-ಬಳ್ಳೆ, ಸೀಗ್‌ಡಿ-ಕರಮೀನ್ ತಿನ್ನೂದ್ ನೋಡಿದ್ಯಾ? ನಾನೆಲ್ಲೂ ಕಾಣೆ ಕನವ್ವ. ಏನ್ ಕಲಿಗಾಲ ಅಂತೀನಿ ಮೊನ್ನೊಮ್ನೆ ಕುರುಬರ ಕೆಂಚಿ ಬಿಸಿಲಲ್ಲಾಕಿದ್ದ ಕರಮೀನನ್ನೆಲ್ಲಾ ನೆಕ್ಕಂಡು ದಿಮ್‌ರಂಗಾ ಅಂತ ನೆಟ್ಕೋಯ್ತಾಯಿದ್ದದ್ನಾ ತಿಮ್ಮೀನೇ ಕಣ್ಣಾರೆ ಕಂಡು, ಕಂಡ್ರೂ ಕಾಣ್ದಂಗೆ ಸುಮ್ನಾಗಿದ್ಲಂತೆ. ಯಾಕಂದ್ರೆ ಹಿಂದೆ ಅವಳ ಮೊಮ್ಮಗನ್ಗೆ ಗ್ವಾರ ಆಗಿದ್ದಾಗ ಮಾರಮ್ಮನ್ಗೆ ಅರಕೆ ಹೊತ್ಕಂಡು ಕಿರಗಾವಲು ಸಾಬರ್‍ಗೇಳಿ ಅದೆಲ್ಲಿಂದ್ಲೊ ಒಂದ್ ಕ್ವಾಣ್ಗರ ತರ್‍ಸಿ ಮಾರಮ್ಮಗೆ ಹೆಸರೇಳಿ ಬುಟ್ಟಿದ್ಲಂತೆ. ಅದ್ಕೇ ಅವ್ಳ್ ಮೊಮ್ಮಗ ಬದಿಕಂದಿದ್ನಂತೆ. ಅದ್ಕೇ ಮಾರಮ್ಮನ್ಗೆ ಎದರ್‍ಕಂಡು ಕ್ವಾಣಕ್ಕೆ ಹೊಡೀದೆ ಬೈಯ್ದೇ ಹಲ್ಕಚ್ಕಂಡು ಸುಮ್ನಾದ್ಲಂತೆ. ಇಲ್ದೆ ಇದ್ರೆ ಕಸೀನ್ ಮುಂಡಿ ತಕ್ಕಂದು ಕಲ್ಗಚ್ಚಲ್ ಅದ್ಕಂಡು ಸರ್‍ಯಾಗಿ ಇಕ್ಕಡಿಸ್‌ತಿದ್ದೆ ಅಂತ ತಾನೇ ಬಂದು ನನ್ನತ್ರ ಹೇಳ್ಕಂಡ್ ಹೋದ್ಲು" ಎನ್ನುತ್ತಿದ್ದಂತೆ ಕರಗಮ್ಮನಿಗೂ ಕ್ಯಾಣ ಬಂದು "ಅಲ್ಲಾ ಕನ್ ಈರಿ, ಊರಲಿರೂ ಮಾರಿಕ್ವಾಣವೆಲ್ಲಾ ನನ್ನೋವೆ ಅನ್ಕಂಡಿದ್ಯಾ. ಈಗ ನೀ ವಡ್ಕ ಬಂದ್ಕರ ನಂದಲ್ಲಾ, ಹೊಲ್ಗೇರಿ ಉರಿಯಣ್ಣನ ಮನೆದು. ಮೊದ್ಲಾಗಿದ್ರೆ ಕುಯ್ಕಂಡ್ ಪಾಲಾಕತಿದ್ರು. ಈಗ ಅದೇನೋ ಕಾನೂನ್ ಮಾಡಿದ್ದಾರಂತಲ್ಲಾ ಅದ್ಕೆ ಹೊಲ್ಗೇರಿಯವ್ರೂ ಕ್ವಾಣ್ಗರ ಉಟ್ಟಿದ್ರೆ ಮಾರಿಗೆ ಬುಟ್ಬಾರಂತೆ" ಎನ್ನುತ್ತಿದ್ದಂತೆ ಒಳಗೆ ಓದಿಕೊಳ್ಳುತ್ತಾ ಕುಳಿತಿದ್ದ ಶಂಕರನಿಗೆ ರೇಜಿಗೆ ಎನ್ನಿಸಿ ಹೊರಗೆ ಬಂದ. ಬಂದವನೇ "ಅಮ್ಮೊ ಮೊನ್ನೆದಿನ ವಾಜರ ಚಲುವರಾಜು ನಾನು ಇಬ್ರೂ ಇಸ್ಕೋಲಿಂದ ಬರ್‍ತಾ ಇದ್ವೊ. ಅವರಟ್ಟಿ ತಕ್ಕೆ ಬತ್ತಿದ್ದಂಗೆ ಅವರವ್ವ ನನ್ನೇ ನೋಡ್ಕಂಡು ನಿನ್ನ ಬಯ್ತಾ ಇದ್ಲು. ಯಾಕವ್ವಾ ಅಂತ ಚಲುವರಾಜ ಕೇಳ್ದ. ರಾತ್ರಕೆ ಎಸರ್‍ಗೇನೂ ಇಲ್ವಲ್ಲಾ ಅಂತ ವಲ್ತಕ್ಕೋಗಿ ಬೆರಕ್‌ಸೊಪ್ಪು ಕುಯ್ಕಬಂದು ಸೋಸುಕೆ ಅಂತ ಪಡಸಾಲೇಲಾಕಿ, ನೀರುಡ್ಕ್ಯ ಬರುಮ ಅಂತ ಮನೆ ಒಳಕೋಗಿ ಈಚೆಗ್ಬರುವತ್ಗೆ ಅದ್ಯಾವ್ ಮಾಯ್ದಲ್ಲೊ ಕೋಣ್ಗರ ಬಂದು ಬೆರಕ್‌ಸೊಪ್ಪೆಲ್ಲಾ ತಿನ್ಕಂದಿತ್ತಂತೆ. ಆಗ ದೊಣ್ಣೆ ತಕ್ಕಂದು ಓಡಸ್ಗಂದೋಗಿ ಬಂದವ್ಳೆ ಬೊಯ್ತಾ ಇದ್ಲು, ಅದು ಅಷ್ಟು ದೂರದಲ್ ನಿಂತಿತ್ತು, ಅದ್ಯಾಕೋ ಅನುಮಾನ ಬಂದು ಚಲುರಾಜು ಮೆಲ್ಗೆ ಅದರದಂಡ ಕೋಗಿ ನೋಡಿದ್ರೆ ಅದು ಅವರ್‍ದೆ ಮಾರಿಕ್ವಾಣ. ಅವನು ಹಿಂದಕ್ ಬಂದು ಅವರವ್ವನ್ನಾವು ಏಳ್ತಾ ಇದ್ನ, 'ಅವ್ವೊ ಅದು ನಮ್ದೆ ಮಾರಿಕ್ವಾಣ' ಅಂತ. ಅದ್ಕೆ ಅವರವ್ವ 'ಅದೇನೋ ಕಾಣೆ ಕನಪ್ಪ ಈ ಅಳಾದೋವೆಲ್ಲಾ ಒಂದೇ

ಅಂತ ಹೊಡ್ಕೊಂಡೋಗಿ ಆಡಿನಗದ್ದೆ ಮಾಳ್ದಲ್ಲಿ ಮೇಯ್ಲಿಕ್ಕೆ ಅಂತ ಬಿಟ್ಟು ಹೊಂಗೆಮರದ ನೆರಳಲ್ಲಿ ಕೂತ್ಕಂಡಿದ್ಲು. ಅದ್ಯಾವ್ ಮಾಯ್ದಲ್ಲಿ ಈ ಕೋಣ ಬಂದು ಗುಂಪು ಸೇರ್ಕೊಂಡಿತ್ತೋ ಗೊತ್ತಿಲ್ಲ. ಅವುಗಳಲ್ಲಿ ಒಂದು ಕಡಸು ಬೆದೆಗೆ ಬಂದಿತ್ತು ಅಂತ ಕಾಣ್ತದೆ. ಆ ಕಡಸನ್ನ ಈ ಕೋಣ ಅಟ್ಟಾಡಿಸಿಕೊಂಡು ಅದರ ಮೇಲೆ ಹಾರ್‍ಲಿಕ್ಕೆ ಹೋಗಿದೆ. ಆಗ ಕಡಸು ಅದರಿಂದ ತಪ್ಪಿಸ್ಕೊಳಿಕ್ಕೆ ಹೋಗಿ ಮುಂದಿನ ಎರಡು ಕಾಲುಗಳು ಮೋಳೆಯಲ್ಲಿ ಸಿಕ್ಕಿಕೊಂಡವು. ಇದು ಹಿಂದಿನಿಂದ ಆ ಕಡಸಿನ ಮೇಲೆ ಹಾರಿದಾಗ ಕಡಸಿನ ಹಿಂದಿನ ಒಂದು ಕಾಲು ಮುರಿದು ಹೋಗಿ ಕರಗಮ್ಮ ಆರುತಿಂಗಳ ಕಾಲ ಅದನ್ನು ಮನೆಯಲ್ಲೇ ಕಟ್ಟಿಹಾಕಿ ಆರೈಕೆ ಮಾಡಿದ್ದಳು.

ದುಗ್ಗನಹಳ್ಳಿಯ ಮದ್ದಾರಿ ಸುಬ್ಬ 2-3 ಕೋಣಗಳನ್ನು ಸಾಕಿಕೊಂಡಿದ್ದ. ಹಳ್ಳಿಗಳಿಗೆ ಹೋಗಿ ಒಳ್ಳೆಯ ಜಾತಿ ಕೋಣಗರುಗಳನ್ನು ಆಯ್ಕೆ ಮಾಡಿ ಹೆಚ್ಚು ಹಣಕೊಟ್ಟು ತಂದು ಚೆನ್ನಾಗಿ ಸಾಕಿ ಕೋಣನ ಬಿಡಿಸುವುದಕ್ಕೆ ಅವುಗಳನ್ನು ಬಳಸುತ್ತಿದ್ದ. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಈಗಲೂ ಬೆದೆಗೆ ಬಂದ ಎಮ್ಮೆಗಳನ್ನು ಹೊಡೆದುಕೊಂಡು ಹೋಗಿ ಮದ್ದಾರಿ ಸುಬ್ಬನ ಕೋಣಗಳಿಂದ ಕೋಣನನ್ನು ಬಿಡಿಸಿಕೊಂಡು ಬರುವುದೇ ರೂಢಿ. ಈಗ ಹಳ್ಳಿಗಳಿಗೂ ಪಶು ಆಸ್ಪತ್ರೆಗಳು ಬಂದಿದ್ದು ಅಲ್ಲಿಯೇ ಕೃತಕ ಗರ್ಭಧಾರಣೆಯನ್ನು ಮಾಡಿದರೂ ಮಾದಳ್ಳಿಯ ಜನರಿಗೆ ಈ ಕೃತಕ ಗರ್ಭಧಾರಣೆ ಬಗೆಗೆ ವಿಶ್ವಾಸವಿಲ್ಲ. ಅದು ಅಸಹಜ ಎಂದೋ ಅಥವಾ ಹುಟ್ಟುವ ಕರುಗಳು ಇತ್ತ ನಾಟಿಕರುಗಳೂ ಅಲ್ಲದೆ ಅತ್ತ ಹೈಬ್ರಿಡ್ ತಳಿಗಳೂ ಅಲ್ಲದವು ಹುಟ್ಟುತ್ತವೆ ಎಂದೋ ಅವರು ಅಲ್ಲಿ ಹೋಗದೆ ದುಗ್ಗನಹಳ್ಳಿಗೆ ಎಮ್ಮೆಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. ಇದಕ್ಕೆ ಅಲ್ಲಿಗೆ ಒಯ್ದರೆ ಹೆಣ್ಣುಕರುಗಳೇ ಹುಟ್ಟುತ್ತವೆ ಎಂಬ ಮದ್ದಾರಿ ಸುಬ್ಬನೇ ಹಬ್ಬಿಸಿದ್ದ ವ್ಯಾಪಾರಿ ಬುದ್ಧಿಯ ಪ್ರಚಾರವೂ ಕಾರಣವಾದಂತಿತ್ತು. ಇದು ನೆನಪಾದ ಕರಗಮ್ಮ ತನ್ನ ಮಾರಿಕ್ವಾಣವನ್ನು ಮದ್ದಾರಿ ಸುಬ್ಬನಿಗೆ ಪುಕಸಟ್ಟೆಯಾಗಿ ಸಾಗಿಹಾಕಲು ನೋಡಿದಳು. ಆದರೆ ಮಾರಿಗೆ ಹೆದರಿದ ಮದ್ದಾರಿ ಸುಬ್ಬ "ನೀನು ಪುಕಸಟ್ಟೆ ಕೊಟ್ಟರೂ ನನಗದು ಬ್ಯಾಡ, ಆಮ್ಯಾಲೆ ಮಾರವ್ವ ನನ್ನ ಸುಮ್ನೆ ಬುಟ್ಟಾಳ ಹೋಗು" ಅಂದುಬಿಟ್ಟ. ಬೇರೆ ದಾರಿ ಕಾಣದೆ ಕರಗಮ್ಮ ಇದು ಊರಿನ ಎಮ್ಮೆಗಳ ಮೇಲೆಲ್ಲಾ ಹಾರುವುದನ್ನು, ಜನರು ತನಗೆ ಬೈಯುವುದನ್ನು ನೋಡಿ ಚಿಂತೆಗೀಡಾದಳು.

ಅಂದು ರಾತ್ರಿ ಬಹಳ ಹೊತ್ತಿನವರೆಗೆ ಕರಗಮ್ಮನಿಗೆ ನಿದ್ದೆ ಹತ್ತಲಿಲ್ಲ. "ಈಗ ಈ ಹಾಳು ಮಾರಿಕ್ವಾಣಗಳ ದೆಸಿಂದ ಊರಲ್ಲಿ ನೆಮ್ದಿ ಇಲ್ದಂಗಾಗದೆ. ಯಾವ್ ಕ್ವಾಣ ಯಾರ್‍ದು ಅನ್ನೋದೇ ಗೊತ್ತಾಗ್ದೆ ಅವ್‌ರ್‍ದು ಅಂತ ಇವ್ರು, ಇವ್‌ರ್‍ದು ಅಂತ ಅವ್ರು ಕಾಲ್ ಕೆರ್ಕೊಂಡು ಜಗಳಕ್ ನಿಲ್ಲೋಂಗಾಗದೆ. ನಾಳೆ ಅದು ಅಟ್ಟಿಗ್ ಬಂದಾಗ ಹಿಡ್ದು ಕಟ್ಟಾಕಿ, ಕೊತ್ತಿಚೌಡನ್ ಕರ್‍ಸಿ ಇಡ ವಡ್ಸಿ, ತಿಕದ್‌ಮ್ಯಾಲೆ ಎರಡ್ ಬರೆ ಹಾಕುಸ್‌ಬೇಕು" ಅಂದುಕೊಳ್ಳುತ್ತಿದ್ದಂತ ನಿರಾಳ ಎನಿಸಿ ನಿದ್ದೆಗೆ ಜಾರಿದಳು.

✿

## ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

# ಅಸಾಧಾರಣ ಸಂವೇದನೆಗಳ ಕಾವ್ಯಾನುಸಂಧಾನ

ಇಸವಿ 2004ರಲ್ಲಿ ಕವಿ ವೆಂಕಟರಮಣಗೌಡರ ಸಂಪಾದಕತ್ವದಲ್ಲಿ ಕೆಲಕಾಲ ಪ್ರಕಟಗೊಂಡು ಸ್ಥಗಿತಗೊಂಡ 'ಹಂಗಾಮ' ಎಂಬ ಪಾಕ್ಷಿಕ ಪತ್ರಿಕೆಯಲ್ಲಿ ಅವೆರಡು ಪದ್ಯಗಳನ್ನು ಓದಿದ್ದೆ. 'ನಡೆಯುತ್ತಲೇ ನೆನಪು, ನೆನಪಿನಲ್ಲೇ ನಡಿಗೆ...' ಮತ್ತು 'ನಿಯತ್ತು' ಎಂಬ ಲಲಿತಾ ಸಿದ್ಧಬಸವಯ್ಯನವರ ಎರಡು ಪದ್ಯಗಳನ್ನು ಓದಿ ಬೆರಗಾಗಿದ್ದೆ.

ಅಗಲಗಲ ಇಲ್ಲಿಗೇ ಬರಬ್ಯಾಡ
ವೊಟ್ಟೆಪಾಡು, ನಂದೂ ಮಗಿಂದೂ ನಡೀಬೇಕಲ್ಲವಾ
ಯಾಕ್ ಸಮ್ನಾದೆ, ಪುಗಸಟ್ಟೆಗೆ ಮನಸೊಪ್ಪುತಾ ಇಲ್ಲವಾ
ನಿಯತ್ತುಗಾರ, ಒಗ್ಗಿ ಮುಂದಿನ್ಸಾರಿ ಮಗೀಗೊಂದು ಬೊಂಬೆ ತಗಂಬಾ (ನಿಯತ್ತು)

ಮೊದಲ ಸಿರಿ, ಬಿಡಿ ಹರಳು ಕವನ ಸಂಕಲನದ ನಂತರ ಪ್ರಕಟಗೊಂಡ ಇಹದ ಸ್ವರ, ಕೆಬ್ಬೆ ನೆಲ ಮತ್ತು ದಾರಿನೆಂಟ ಸಂಕಲನಗಳು ಲಲಿತಾ ಸಿದ್ಧಬಸವಯ್ಯ ಅವರನ್ನು ಕನ್ನಡದ ಶಕ್ತಿಶಾಲಿ ಕವಿಯನ್ನಾಗಿಸಿವೆ. ತೀರಾ ಪೇಲವ ಮತ್ತು ಕ್ಲೀಷೆ ಅನ್ನಿಸುವ ಪ್ರತಿಮೆಗಳಲ್ಲಿಯೇ ಉಸಿರಾಡುತ್ತಿರುವ ಕನ್ನಡದ ಅನೇಕ ಕವಿಗಳಿಗೆ ಸಿಗದ ಸವಲತ್ತೊಂದು ಲಲಿತಾರಿಗೆ ಹೇಗೋ ಏನೋ ದಕ್ಕಿಬಿಟ್ಟಿದೆ. ಕಾಣುವ ಅದೃಷ್ಟ



ಮತ್ತು ಹೊಸ ಪ್ರತಿಮೆಗಳನ್ನು ಸೃಷ್ಟಿಸುತ್ತಲೇ ಭಾಷೆಯ ಮೇಲಿನ ಹಿಡಿತ ಸಾಧಿಸಿರುವುದು ಲಲಿತಾರ ಪದ್ಯಗಳ ನಿಜವಾದ ಶಕ್ತಿ. ಲಲಿತಾರ ಕಾವ್ಯದ ವಸ್ತು, ಜೀವ, ರೂಪಕ, ಪ್ರತಿಮೆಗಳೆಲ್ಲವೂ ಜನಪದರ ಅಂತರಂಗದ ಮೇಳದಂತೆ ಕಾಣಿಸುತ್ತವೆ. ಇದಕ್ಕೆ ಅವರ 'ಅಕ್ಕನ ಪಟ', 'ರಾಣಿಮೋಡಿ', 'ಧಗುಧಗುಲ ಧಗುಧಗುಲ ಧಫ್', 'ರಥ ಕದಲಲಿ ರಥಬೀದಿಗೆ', 'ಹೋಗು ಬದುಕಿಕೋ', 'ದಾರಿನೆಂಟ' ಮೊದಲಾದ ಪದ್ಯಗಳನ್ನು ಉದಾಹರಣೆಯಾಗಿ ಕೊಡಬಹುದು. ಈ ಬಗೆಯ ಕಾವ್ಯ ಕಟ್ಟುವ ಸೂಕ್ಷ್ಮಗಳು ಕಾವ್ಯರಚನೆಯಲ್ಲಿ ತೊಡಗಿಕೊಂಡಿರುವ ವರ್ತಮಾನದ ಕನ್ನಡದ ಅನೇಕ ಕವಿಗಳಿಗೆ ಒಲಿದಿಲ್ಲವೆಂದೇ ಹೇಳಬೇಕು.

ಮಳೆಯನ್ನು ಪ್ರೀತಿಸದ ಒಂದು ನರಹುಳ ತೋರಿಸು
ಪಣಕ್ಕೆ ಸಾವಿರ ಹೊನ್ನು, ಸುಳ್ಳಾದರೆ ಶಿರ ಸಹಸ್ರ ಹೋಳು
ಇಲ್ಲಿಟ್ಟು ಪಡಿತರ, ನೆತ್ತಿಮೇಲಿಟ್ಟ ಕಡುಜಾಣ ಬೀಗದೆಸಳನ್ನು
ಇಡಲಿ ಬಿಡು, ಮೀರಿದೊಂದು ಕಾರಣವಿದೆ ಪ್ರೀತಿಸಲು ಮಳೆಯನ್ನು (ರಂಗ ಸಜ್ಜಿಕೆ)
ಈ ಹುಡುಗಿಯುಟ್ಟ ಪಾವುಡದರುಗು ಮುರಿದುದ ಮಡಿವಾಳನೂ ಕಾಣ
ತೊಟ್ಟ ಹೂವಿನ ದಂಡೆ ಮಾಸಿ ಕಂಗೆಟ್ಟ ಭಂಗವನು ಮಾಲೆಗಾರನೂ ಕಾಣ
ನೆಟ್ಟ ಬೈತಲೆಬೊಟ್ಟು ಸೊಟ್ಟಾದ ಚಣಗಳನು ಭಿತ್ತಿದರ್ಪಣಂಗಳು ಕಾಣ
ತಿದ್ದಿಟ್ಟ ಚಂದ್ರಕಾಂತಿಯ ಬೊಂಬೆ ದಿಟವಿದು ಬಯಲಸಿದ್ಧರ ಮೇಲಾಣೆ ಕಾಣ (ಧಗುಧಗುಲ ಧಗುಧಗುಲ ಧಫ್)

'ಅನುಭವ ಹಾಗೂ ನೆನಪುಗಳೊಂದಿಗಿನ ಶ್ರೇಷ್ಠ ಕಾವ್ಯಾನುಸಂಧಾನಕ್ಕೆ ಇಲ್ಲಿನ ಪದಪದವೂ ಹುರಾವೆಯಾಗಲು ತುದಿಗಾಲಲ್ಲಿ ನಿಲ್ಲುತ್ತವೆ. ಭಾಷೆಯ ಅತಿ ಸಾಧಾರಣ ಪದಗಳಿಗೆ ಅಸಾಧಾರಣ ಸಂವೇದನೆಗಳನ್ನು ಒಯ್ಯುವ ಗುಣ ಲಲಿತಾರ ಕವಿತೆಗಳ ಜಾಯಮಾನದಂತಿದೆ' ಎಂದು ಲಲಿತಾರ ಕಾವ್ಯವನ್ನು ಬಣ್ಣಿಸಿರುವ ಲಕ್ಷ್ಮೀಪತಿ ಕೋಲಾರ ಅವರ ಮಾತಿನಲ್ಲಿ ಯಾವುದೇ ಉತ್ಪ್ರೇಕ್ಷೆ ಇರಲಾರದು ಎಂದು ತಿಳಿಯುವೆ.

**ದಾರಿನೆಂಟ: ಲಲಿತಾ ಸಿದ್ಧಬಸವಯ್ಯ**

ಪ್ರಕಾಶಕರು: ಚಿನ್ಮಯ ಪ್ರಕಾಶನ, 'ಪುಸ್ತಕ' ಗುರುಸನ್ನಿಧಿಯ ಮೊದಲ ಮಹಡಿ, 2ನೇ ತಿರುವು, ಅಶೋಕನಗರ, ತುಮಕೂರು-572 102
ಪುಟಗಳು: 100, ಬೆಲೆ: ರೂ.50, ಮುದ್ರಣ: 2009

# ಅಂತರ್ಜಾತಿ ಮದುವೆ ಮತ್ತು ದಲಿತ ಮಹಿಳೆ ಪ್ರತಿಕ್ರಿಯೆ

ಡಾ. ಎಚ್.ಎಸ್. ಅನುಪಮಾ ಅವರ 'ಅಂತರ್ಜಾತಿ ವಿವಾಹ ಮತ್ತು ಜಾತಿವಿನಾಶ: ಒಂದು ಅನಿಸಿಕೆ' ಎಂಬ ಲೇಖನವು (ಜುಲೈ೧೩, ೨೦೧೧ರ ಸಂಚಿಕೆ) ಮುಖ್ಯವಾಗಿ ಎರಡು ಅಂಶಗಳನ್ನು ಚರ್ಚೆಗೆ ಒಡ್ಡುತ್ತದೆ. ಮೊದಲನೆಯದು ಅಂತರ್ಜಾತಿ ವಿವಾಹಗಳಿಂದ ಜಾತಿವಿನಾಶ ಸಾಧ್ಯವೇ ಎಂಬ ಸಂದೇಹವಾದರೆ, ಎರಡನೆಯದು ಕೆಳಜಾತಿಗಳ ಹುಡುಗರು ಮೇಲ್ಜಾತಿ ಹುಡುಗಿಯರನ್ನು ಮದುವೆಯಾಗುತ್ತಿರುವಷ್ಟು ಮೇಲ್ಜಾತಿ ಹುಡುಗರು ಕೆಳಜಾತಿ ಹುಡುಗಿಯರನ್ನು ಮದುವೆಯಾಗದೇ ಇರುವುದು. ಈ ಎರಡು ಸಂದೇಹಗಳನ್ನು ಎತ್ತಿ "ಜಾತಿಯ ಮುಖ್ಯ ಲಕ್ಷಣವೇ ಒಳವಿವಾಹ. ಜಾತಿ ನಿಷ್ಠೆ ಎಂದರೆ ಜಾತಿಯೊಳಗೇ ಮದುವೆಯಾಗುವುದು. ಶಿಕ್ಷಿತರಲ್ಲಿ ಅಂತರ್ಜಾತಿ ವಿವಾಹ ಕಡಿಮೆ ಇರುವುದಕ್ಕೂ ಅಂತರ್ಜಾತಿ ವಿವಾಹವಾದವರು ನಂತರ ಜಾತಿ ಬಿಡದೇ ಇರುವುದಕ್ಕೂ ಇವೆಲ್ಲ ಕಾರಣವಾಗಿದೆ. ಅಲ್ಲದೇ ಜಾತಿ ನೋಡದೆ ಪ್ರೇಮ ಸಂಭವಿಸಿದ್ದರೂ ಜಾತಿ ವಿನಾಶಕ್ಕೆಂದು ಪ್ರೇಮಿಗಳು ಅಂತರ್ಜಾತಿಯ ವಿವಾಹವಾಗಿರುವುದಿಲ್ಲ, ಈ ಕಾರಣಕ್ಕೆ ಮದುವೆಯಾದ ನಂತರ ಯಾರಾದರೊಬ್ಬರ, ಅದರಲ್ಲೂ ಹೆಚ್ಚಾಗಿ ಗಂಡನ ಜಾತಿಯನ್ನೇ ಅಪ್ಪಿಕೊಳ್ಳುತ್ತಾರೆ. ಹಾಗಿರುವಾಗ ಜಾತಿ ವಿನಾಶ ಹೇಗಾದೀತು?" ಎಂಬ ಸರಳ ತೀರ್ಮಾನಕ್ಕೆ ಬರುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ 'ಜಾತಿ' ಅನ್ನುವುದು ಗಟ್ಟಿಗೊಳ್ಳುವುದೇ 'ವಿವಾಹ' ಅನ್ನುವ ಸಂಸ್ಥೆಯಲ್ಲಿ. ಅಂದರೆ ಜಾತಿ ಪದ್ಧತಿಯ ಮೂಲ ಬೇರುಗಳಿರುವುದೇ ಅಲ್ಲಿ. ಡಾ. ಅನುಪಮಾರೇ ಹೇಳುವಂತೆ ಹೆಚ್ಚಾಗಿ ಕೆಳಜಾತಿಯ ಹುಡುಗರು ಮೇಲ್ಜಾತಿಯ ಹುಡುಗಿಯರನ್ನು ಮದುವೆ ಆಗಿರುತ್ತಾರಾದ್ದರಿಂದ ಮೇಲ್ಜಾತಿಯಲ್ಲಿ ಕೆಳಜಾತಿಗಳಿಗೆ ಸೇರಿಸುವಿಕೆ/ಕೊಡುವಿಕೆಗೆ ಅವಕಾಶವಿಲ್ಲ, ಮೇಲ್ನೋಟಕ್ಕೆ ಸಂವಿಧಾನ ಅಸ್ತಿತ್ವದಲ್ಲಿದ್ದರೂ ಜಾತಿಯ ಹೆಸರಿನಲ್ಲಿ ಶ್ರೇಷ್ಠತೆಯನ್ನು ಪಡೆದು ಧನ್ಯರಾದ ಮೇಲ್ಜಾತಿಯ ಜನರು ತಮ್ಮ ಹೃದಯದಲ್ಲಿಟ್ಟು ಕಾಪಾಡುತ್ತಿರುವುದು 'ಮನುಸ್ಮೃತಿ'ಯನ್ನು, ಇಲ್ಲಿ ಮತ್ತೊಂದು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಜಾತಿಯಲ್ಲಿ ಉಚ್ಚಳೆಂದು ಭಾವಿಸಿದ ಹೆಣ್ಣು ಕೆಳಜಾತಿಯವನನ್ನು ಮದುವೆಯಾದ ತಕ್ಷಣ ಅವಳನ್ನು ಜಾತಿಯಿಂದ ಕಿತ್ತೊಗೆದು ತಮ್ಮ ಸಮಾಜದಿಂದ ಬಹಿಷ್ಕರಿಸುತ್ತದೆ. ಜಾತಿಯ ಹೆಸರಿನಲ್ಲಿ ಹೆತ್ತ ಮಗಳನ್ನೇ ಬಹಿಷ್ಕರಿಸಿದ ಜನ ಅವಳ ಮಕ್ಕಳನೆಂತು ಸ್ವೀಕರಿಸಿಯಾರು? ಹೀಗೆ ಜಾತಿಯಿಂದ ಬಹಿಷ್ಕೃತಳಾದ ತಾಯಿ ಮಕ್ಕಳು ಸಹಜವಾಗಿ ತಂದೆಯ ಜಾತಿಯನ್ನೇ ಪಡೆದುಕೊಳ್ಳುತ್ತಾರೆ. ಆದರೆ ಈ ನಿಯಮ ಕೆಳಜಾತಿಯ ಹೆಣ್ಣು ಪಡೆದ ಮಗುವಿನ ವಿಷಯಕ್ಕೆ ಬಂದಾಗ ಬದಲಾಗುತ್ತದೆ.



"ಮನುವು ಮಗುವಿನ ವರ್ಣದ ನಿಯಮವನ್ನು ತಂದೆಯ ವರ್ಣಕ್ಕನುಸಾರವಾಗಿ ಪಿತೃವರ್ಣದಿಂದ ತಾಯಿಯ ವರ್ಣಕ್ಕನುಸಾರವಾಗಿ ಮಾತೃವರ್ಣಕ್ಕೆ ಬದಲಿಸಿದ್ದಾನೆ." (ಡಾ. ಬಾಬಾಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು: ಸಂಪುಟ 4, ಪುಟ 275) ಮನುವಿನ ಈ ನಿಯಮ ಕೆಳಜಾತಿಯ ಮಹಿಳೆಯರಿಗೆ ಹುಟ್ಟಿದ ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ ಎಂಬುದನ್ನು ಮಾತ್ರ ಮರೆಯಬಾರದು.

ಹುಟ್ಟಿನಿಂದಲೇ ಅಂಟುವ ಜಾತಿ ಮೇಲ್ಜಾತಿ ಮಹಿಳೆ ಕೆಳಜಾತಿಯ ಪುರುಷನನ್ನು ಮದುವೆ ಆದಾಗಲೂ ಅವರ ಮಗು ಕೆಳಜಾತಿಯನ್ನೇ ಪಡೆಯುತ್ತದೆ ಹಾಗೂ ಕೆಳಜಾತಿಯ ಮಹಿಳೆ ಮೇಲ್ಜಾತಿಯ ಪುರುಷನನ್ನು ಮದುವೆ ಆದಾಗಲೂ ಅವರ ಮಗು ಕೆಳಜಾತಿಯನ್ನೇ ಪಡೆಯುತ್ತದೆ. ಇದೊಂದು ಜಾತಿವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವ ವ್ಯವಸ್ಥಿತ ಹುನ್ನಾರ. ಅಂದರೆ ಈ ಜಾತಿ ಎಂಬುದು ಮಹಿಳೆಯನ್ನಾಧರಿಸಿ ರೂಪುಗೊಂಡದ್ದಲ್ಲ.

ಆದರೆ ನನಗೆ ಆಶ್ಚರ್ಯ ಅನಿಸಿದ್ದೇನೆಂದರೆ ಡಾ.ಅನುಪಮಾ ಅವರು ಮೇಲ್ಜಾತಿ ಮಹಿಳೆ ಸ್ವತಂತ್ರ ಕ್ರಾಂತಿಕಾರಿ ನಿಲುವು ತಳೆಯುತ್ತಾಳೆನ್ನುವುದು ಮತ್ತು ಹೆಣ್ತನದ ನಿಷೇಧಗಳನ್ನು ದಾಟಿ, ಜಾತಿಕಟ್ಟಳೆಗಳನ್ನು ಮುರಿದು ಇಬ್ಬಗೆಯ ಬಿಡುಗಡೆ ಹೊಂದುತ್ತಾಳೆನ್ನುವುದು. ಇಲ್ಲಿ ಅವಳ ಸ್ವತಂತ್ರ ಕ್ರಾಂತಿಕಾರಕ ನಿಲುವೆಂಬುದು ತಾನು ಒಪ್ಪಿಕೊಂಡು ಬಂದಿರುವ ಒಂದು ಸಮುದಾಯವನ್ನಾದರೂ ಅಪ್ಪಿಕೊಳ್ಳುವ ನಿಲುವಾಗದಿರುವುದು. ಕೆಳಜಾತಿ ಸಮುದಾಯಗಳಲ್ಲಿ 'ಸೇರಿಕೆಗೆ' ಅವಕಾಶವಿದೆ. ಅವಳ ಶ್ರೇಷ್ಠತೆಯೊಂದಿಗೆ ಅವಳನ್ನೂ ಅಪ್ಪಿಕೊಳ್ಳಲಾಗುತ್ತದೆ. ಆದರೆ ಅವಳ ಸ್ವತಂತ್ರಕ್ರಾಂತಿಕಾರಕ ನಿಲುವು ಈ ಕೆಳಜಾತಿ ಸಮುದಾಯವನ್ನು ಅಪ್ಪಿಕೊಂಡದ್ದು ತೀರಾ ಕಡಿಮೆ. ತನ್ನ ಗಂಡ-ಮಕ್ಕಳು ಎಂಬ ಅಲ್ಪಸ್ತರದಲ್ಲೇ ತೃಪ್ತಿಪಟ್ಟು ಒಂದು ತರಹದ ಶ್ರೇಷ್ಠತೆಯಲ್ಲೇ ಅಸ್ಪೃಶ್ಯರಲ್ಲೇ ಮತ್ತೊಂದು ಮೇಲ್ವರ್ಗವಾಗಿ ರೂಪಾಂತರಪಡುತ್ತಾರೆ. ಡಾ. ಅನುಪಮಾ ಅವರೇ ಹೇಳುವಂತೆ ಹೆಚ್ಚಾಗಿ 70-80ರ ದಶಕದಲ್ಲಿ ಅಂತರ್ಜಾತಿ ವಿವಾಹವಾದ (ಕೆಳಜಾತಿ ಪುರುಷರ) ಕುಟುಂಬಗಳನ್ನೇ ಈ ದಿಶೆಯಲ್ಲಿ ಸಮೀಕ್ಷೆಗೆ ಒಳಪಡಿಸಬಹುದು. ವ್ಯಕ್ತಿನೆಲೆಯಲ್ಲಿ ನಿಷೇಧಗಳನ್ನು ದಾಟಿದ ಪ್ರತಿಭಟನೆಗಿಳಿದ ಮೇಲ್ಜಾತಿಯ ಮಹಿಳೆ ತನ್ನ ಈ ಬದ್ಧತೆಯನ್ನು ಸಾಮಾಜಿಕ ಉಪಯುಕ್ತತೆಯಲ್ಲಿ ಮೆರೆದರೆ ಒಂದು ಸಮುದಾಯದ ಚಿತ್ರಣವನ್ನೇ ಬದಲಿಸಬಹುದಾಗಿತ್ತು.

"ಸಾಮಾಜಿಕ ವ್ಯವಸ್ಥೆಯ ಅರಿವುಂಟಾದ ಮೇಲ್ಜಾತಿ ಹುಡುಗಿಗೆ ಕೆಳಜಾತಿಗಳ ಮೇಲೆ ಮರುಕ ತುಂಬಿದ ಪ್ರೀತಿ ಹುಟ್ಟುತ್ತದೆ. ಕೆಳಜಾತಿ ಗಂಡಿನ ಮೇಲೆ ಇದು ಪ್ರೀತಿಯ ರೂಪ ತಾಳುವ ಸಾಧ್ಯತೆಯಿದೆ" ಈ ಮಾತು ಡಾ. ಅನುಪಮಾ ಅವರು ತುಂಬ ಹಗುರವಾದ ಪ್ರೀತಿಯ ವ್ಯಾಖ್ಯಾನ ಮಾಡಿದಂತೆ ಅನ್ನಿಸುತ್ತದೆ. ಒಬ್ಬ ಸಮಾಜಶಾಸ್ತ್ರಜ್ಞರ ಪ್ರಜ್ಞೆ ಇದಲ್ಲ. 'ಮರುಕ ತುಂಬಿದ ಪ್ರೀತಿ' ಎಂಬುದು ಕೇವಲ ಅನುಕಂಪ ಮಾತ್ರವಾಗಬಹುದು. ಅನುಕಂಪವೇ ಪ್ರೀತಿ-ಪ್ರೇಮವಾಗಿ ರೂಪತಾಳುವುದಾದರೆ ಅದು ತನ್ನ ನೈಜ ಕಾಳಜಿಯನ್ನು ತೋರಬೇಕಿತ್ತಲ್ಲವೆ? ಮೇಲ್ಜಾತಿಯ ಬಹುಪಾಲು ಹೆಣ್ಣುಮಕ್ಕಳೆಲ್ಲ ಮದುವೆ ಆಗಿರುವುದು ಶಿಕ್ಷಿತರಾಗಿ (ಉನ್ನತ ಶಿಕ್ಷಣ ಪಡೆದು ನೌಕರಿ ಪಡೆದು ಒಳ್ಳೊಳ್ಳೆಯ ಉನ್ನತ ಹುದ್ದೆಯಲ್ಲಿರುವವರನ್ನು),ಆರ್ಥಿಕವಾಗಿ ಸಬಲರಾಗಿರುವವರನ್ನು. ಅಂದರೆ ಸುರಕ್ಷಿತ (ಸೇಫ್ಟಿಜೋನ್) ವಲಯದಲ್ಲಿರುವವರನ್ನು. ಕೆಳಜಾತಿ ಪುರುಷರಲ್ಲೇ ಅವರಿಗಿಂತಲೂ ನಿಕೃಷ್ಟ ಸ್ಥಿತಿಯಲ್ಲಿರುವ, ತುತ್ತು ಅನ್ನಕ್ಕೂ ಗತಿ ಇಲ್ಲದ, ಮೈಮುಚ್ಚಲು ಬಟ್ಟೆಯೂ ಇಲ್ಲದ ಪುರುಷರ ಮೇಲೆ ಇನ್ನೂ ಮರುಕ-ಪ್ರೀತಿ ಉಕ್ಕಿ ಹರಿಯಬೇಕಾಗಿತ್ತಲ್ಲವೆ? ಸಾಮಾಜಿಕ ಬದಲಾವಣೆ ಅನ್ನುವುದು ಅತ್ಯಂತ ಕೆಳಸ್ತರದಿಂದ ಪ್ರಾರಂಭವಾಗಬೇಕಲ್ಲವೇ? ಅಷ್ಟೊಂದು ಪ್ರಜ್ಞಾವಂತಳಾದ ಮೇಲ್ಜಾತಿಯ ಸುಶಿಕ್ಷಿತ ಮಹಿಳೆಗೆ ತನ್ನ ಬಿಡುಗಡೆಯೊಂದಿಗೆ ಇತರರ ಬಿಡುಗಡೆಯೂ ಅವಶ್ಯವೆನಿಸಲಿಲ್ಲವೇಕೆ? ಡಾ. ಅನುಪಮಾ ಅವರೇ ಮೊದಲಿಗೆ ಹೇಳಿದಂತೆ- "ಜಾತಿ ನೋಡದೆ ಪ್ರೇಮಸಂಭವಿಸಿದ್ದರೂ ಜಾತಿವಿನಾಶಕ್ಕೆಂದು ಪ್ರೇಮಿಗಳು ಅಂತರ್ಜಾತಿ ವಿವಾಹವಾಗಿರುವುದಿಲ್ಲ." ಹಾಗಾದರೆ ಮರುಕ ತುಂಬಿದ ಪ್ರೀತಿಯನ್ನು ಏನೆಂದು ವ್ಯಾಖ್ಯಾನಿಸುವುದು.

ಡಾ. ಅನುಪಮಾರವರು ಕೆಳಜಾತಿ ಮಹಿಳೆ ಮೇಲ್ಜಾತಿ ಗಂಡನ್ನು ಮದುವೆ ಆಗುವ ವಿಷಯದಲ್ಲಿ ತುಂಬಾ ದ್ವಂದ್ವಾತ್ಮಕ ನಿಲುವನ್ನು ತಾಳುತ್ತಾರೆ. ಧರ್ಮ ಮತ್ತು ದೇವರ ಹೆಸರಿನ ಕಟ್ಟಳೆ ಗಳು ಯಾವ ಹೆಣ್ಣನ್ನೂ ಬಿಟ್ಟಿಲ್ಲ. ಮೇಲ್ಜಾತಿ ಹೆಣ್ಣನ್ನೇ ಕುರಿತಾದ 'ಗ್ರಾಮ ದೇವತೆ' (ಮಾರಮ್ಮ) ಯಂತಹ ಜಾನಪದ ಕಥೆಗಳು ಅನುಪಮಾರ ಗಮನಕ್ಕೆ ಬಂದಂತಿಲ್ಲ. ಇಲ್ಲಿ ಕೆಳಜಾತಿ ಹೆಣ್ಣಿನ ನಿಜ ಸಾಮರ್ಥ್ಯ ಅಂದರೇನು? ಇಲ್ಲೂ ಅಡ್ಡ ಬರುವುದು 'ಜಾತಿ' ಎಂಬುದನ್ನು ಏಕೆ ಮರೆಮಾಚುತ್ತಾರೆ. ಮೇಲ್ಜಾತಿಗಳಲ್ಲಿ ಕೀಜಾತಿಗೆ "ಸೇರಿಸುವಿಕೆಗೆ" ಅವಕಾಶವಿಲ್ಲದಂತೆ ಹಾಗೆ ಮದುವೆಯಾಗಿ ಬಂದ ಕೆಳಜಾತಿ ಹೆಣ್ಣನ್ನು ತಮ್ಮ ಮನೆಗಳಲ್ಲಿ ಸೇರಿಸಿಕೊಳ್ಳುವುದಿಲ್ಲ. ಕೆಳಜಾತಿಯ ಹೆಣ್ಣನ್ನು ಮದುವೆ ಆಗಿ ತನ್ನ ಮನೆ ತೊರೆದ ಗಂಡು ಕೆಲದಿನ/ವರ್ಷಗಳಾದ ಮೇಲೆ ಆ ಹೆಣ್ಣನ್ನು (ಹೆಂಡತಿಯನ್ನು) ಬಿಟ್ಟು ಬಂದರೆ ಜಾತಿ ಮತ್ತೆ ಅವನನ್ನು ಅಪ್ಪಿಕೊಳ್ಳುತ್ತದೆ. ಆದರೆ ಹೆಣ್ಣು... ಅವಳಿಗೆ ಆರ್ಥಿಕ ಭದ್ರತೆ ಇಲ್ಲದಿದ್ದರೆ ಸಾಮಾಜಿಕ ಭದ್ರ ತೆಯೂ ಸಿಗಲಾರದು. ಕೆಳಜಾತಿಯ ಗಂಡು/ಹೆಣ್ಣು ಮೇಲ್ಜಾತಿಯ ಹೆಣ್ಣು/ಗಂಡನ್ನು ಮದುವೆ ಆಗುವುದು ಮಾತ್ರ ಮೇಲ್ಚಲನೆಯೆ? ಹಾಗಾದರೆ ಕೆಳಜಾತಿ ಹೆಣ್ಣು ಮಕ್ಕಳ ಮೇಲ್ಚಲನೆ ಎಂಬುದು ಒಂದು ಕಠಿಣ ಸವಾಲು. ಮೇಲ್ಜಾತಿ ಮತ್ತು ಕೆಳಜಾತಿ ಮಹಿಳೆಯರ ಸಮಸ್ಯೆಗಳಲ್ಲಿ ಮೇಲ್ನೋಟಕ್ಕೆ ಸಾಮ್ಯತೆ ಇದ್ದಂತೆ ಕಂಡರೂ ಆಂತರ್ಯದಲ್ಲಿ ಭಿನ್ನತೆ ಇದೆ. ಅದು ಅವಳ ಚಲನೆಯನ್ನು ತಡೆದಿದೆ.

ಮತ್ತೊಂದು ಮಾತು-ಮಂಡಲ್ ವಿರೋಧಿ ಮೆರವಣಿಗೆಯೊಂದರಲ್ಲಿ ದೆಹಲಿ ವಿಶ್ವವಿದ್ಯಾಲಯದ ಮಹಿಳಾ ವಿದ್ಯಾರ್ಥಿನಿಯರು 'ನಮಗೆ ನಿರುದ್ಯೋಗಿ ಗಂಡಂದಿರು ಬೇಡ' ಎಂಬ ಪ್ಲೇಕಾರ್ಡ್ ಹಿಡಿದು ಘೋಷಣೆ ಕೂಗಿದ್ದಕ್ಕೂ ಕೂಡಾ ಜಾತಿವ್ಯವಸ್ಥೆಯೇ ಕಾರಣ. ಅವರಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ. ಒಳಜಾತಿ ವ್ಯವಸ್ಥೆಯಲ್ಲಿಯೇ ಮದುವೆ ಆಗಬೇಕೆಂಬ ನಿರ್ಬಂಧವಿದೆ. ಈ 'ಜಾತಿ' ಮತ್ತು 'ಮದುವೆ' ಎಂಬ ವಿಷಯದಲ್ಲಿ 'ಆಯ್ಕೆ ಮತ್ತು ನಿರಾಕರಣೆ' ಎಂಬ ವ್ಯಕ್ತಿ ಸ್ವಾತಂತ್ರ್ಯವನ್ನು ನಿರಾಕರಿಸಲಾಗಿದೆ. ಅದು ಪ್ಲೇಕಾರ್ಡು ಹಿಡಿದು ಘೋಷಣೆ ಕೂಗುವಂತೆ ಮಾಡಿದೆ. ಜಾತಿಯನ್ನು ನಾಶ ಪಡಿಸಬೇಕೆಂದರೆ ಅಂತರ್ ಜಾತಿ ವಿವಾಹಗಳು ಹೆಚ್ಚಾಗಬೇಕು. ಕೆಳಜಾತಿಗಳಂತೆ ಮೇಲ್ಜಾತಿ ಜನರ ಮನೆಯ ಹಾಗೂ ಮನಸ್ಸಿನ ಬಾಗಿಲುಗಳು ತೆರೆಯಬೇಕು. ಆಗ ಮೇಲ್ಚಲನೆ-ಕೆಳಚಲನೆ ಎಂಬ ಜಾತಿ ಸಮೀಕರಣ ಅಪ್ರಸ್ತುತವಾಗಿ ಸಮಾನತೆಯ ಸಮಾಜಮುಖಿ ಚಲನೆಯೊಂದು ತಾನಾಗೇ ರೂಪುಗೊಳ್ಳುವುದು.

• ಡಾ. ಅನಸೂಯ ಕಾಂಬಳೆ

---

ಟಿಕೆಟ್


ನನ್ನ ಕೊಲೆಯಾದ ದಿನ
ಕೊಲೆಗಾರನಿಗೆ
ಸಿಗುವುದು ನನ್ನ ಕಿಸೆಯೊಳಗೆ
ಕೆಲವು ಟಿಕೆಟ್.

ಶಾಂತಿಯುತ್ತ ಸಾಗಲು ಟಿಕೆಟ್,
ಮಳೆಯಲ್ಲಿ ತೊಯ್ಯುತ್ತಿರುವ ತೋಟಕ್ಕೊಂದು ಟಿಕೆಟ್

ಮನುಷ್ಯನ ಅಂತಃಸಾಕ್ಷಿಗೆ ಒಂದು ಟಿಕೆಟ್.

ಓ ಕೊಲೆಗಾರನೆ
ನಿನ್ನಲ್ಲಿ ನಿವೇದನೆ ಇಷ್ಟೇ:
ಈ ಯಾವವನ್ನೂ ಹಾಳು ಮಾಡದಿರು.
ನಿನ್ನಲ್ಲಿ ನಿವೇದನೆ:
ಅವುಗಳ ಕೈ ಹಿಡಿದು
ಮುಂದೆ ಸಾಗು...

– ಸಮೀಹ್ ಅಲ್-ಕಾಸಿಮ್
ಅನು: ಸಂವರ್ತ 'ಸಾಹಿಲ್'



## ಲಂಕೇಶ್ ಪ್ರಕಾಶನ

| ಶೀರ್ಷಿಕೆ | ಬೆ |
|---|---|
| ನೀಲು ಕಾವ್ಯ - ಸಂಗ್ರಹ 1 | 150.00 |
| ನೀಲು ಕಾವ್ಯ - ಸಂಗ್ರಹ 2 | 150.00 |
| ನೀಲು ಕಾವ್ಯ - ಸಂಗ್ರಹ 3 | 200.00 |
| ಚಿತ್ರ ಸಮೂಹ | 90.00 |
| ಮರೆಯುವಮುನ್ನ-ಸಂಗ್ರಹ 1 | 150.00 |
| ಮರೆಯುವಮುನ್ನ-ಸಂಗ್ರಹ 2 | 150.00 |
| ಮನಕೆ ಕಾರಂಜಿಯ ಸ್ಪರ್ಶ | 150.00 |
| ಈ ನರಕ ಈ ಪುಲಕ | 125.00 |
| ಆಟ-ಜೂಜು-ಮೋಜು! | 150.00 |
| ಟೀಕೆ-ಟಿಪ್ಪಣಿ 1 | 200.00 |
| ಟೀಕೆ-ಟಿಪ್ಪಣಿ 2 | 200.00 |
| ಟೀಕೆ-ಟಿಪ್ಪಣಿ 3 | 200.00 |
| ಸಾಹಿತಿ-ಸಾಹಿತ್ಯ | 300.00 |
| ರೂಪಕ ಲೇಖಕರು | 70.00 |
| ಕಂಡದ್ದು ಕಂಡಹಾಗೆ | 125.00 |
| ಪ್ರಸ್ತುತ | 80.00 |
| ಹುಳಿಮಾವಿನ ಮರ | 200.00 |
| ಮುಸ್ಸಂಜೆಯ ಕಥಾ ಪ್ರಸಂಗ | 250.00 |
| ಬಿರುಕು | 60.00 |
| ಅಕ್ಕ | 80.00 |
| ಮಂಜು ಕವಿದ ಸಂಜೆ | 85.00 |
| ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ | 70.00 |
| ಕಲ್ಲು ಕರಗುವ ಸಮಯ | 125.00 |
| ನಾನಲ್ಲ | 70.00 |
| ಕೆರೆಯ ನೀರನು ಕೆರೆಗೆ ಚೆಲ್ಲಿ | 60.00 |
| ಉಲ್ಲಂಘನೆ | 80.00 |
| ಪಾಪದ ಹೂಗಳು | 60.00 |
| ಬಿರುಕು | 40.00 |
| ಸಂಕ್ರಾಂತಿ | 45.00 |
| ತೆರೆಗಳು | 50.00 |
| ಈಡಿಪಸ್ ಮತ್ತು ಅಂತಿಗೊನೆ | 80.00 |
| ಟಿ. ಪ್ರಸನ್ನನ ಗೃಹಸ್ಥಾಶ್ರಮ | 35.00 |
| ಗುಣಮುಖ | 60.00 |
| ಕ್ರಾಂತಿ ಬಂತು ಕ್ರಾಂತಿ | 40.00 |
| ಕಪ್ಪು ಮಲ್ಲಿಗೆ | 75.00 |
| ಕಂಡಹಾಗೆ | 125.00 |
| ದರವೇಶಿ ಕತೆಗಳು | 90.00 |
| ಬಸವರಾಜಮಾರ್ಗ | 40.00 |
| ಬೆನಜೀರ್ | 25.00 |
| ಆವರಣ ಎಂಬ ವಿ-ಕೃತಿ | 100.00 |
| ಜೈಲೆಂಬ ಲೋಕದಲ್ಲಿ | 75.00 |
| ವೇದಾಂತ ರೆಜಿಮೆಂಟ್ | 60.00 |
| ಕಳೆದುಕೊಂಡವಳು | 45.00 |
| ನೂರುಸ್ವರ | 60.00 |
| ಟ್ರೇನ್ ಟು ಪಾಕಿಸ್ತಾನ್ | 125.00 |
| ಮಿಡತೆಗಳ ಬರವಿಗೆ.... | 100.00 |
| ಡಿಸೆಂಬರ್ 13 | 150.00 |
| ಮನುಸ್ಮೃತಿ | 20.00 |
| ರೈತರ ಆತ್ಮ-ಹತ್ಯೆ | 10.00 |
| ಆರೋಗ್ಯ ಮತ್ತು ಜೀವನ | 125.00 |
| ಧನ್ವಂತ್ರಿ ಚಿಕಿತ್ಸೆ | 50.00 |
| ಮುತ್ತುರಾಜನ ಮುತ್ತು | 150.00 |
| ವಿಷ್ಣು ನೂರೊಂದು ನೆನಪು | 150.00 |
| ಓ ಈಳಂ | 250.00 |
| ಖೈರ್ಲಾಂಜಿ | 200.00 |
| ಕಮಲಾ ದಾಸ್ ಕಥೆಗಳು | 60.00 |
| ಮಾಂಟೊ ಕಥೆಗಳು | 80.00 |
| ಕೋಮುವಾದ | 60.00 |
| ಜಾತಿ ಪದ್ಧತಿ | 125.00 |
| ರಾಮಾಯಣ ವಿಷವೃಕ್ಷ | 75.00 |
| ಅರೇಬಿಯನ್ ನೈಟ್ಸ್ | 150.00 |
| ಜಿಮ್‌ಕಾರ್ಬೆಟ್-ಶಿಕಾರಿ ಕತೆಗಳು | 80.00 |
| ಚೆಕ್‌ಪೋಸ್ಟ್ | 100.00 |
| Some-ಪದ | 80.00 |
| ಬಿಡಿಚಿತ್ರಗಳು | 60.00 |
| ಗೋವು ಪವಿತ್ರ ಎಂಬ ಮಿಥ್ಯೆ | 80.00 |
| ಕರ್ಕರೆಯನ್ನು ಕೊಂದವರ್ಯಾರು? | 200.00 |
| ಅಸ್ಪೃಶ್ಯ ವಸಂತ | 200.00 |
| ಜಂಗಲ್ ನಾಮಾ | 175.00 |
| ಬದುಕು-ಬಯಲು (ರೇವತಿ ಆತ್ಮಕಥೆ) | 200.00 |
| ಚಾರ್ವಾಕ | 250.00 |

# ಥೂ ಇವುರ ಭಂಡ ಬಾಳಿಗೆ ಬೆಂಕಿ ಹಾಕ!

...ದುನಿಸಿಕೊಂಡಂತಿದ್ದ ಮೋಡ, ಜೊತೆಗೆ ...ಯುವ ಗಾಳಿ, ಈ ವಾತಾವರಣಕ್ಕೆ ತಕ್ಕಂತೆ ...ಗಿದ್ದ ಹ್ಯಾಮಮೋರೆಗಳು. ಇಂಥ ವಾತಾವರಣದಲ್ಲಿ ...ಕದ ರಾಜಕಾರಣದ ಸುದ್ದಿ ತೆಗೆಯಲು ಇಷ್ಟವಿಲ್ಲದೆ ...ಸುಮ್ಮಗೆ ಕೂತಿದ್ದ. ಇಂತ ಸಮಯದಲ್ಲಿ ಏನೋ

...ಯ ಲು ಸೀ ಮೆ

## ...ಕಟ್ಟೆಪುರಾಣ

▶ಬಿ. ಚಂದ್ರೇಗೌಡ

...ದಂತೆ ಜುಮ್ಮಿ...

"...ಗೇಟಿಂತ ಇದ್ದ ಇಸುಗೂಲು ಬಾಗಲಾಕ್ತಂತೆ ...ಮಾವ" ಎಂದಳು.

"...ದ್ಯಾಕೆ?"

"...ಇಸುಗೂಲಿಗೆ ಹುಡುಗ್ರು ಬರಲಿಲ್ಲವಂತೆ ಅದ್ಕೆ" ...

"...ದ್ಯಾಕ್ ಬತ್ತಾಯಿಲ್ಲಾ?"

"...ಲ್ಲಾ ಹುಡುಗ್ರು ಕಾರಮೆಂಟಿಗೋದವಂತೆ."

"...ನೆ ಮುಂದಿರೊ ಇಸುಗೂಲ ಬುಟ್ಟು ...ಟಿಗೋಯ್ತವೆ ಅಂದ್ರೆ ಇಲ್ಲಿರೊ ಇಸುಗೂಲ ...ಟ್ ಮಾಡಕ್ಕಾಗದಿಲ್ಲವೆ?"

"...ನ್ವೆಂಟ್ಯಲ್ಲ ಪ್ರೈವೇಟು. ಇಸುಗೂಲ್ಯಲ್ಲ ಗೌರಮೆಂಟು ...ಮಾವ. ಅದ್ಕೆ ಯಲ್ಲಾರು ಕಾನ್ವೆಂಟಿಗೆ ಹುಡುಗರ ...ಅವುರೆ" ಎಂದ ಉಗ್ರಿ.

"...ಲ್ಲಿ ಚೆನ್ನಾಗಿ ಹೇಳಿಕೊಡ್ತರಾ?"

"...ಹೇಳಿಕೊಡ್ತರೆ. ಮದ್ಲೆ ಅವು ಪ್ರೈವೇಟ್ ...ವೆ. ಸ್ಕೂಲ ನ್ಯಡಸೋನು ಅಲ್ಲೇ ಇರತನೆ. ಅಂಗಾಗಿ ...ಗಳು ಚೆನ್ನಾಗಿ ಪಾಠ ಮಾಡ್ತರೆ. ಅದ್ಕೆ ಯಲ್ಲಾರು ...ಪ್ರೈವೇಟ್ ಸ್ಕೂಲಿಗೆ ಕಳುಸ್ತ ಅವುರೆ."

"...ಠ ಮಾಡೋ ಮೇಷ್ಟ್ರೆ ತನ್ನ ಮಕ್ಕಳು ಬ್ಯಾರೆ ...ಲಿಗೆ ಕಳುಸ್ತನೆ ಅಂದ್ರೆ, ಇನ್ನು ಉಳದೋರು ...ವೆ" ಎಂದ ಸೀರ.

"...ಜ ಕಣೊ ಮಾವ. ಸರ್ಕಾರಿ ಸಂಬಳ ತಗಳೊ ... ತನ್ನ ಮಕ್ಕಳು ಪ್ರೈವೇಟ್ ಸ್ಕೂಲಿಗೆ ಕಳುಸ್ತನೆ ... ಅವುನು ಚೆನ್ನಾಗಿ ಪಾಠ ಮಾಡದಿಲ್ಲ. ...ಾಯ್ತು."

"ಇಸುಗೂಲು ನಿಂತೋಗಿರದ್ಕೆ ಇನ್ನೂ ಒಂದು ಕಾರಣದೆ ಕಂಡ್ಯ."

"ಅದ್ಯಾವ ಕಾರಣನಪ್ಪ?"

"ನಮ್ಮ ಕಾಲ್ದಲ್ಲಿ ಬೇಕಾದೋಟು ಮಕ್ಕಳುಟ್ಟಿಸಿದ್ವೊ. ಆಗ ಊರು ತುಂಬಿರೋದು. ಇಸುಗೂಲೂ ತುಂಬಿರೋದು. ಈಗ ಯಲ್ಲಾರುವೆ ಒಂದಕೊ, ಯರಡಕೊ ಆಪಳೇಸನ್ ಮಾಡಿಸಿಗತ್ತರೆ. ಅಂಗಾಗಿ ಸರಕಾರಿ ಇಸುಗೂಲಿಗೆ ಹುಡುಗ್ರು ಕಮ್ಮಿ."

"ಕಮ್ಮಿಯಲ್ಲಾ ಕಣೊ. ಇಸುಗೂಲೆ ಬಾಗಲಾಕ್ಯದೆ."

"ಅದೇ ಕಂಡ್ಯ ನಾನೇಳಿದ್ದು. ಈ ವರ್ಷ ಆಪಳೇಷನ್ ಮಾಡಿಸಿಗಂಡ್ರೆ ಇನ್ನು ಮೂರು ನಾಕೊರ್ಸದ ನಂತರ ಒಂದನೇ ಕ್ಲಾಸೇ ಇರದಿಲ್ಲ ಅಲ್ಲವೇ?"

"ಪರವಾಗಿಲ್ವಪ್ಪ, ನೀನು ಮುಂದಾಲೋಚನೆ ಮಾಡಿ ಮಾತಾಡ್ತಿ!"

"ನೋಡಿದ್ರೆ ಗೊತ್ತಾಗದಿಲವೇನ್ಲ, ನಮ್ಮೂರಲೆ ಒಂದು ಸತಿ ಒಂದನೇ ಕ್ಲಾಸಿಗೆ ಹುಡುಗ್ರೆ ಇರಲಿಲ್ಲ." ಎಂದ ಸೀರ.

"ಸರಕಾರಿ ಸ್ಕೂಲು ಯಾಕೆ ಬಾಗಲಾಕ್ತವೆ ಗೊತ್ತೆ ಮಾವ? ಈ ಪ್ರೈವೇಟ್ ಸ್ಕೂಲಲ್ಲಿ ಇಂಗ್ಲೀಸ್ ಹೇಳಿಕೊಟ್ಟರಂತೆ. ಅದೇ ಸರಕಾರಿ ಸ್ಕೂಲಲ್ಲಿ ಕನ್ನಡ ಹೇಳಿಕೊಡ್ತರೆ. ಇಂಗ್ಲೀಸೋದದರಿಂದ ಮಕ್ಕಳು ಮುಂದುವರಿತವೆ. ಕನ್ನಡ ಓದೋದರಿಂದ ಹಿಂದಕ್ಕೆ ಬೀಳ್ತವೆ ಅಂತ ಅಪ್ಪ ಅವ್ವ ತಿಳಕಂಡು ಕಷ್ಟನೊ ಸುಖನೊ ಸಾಲಸೋಲ ಮಾಡಿ ಕಾನುವೆಂಟಿಗೆ ಕಳುಸ್ತರೆ. ಅವುರ ಲ್ಯಕ್ಕದಲ್ಲಿ ಮನೇಲಿ ಮಾತಾಡೊ ಭಾಷೆ ಹುಡುಗ್ರು ಓತ್ತವೆ ಅಂದ್ರೆ ಅದೇನು ವಿಶೇಷವಾಗಿ ಕಾಣದಿಲ್ಲ, ಆದರೆ ಇಂಗ್ಲೀಸ್ ಓತ್ತವೆ ಅಂದ್ರೆ ಮುಂದೆ ಕ್ಯಲಸಕ್ಕೆ ಸೇರಿಕತ್ತವೆ, ಉದ್ಧಾರಾಯ್ತವೆ ಅಂತ ತಿಳಕಂಡು ಸರಕಾರಿ ಸ್ಕೂಲು ಬಾಗಲಾಕಂಗೆ ಮಾಡ್ತಾ ಅವುರೆ. ಒಂದು ಸತಿ ಬಾಗಲಾಕಿದ್ರೆ ತಿರಗ ತಗಿಯದು ಕಷ್ಟ."

"ಇಸುಗೂಲು ಬಾಗಲಾಕದ್ರಿಂದ ಸರ್ಕಾರಕ್ಕೆ ಆದಾಯ ಕಂಡ್ಯ. ಯಾಕಪ್ಪ ಅಂದ್ರೆ ಮೇಷ್ಟ್ರಿಗೆ ಕೊಡೋ ಸಂಬಳನೆ ಉಳಿತು" ಎಂದ ಕಾಳಮಾವ.

"ಎಜ್ಜಾಟ್ಲಿ ಕರಟ್ ದ್ವಡಪ್ಪ. ಈಗಾಗ್ಲೆ ಇಡೀ ಕರ್ನಾಟಕದಲ್ಲಿ ನೂರಾರು ಸ್ಕೂಲು ಬೀಗ ಜಡಕಂಡವೆ. ಆದ್ರಿಂದ ಸರಕಾರ ಹೊಸಾ ಮೇಷ್ಟ್ರುಗಳ ಅಪಾಯಿಂಟ್‌ಮೆಂಟ್ ಮಾಡಿಕಳಂಗೇಯಿಲ್ಲ" ಎನ್ನುತ್ತ ವಾಟಿಸ್ಸೆ ಬಂದ.

"ಇಸುಗೂಲುಳಿಸಿಗಳಕ್ಕೆ ಏನು ಮಾಡಬೇಕ್ಲ?" ಎಂದಳು ಜುಮ್ಮಿ.

"ಸಾಬರ ತರ ಮಕ್ಕಳುಟ್ಟಿಸಬೇಕು ಕಣಕ್ಕ. ಆಗ ಮಾತ್ರ ನಮ್ಮ ಸ್ಕೂಲುಗಳು ಮಕ್ಕಳಿಂದ ತುಂಬಿರತವೆ. ಯಸ್ಸೆಂ ಕೃಷ್ಣ ಬಿಸಿ ಊಟ ಜಾರಿಗೆ ತಂದಿದ್ದೂ ಸಾರ್ಥಕಾಯ್ತದೆ."

"ಆ ಬಿಸಿ ಊಟವ ಮದ್ಲು ನಿಲ್ಲುಸಬೇಕು ಕಣೊ ವಾಟಿಸ್ಸೆ" ಎಂದ ಉಗ್ರಿ.


"ಅದ್ಯಾಕೊ ಅಂಗಂತಿ?"

"ಯಾಕೆ ಅಂದ್ರೆ, ಅಡಗೆ ಮಾಡಿ, ಮಕ್ಕಳ್ಯಲ್ಲ ಉಂಡು ಸಮಾಧಾನವಾಗಿ ಇರೋಗಂಟ ಹೆಡ್‌ಮೇಷ್ಟ್ರು ಅಡಿಗೆ ಅಟ್ಟಿ ಮೇನೇಜರ್ ತರ ಓಡಾಡ್ತನೆ ವರತೂ ಅವುನೆಲ್ಲಿ ಪಾಟ ಮಾಡ್ಯನೂ, ಅಂಗಾಗಿ ಕೆಲವು ಕಡೆ ಮೇಷ್ಟ್ರುಗಳು ಮೇಷ್ಟ್ರು ತರ ಕ್ಯಲಸ ಮಾಡ್ತಯಿಲ್ಲ, ಅಡಿಗೆ ಅಟ್ಟಿ ಮೇನೇಜರ್ ತರ ಕ್ಯಲಸ ಮಾಡ್ತ ಅವುರೆ ಗೊತ್ತೇ."

"ನಿಜ ಕಣೊ ಉಗ್ರಿ. ಅದಕ್ಕಿಂತ್ಲುವೆ ಮಿಕ್ಕಡಗೆ ಅಕ್ಕಿ ಬ್ಯಾಳೆ ಸಮೇತ ಮನಿಗೋಯ್ತಾ ಅವುರೆ ಕೆಲವು ಮೇಷ್ಟ್ರುಗಳು" ಎಂದ ವಾಟಿಸ್ಸೆ.

"ನಿಜವೇನ್ಲ?" ಎಂದು ಜುಮ್ಮಿ ಅಚ್ಚರಿಗೊಂಡಳು.

"ಇನ್ನೇನು ಸುಳ್ಳೇಳ್ತಿನೇನಕ್ಕ ನಾನು. ಆ ಕಾಲ್ದಲ್ಲಿ ಅಮೆರಿಕದ ರವೆ, ಯಣ್ಣೆನೆ



ಕದಿತಿದ್ರು. ಆ ಮುದ್ದೇಗೌಡ ಅನ್ನೊ ಮೇಷ್ಟು ದಿನಾ ತಗಂಡೋಗನು. ಇನ್ನು ಮರಿಗೌಡ ಅನ್ನೋನು ಒಂದು ಟಿನ್ ಯಣ್ಣೆ ಮಾರಿ, ಮಾಲಸಮೇತ ಸಿಕ್ಕಿ ಸಸ್ಪೆಂಡಾಗಿದ್ದ. ಇಂತ ಮೇಷ್ಟ್ರುಗಳು ಇಡೀ ಕರ್ನಾಟಕದ ತುಂಬಾ ಅವುರೆ. ಅವುರ್ಯಲ್ಲ ಮಕ್ಕಳಿಗೆ ಪಾಠ ಮಾಡದಕ್ಕಿಂತ, ಬಿಸಿ ಊಟದ ಸಾಮಗ್ರಿಯ ಯಂಗೆ ಸಾಗಸಬೇಕು ಅನ್ನೋದ್ರಲ್ಲೇ ಕಾಲ ಹಾಕ್ತ ಅವುರೆ. ನಾನೇ ಒಬ್ಬ ಮೇಷ್ಟ್ರ ರೆಡ್‌ಹ್ಯಾಂಡಲ್ಲಿ ಹಿಡಿದು ಕೇಳಿದ್ಕೆ ಯಂತ ಮಾತಂದ ಗೊತ್ತೇ?"

"ಏನಂದನಪ್ಪ?"

"ಮಿಸ್ಟರ್ ವಾಟಿಸ್ಸೆ ಇರುವೆ ಒಂದಕ್ಕಿ ಕಾಳ ತಗಂಡೋದಂಗೆ ನಾನು ಮೂರು ಕೆಜಿ ಅಕ್ಕಿ ತಗಂಡೋಗದ ಅಣಕುಸ್ತಿರಲ್ಲಾ, ಆ ಬಳ್ಳಾರಿ ಗಣಿ ಕಳ್ರು ಗುಡ್ಡಗುಡ್ಡನೆ ನುಂಗತಾ ಅವುರೆ. ಇನ್ನ ಎಡೂರಪ್ಪ ಯಾರಿಗೂ ಕೇರ್ ಮಾಡದಂಗೆ ಪ್ರತಿದಿನ ಖಾಲಿ ಇರೋ ಜಾಗನೆಲ್ಲ ಮಕ್ಕಳು, ಮರಿ, ಬೀಗರು, ಬಜ್ಜರು, ನಂಟ್ರು, ಇಷ್ಟರಿಸ್ಟರಿಗೆ ರಿಜಿಸ್ಟ್ರು ಮಾಡುಸ್ತ ಕುಂತವುನೆ. ಅಂತದ್ರಲ್ಲಿ ನನ್ನ ಹೀಗೆ ಹೀನಾಮಾನ ಬೈತಿಯಲ್ಲಾ ಇದು ನ್ಯಾಯವೆ ಅಂದ. ನಾನತ್ತಗೆ ಸುಮ್ಮನಾದೆ ಕಣಕ್ಕ" ಎಂದ ವಾಟಿಸ್ಸೆ.

"ಥೂ, ಇವುರ ಬಂಡಬಾಳಿಗೆ ಬೆಂಕಿ ಹಾಕ" ಎಂದು ಕಾಳಮಾವ ಉಗಿದ.

"ಆ ಮೇಷ್ಟ್ರ ಸುಮ್ಮನೆ ಬುಟ್ಟು ಕಳಿಸಿಲ್ಲ, ನೀನು ಏನೊ ಈಸಗಂಡಿದ್ದಿ."

"ಇದೇನಕ್ಕ ಇಂಥ ಮಾತಂತಿ. ನಾನಾ ಟೈಮಲ್ಲಿ ಬಸವಣ್ಣನ ವಚನ ಗ್ಯಾಪಿಸಿಗಂಡು ಫೀಲಾದೆ ಕಣಕ್ಕ."

"ಅದ್ಯಾವ ವಚನನೋ?"

"ಏರಿನೆ ಕ್ಯರೆ ನೀರ ಕುಡಕಂಡ್ರೆ, ಬೇಲಿನೆ ಹೊಲ ಮೆಯಿಕಂಡ್ರೆ, ನಾರಿ ತನ್ನ ಮನೇಲಿ ಕಳ್ಳತನ ಮಾಡಿದ್ರೆ ಯಾರಿಗೇಳಬೇಕು. ಅಂತ ವಚನಕ್ಕೆ ಸರಿಯಾಗಿ ನ್ಯಡಕತ್ತಾಯಿರೊ ಶರಣ ಎಡೂರಪ್ಪನ್ನ ನೆನೆಸಿಗಂಡು ಸುಮ್ಮನಾದೆ ಕಣಕ್ಕ."

"ನೀನೊಂದು ಕೆಲಸ ಮಾಡೊ ವಾಟಿಸ್ಸೆ."

"ಅದೇನೇಳೋ ಉಗ್ರಿ?"

"ಈ ಎಡೂರಪ್ಪ ಜನತಾ ಸಂದರ್ಶನ ಮಾಡಿ ಜನಗಳ ಕೈಯಿಂದ್ಲೆ ಅರ್ಜಿ ತಗತಾ ಅವ್ರನೆ. ನೀನು ಅಲ್ಲಿಗೋಗಿ ಈ ವಚನ ಬರದಿರೊ ಅರ್ಜಿ ಕೊಡ್ತಿಯಾ?"

"ಮಿಸ್ಟರ್ ಉಗ್ರಿ, ಈ ಎಡೂರಪ್ಪ ಯಂಥೋನು ಅಂದ್ರೆ ಆ ವಚನ ಈಸ್ಕಂಡು ಓದಿ ಅದರರ್ಥ ವಿವರಿಸಿ, ಇದನ್ನ ವಿರೋಧ ಪಕ್ಷದೋರಿಗೆ ಕೊಡು ಅಂತ ಹೇಳಿಕಳುಸ್ತನೆ ಗೊತ್ತೇ?!"

"ಅವುನಿಗೆ ಯಾವ ಮಾತು ಕೆಂದದಿಲ್ಲ ಬುಡ್ಯ" ಎಂದ ಕಾಳಮಾವ.

"ನಿಜ ದೊಡಪ್ಪ, ಅವುನತ್ರ ಮಾತಾಡೊ ಯಾವ ಮಾತಿಗೂ ಅರ್ಥ ಇರದಿಲ್ಲ, ಅದೇ ತರ ಅವುನು ಜನತಾ ದರ್ಶನದಲ್ಲಿ ಜನಗಳಿಂದ ಅರ್ಜಿ ತಗತನಲ್ಲ ಅವು ಊರ್ಜಿತವಾಗದಿಲ್ಲ, ಯಾಕಂದ್ರೆ ಅವುನನ್ನ ಪವರಿಗೆ ತಂದ ಕುಮಾರಸ್ವಾಮಿ ಇಪ್ಪತ್ತು ತಿಂಗಳು ಜನಗಳಿಂದ ಈಸಗಂಡ ಅರ್ಜಿ ಯರಡುಲಾರಿ ಲೋಡಾಯ್ತದೆ. ಆ ಅರ್ಜಿ ಕತೆ ಏನಾಯ್ತೋ ಏನೋ? ಅದೇ ತರ ಈ ಎಡೂರಪ್ಪ ತಗಳೋ ಅರ್ಜಿನೂ ಊರ್ಜಿತವಾಗದಿಲ್ಲ, ಯಾಕೆಂದ್ರೆ ಅವುನಿನ್ನೂ ಭೂಮಿ ಕೊಳ್ಳದ ನಿಲ್ಲಿಸಿಲವಂತೆ!!"

"?!"

## ನಿರಂತರ ಗೆಲುವಿನ ಕನಸು

...ಸ್ಟೆಫಿ ಗ್ರಾಫ್‌ಗೆ ಈಗ ಇಪ್ಪತ್ತೈದು ವರ್ಷ. ಇನ್ನೊಂದೆರಡು ದಿನದಲ್ಲೇ ಇಪ್ಪತ್ತೈದನೇ ವರ್ಷ ಮುಗಿದು ...ತ್ತರಕ್ಕೆ ಕಾಲಿಡುತ್ತಾಳೆ. ಸ್ಯಾಂಚೆಜ್ ವಿಕಾರಿಯೋ ಎಂಬ ಸ್ಪಾನಿಷ್ ಹುಡುಗಿಗೆ ಇಪ್ಪತ್ಮೂರು. ಸ್ಟೆಫಿ ತನ್ನ ಟೆನಿಸ್ ...ಯ ತಾರಕ ಮುಟ್ಟುತ್ತಾ ಬೆನ್ನುನೋವು, ಕಾಲಿನ ಗಾಯ ಮುಂತಾದ್ದರ ಜೊತೆಗೆ ಸೆಣಸುತ್ತಾ ಕಷ್ಟಪಟ್ಟು ತನ್ನ ...ಚಿನ ಚಾಂಪಿಯನ್ ಸ್ಥಿತಿ ತಲುಪಿದ್ದಾಳೆ. ಆಕೆಗೆ ಈಗ ಹಣದ ಅಗತ್ಯವಿಲ್ಲ, ಎಷ್ಟು ಪ್ರಖ್ಯಾತಳೆಂದರೆ ಎರಡು ...ವ ಹಿಂದೆ ಬಾರ್ಸಿಲೋನಾದಲ್ಲಿ ನಡೆದ ಒಲಂಪಿಕ್ಸ್‌ಗೆ ಆಕೆ ಹೋಗಿದ್ದಾಗ ಅಲ್ಲಿ ನೆರೆದಿದ್ದ ಶ್ರೇಷ್ಠ ಅಥ್ಲೀಟ್‌ಗಳೂ ... ಹಸ್ತಾಕ್ಷರಕ್ಕಾಗಿ ಗೋಗರೆದರು. 'ನೀವು ನನ್ನಷ್ಟೇ ಸ್ಟಾರ್-ನಿಮಗೆ ನನ್ನ ಹಸ್ತಾಕ್ಷರ ಯಾಕೆ?' ಎಂದು ಸ್ಟೆಫಿ ...ದರೂ ಅವರು ಸುಮ್ಮನಾಗಲಿಲ್ಲ. ಸ್ಟೆಫಿ ಈ ಎಲ್ಲ ಉಪದ್ರವದಿಂದ ಕಿಡಿಕಿಡಿಯಾದಳು. ಆದರೂ ಆಕೆಗೆ ...ಷ್ಟು, ತಾನು ಅಪ್ರತಿಮ ಕ್ರೀಡಾಪಟು ಎನ್ನುವುದು. ಹಣ, ಖ್ಯಾತಿ, ಸೌಂದರ್ಯ ಎಲ್ಲವೂ ಇರುವ ಸ್ಟೆಫಿ ...ದಕ್ಕಾಗಿ ಕಾತರಿಸುತ್ತಿದ್ದಾಳೆ ಎಂಬುದನ್ನು ಊಹಿಸುವುದು ಕಷ್ಟ. ಆದರೆ ಆಕೆ ಗೆಲ್ಲುತ್ತಲೇ ಹೋಗಬೇಕು. ಆಕೆ ಮಾನವ ಚೇತನ ಮುಟ್ಟಬಹುದಾದ ಅಪರೂಪದ ಘಟ್ಟ ಮುಟ್ಟಬೇಕು-ಎಂಬುದು



ಆಕೆಯ ಅಭಿಮಾನಿಗಳ ಇಷ್ಟ. ಹಾಗೆಯೇ ಅವರು ಆಕೆಯ ಬದುಕಿನ ಮಾರ್ಗವನ್ನು, ನೀತಿಸಂಹಿತೆಯನ್ನು ಆಕೆಗೆ ಕೊಡುತ್ತಾರೆ; ತರಲೆಗಳಲ್ಲಿ, ವ್ಯಥಾ ರಂಜನೆಯಲ್ಲಿ ಕಾಲ ಕಳೆಯಬಾರದು. ಕೆಟ್ಟ ಹುಡುಗನ ಜೊತೆ ಹೋಗಬಾರದು, ಅಶಿಸ್ತಿನ ಬದುಕು ನಡೆಸಬಾರದು, ಊಟ, ನಿದ್ರೆ, ಮೈಥುನಗಳನ್ನೆಲ್ಲ ನಿಯಂತ್ರಿಸಿಕೊಂಡು ಇನ್ನೂ ಅನೇಕ ವರ್ಷ ಗೆಲ್ಲುತ್ತಿರಬೇಕು... ಇದು ಅವಳ ಅಭಿಮಾನಿಗಳ ಆಶೆ. ಅವರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ತಮ್ಮತಮ್ಮ ವಲಯಗಳಲ್ಲಿ ಸ್ಟೆಫಿಗಳಾಗಲು ಯತ್ನಿಸಿ ಸೋತವರು. ಜೂಜು, ಸ್ಪರ್ಧೆ, ಕಾಮ ಮುಂತಾದ ತರಲೆಗಳಲ್ಲಿ ನಶಿಸಿಹೋದವರು. ತಮ್ಮ ವಿಫಲತೆಯಿಂದ ಆಕೆಗೆ ಪಾಠ ದೊರಕಬಲ್ಲದೆ ಎಂದು ನೋಡುತ್ತಾರೆ. ಆದರೆ ಆಕೆಯೂ ಮನುಷ್ಯಳಾಗಿಯೇ ಗೆಲ್ಲಬೇಕಾಗಿರುವುದನ್ನು ಮರೆಯುತ್ತಾರೆ. ಕೋಟಿ ಮನುಷ್ಯರ ವ್ಯಕ್ತಿತ್ವ ಕೋಟಿ ಬಗೆಯಾಗಿದ್ದರೂ ಅವರೆಲ್ಲರಿಗೂ ನರಮಂಡಲ, ರಕ್ತನಾಳಗಳು, ಹೃದಯ, ಪಂಚೇಂದ್ರಿಯಗಳು ಇರುತ್ತವೆ. ಈ ದೇಹ ಬರೀ ಗೆಲ್ಲಲು ಮಾಡಿದ್ದಲ್ಲ; ಗೆಲ್ಲಲು ಕೂಡ ಪಂಚೇಂದ್ರಿಯಗಳ ಸವಾಲನ್ನು ಎದುರಿಸುವುದು ಅಗತ್ಯ. ಸ್ಟೆಫಿ ಸಂಗೀತಗಾರನೊಬ್ಬನೊಂದಿಗೆ ತಿಂಗಳುಗಟ್ಟಲೆ ಹೋಗಿ ಪ್ರೇಮಿಸಿದಳು; ಫ್ರಾನ್ಸ್‌ನಲ್ಲಿ ಹುಡುಗನೊಬ್ಬನಿಗೆ ಕೇವಲ ಹುಡುಗಿಯಂತೆ ಅಂಟಿಕೊಂಡಿದ್ದಳು. ಕೇವಲ ಹುಡುಗಿ! ಆಕೆ ಹುಡುಗಿಯಾದ್ದರಿಂದಲೇ ಗೆಲ್ಲುವ ಆಶೆ, ತನ್ನನ್ನು ಮತ್ತು ಹುಡುಗರನ್ನು ಮೆಚ್ಚಿಸುವ ಆಶೆ, ಹುಡುಗಿಯಾಗಿ ...ಹೊಂದಿದ್ದರಿಂದಲೇ ಅವಳ ದಿಗ್ವಿಜಯ! ಆಕೆ ನಮ್ಮಂತೆಯೇ ರಕ್ತ ಮಾಂಸದ ಹುಡುಗಿಯಾದ್ದರಿಂದಲೇ ಬೆನ್ನುನೋವು ... ಅದು ಗುಣವಾಗುತ್ತಿದ್ದಂತೆ ಚಾಂಪಿಯನ್!

...ಫಿ ಈಗ ಯಾತಕ್ಕಾಗಿ ಗೆಲ್ಲುತ್ತಿರಬಹುದು, ಅವಳ ಆಳದ ಕನಸುಗಳೇನಿರಬಹುದು ಎಂದು ಹುಡುಕುವುದು ಹುಚ್ಚುತನ. ...ಅವಳ ಜೀವನ. ನಿರಂತರ ಗೆಲುವಿನ ದಾಖಲೆ ಬಯಸುವುದು ಇದರ ಜೀವನ. ಒಂದಕ್ಕೊಂದು ಅನಿವಾರ್ಯವಾಗಿರುವ ...ದುಕಲ್ಲಿ ಅವಳ ನೋವು, ಕಾಯಿಲೆ, ತಲೆನೋವು, ಕಿರಿಕಿರಿ... ಎಲ್ಲ ಅಗತ್ಯ. ಅಂತರರಾಷ್ಟ್ರೀಯ ಖ್ಯಾತಿಯ ಸ್ಟೆಫಿ ತನ್ನ ...ಪ್ರ ಸ್ಫೋಟಗೊಳ್ಳದಂತೆ ಸಹನೆಯಿಂದಿರುವುದೇ ಸಾಧನೆ. ನಮ್ಮಲ್ಲಿ ವಿಶ್ವಸುಂದರಿ ಸ್ಪರ್ಧೆಯಲ್ಲಿ ಗೆದ್ದವರು ಧ್ವಂಸವಾಗುತ್ತಿರುವುದನ್ನು ...ನುತ್ತಿದ್ದೇನೆ.




## ವರ್ಜಿನ್ ಚಿಲುಮೆ

ನನ್ನೆದುರು 'ಇಮೇಜಸ್' ಎಂಬ ಹೆಸರಿನ ಒಂದು ಪುಸ್ತಕವಿದೆ. ಇದು ಸ್ವೀಡನ್ನಿನ ಪ್ರಖ್ಯಾತ ಸಿನಿಮಾ ನಿರ್ದೇಶಕ ಬರ್ಗ್‌ಮನ್ ನೆನಪು ಮಾಡಿಕೊಂಡು ಹೇಳಿದ್ದು. ನನ್ನ ಪ್ರಕಾರ ನಾಟಕದಲ್ಲಿ ಶೇಕ್ಸ್‌ಪಿಯರ್ ಇದ್ದಹಾಗೆ ಸಿನಿಮಾದಲ್ಲಿ ಬರ್ಗ್‌ಮನ್. ರೆನ್ಯಾ, ಫೆಲಿನಿ, ಕುರಸೋವಾ ಮುಂತಾದವರ ಅಭಿಮಾನಿಗಳು ನನ್ನನ್ನು ಖಂಡಿಸಬಹುದು; ಆದರೂ ಪರವಾಗಿಲ್ಲ, ನಾನು ಪಂಡಿತನಂತೆ ಮಾತಾಡುತ್ತಿಲ್ಲ. ಬರ್ಗ್‌ಮನ್ನನ ಸಾಧನೆಯನ್ನು ಧ್ಯಾನಿಸಿ ಹೇಳುತ್ತಿದ್ದೇನೆ. ಆತ ಈ ಪುಸ್ತಕದಲ್ಲಿ ತನ್ನ 'ವರ್ಜಿನ್ ಸ್ಪ್ರಿಂಗ್' ಎಂಬ ಚಿತ್ರದ ಬಗ್ಗೆ ಹೇಳಿದ್ದಾನೆ. ಆಗಿನ್ನೂ ದೇವರೊಂದಿಗೆ ಬರ್ಗ್‌ಮನ್ನನ ಜಗಳ ಮುಗಿದಿರಲಿಲ್ಲ; ಅಂದರೆ ದೇವರು ಆತನ ನಂಬಿಕೆಯ ಭಾಗವಾಗಿದ್ದ. ವರ್ಜಿನ್ ಸ್ಪ್ರಿಂಗ್ ನಾನು ಬಹಳ ಹಿಂದೆ ನೋಡಿದ ಚಿತ್ರ. ಒಬ್ಬಳು ಕನ್ಯೆ ಒಂದು ಕಾಡಿನಲ್ಲಿ ಹೋಗುತ್ತಿರುವಾಗ ಅವಳನ್ನು ಮೂವರು ರೇಪ್ ಮಾಡಿ ಕೊಂದುಹಾಕುತ್ತಾರೆ.('ರೇಪ್' ಅತ್ಯಾಚಾರಕ್ಕಿಂತ ಪ್ರಬಲ ಮಾತು ಅಲ್ಲವೇ?) ಅವರು ರಾತ್ರಿ ಕಳೆಯಲು ಆ ಕನ್ಯೆಯ ಮನೆಗೇ ಬರುತ್ತಾರೆ. ಅವರನ್ನು ನೋಡಿ ತಂದೆಗೆ ಅನುಮಾನ ಬರುತ್ತದೆ. ಮಗಳನ್ನು ನಾಶಮಾಡಿದವರೆಂದು ಗೊತ್ತಾದೊಡನೆ ಅವರ ಕಗ್ಗೊಲೆಯಾಗುತ್ತದೆ. ಕಗ್ಗೊಲೆ ಮಗಳಿಗೆ ಜೀವ ಬರಿಸಲಾರದು; ರಕ್ತಕ್ಕೆ ರಕ್ತ ಉತ್ತರವಲ್ಲ. ಆದರೆ ಏಕೆ ಹೀಗಾಗುತ್ತದೆ? ಪ್ರಕೃತಿಯಲ್ಲೇ ಈ ಬಗೆಯ ರೇಪ್, ಕೊಲೆ, ರಕ್ತಪಾತ, ಬಲಿ ಇದೆಯೇ? ಇದೆಲ್ಲದರ ಅರ್ಥವೇನು? ಎಂಬ ಪ್ರಶ್ನೆಗಳ ಹಿಂದೆಯೇ ಆ ಕನ್ಯೆ ರಕ್ತ ಸುರಿಸಿ ಸತ್ತ ಹತ್ತಿರ ಸಿಹಿನೀರ ಬುಗ್ಗೆ ಉಕ್ಕುತ್ತದೆ. ಅದೇ ವರ್ಜಿನ್ ಸ್ಪ್ರಿಂಗ್. ಈ ಕತೆಯನ್ನು ಒಂದು ಲಾವಣಿಯಿಂದ ಬರ್ಗ್‌ಮನ್ ತೆಗೆದುಕೊಂಡು ಮಾಡಿದ್ದಾನೆ. ಮುಗ್ಧ ಹುಡುಗಿ. ದೇವರಲ್ಲಿ ಅಪಾರ ಭಕ್ತಿಯುಳ್ಳ, ಅಮಾಯಕ ಕುಟುಂಬ. ಆ ಕುಟುಂಬ ಬದುಕಿನ ಕರಾಳ ಸವಾಲನ್ನು ಎದುರಿಸುತ್ತದೆ. ನಿಸರ್ಗದ ವಿಚಿತ್ರಗಳಿಂದ ಮೂಕವಾಗುತ್ತದೆ.




ಮನುಷ್ಯನ ಬದುಕನ್ನು ಚಿತ್ರಗಳಿಂದ ರೂಪಿಸತೊಡಗಿದ್ದು ಸಿನಿಮಾಗಳಲ್ಲಿ ನಾಟಕ ಹಾಗಿರಲಿಲ್ಲ, ನಾಟಕದಲ್ಲಿ ಕಾವ್ಯ ಮಾತುಗಳಿಂದ ಎಲ್ಲವನ್ನು ಚಿತ್ರಿಸಲಾಗುತ್ತಿತ್ತು. ಸಿನಿಮಾದಲ್ಲಿ 'ಕ್ಲೋಸಪ್' ಆತ್ಮಕ್ಕೆ ಕ್ಯಾಮೆರಾ ಹಿಡಿಯತೊಡಗಿತು. ವರ್ಜಿನ್ ಸ್ಪ್ರಿಂಗ್ ಆ ದೃಷ್ಟಿಯಿಂದ ಕುತೂಹಲಕರ. ಮನುಷ್ಯನ ಪುರಾತನ ಬದುಕು; ಅಲ್ಲಿ ಒಳ್ಳೆಯತನ, ಮುಗ್ಧತೆ, ರಾಕ್ಷಸತ್ವವನ್ನು ಎದುರಿಸುವುದು. ರಾಕ್ಷಸತ್ವದ ಕೈಯಲ್ಲಿ ಸೋಲುವುದು. ದೇವರೊಂದಿಗೆ ಜಗಳ. ಅಂದರೆ ಆತನ ಸೃಷ್ಟಿಯಲ್ಲಿ ಕುತೂಹಲ. ಈ ಜಗಳದ ಬಗೆಗಿನ ಕುತೂಹಲದಿಂದ ಆತ್ಮ, ಮೋಕ್ಷ, ಪುನರ್ಜನ್ಮದ ಪ್ರಶ್ನೆ ಏಳುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಹುಟ್ಟು ಮತ್ತು ಸಾವಿನ ನಿಗೂಢತೆಯ ಬಗ್ಗೆ ಕುತೂಹಲ. ಹುಟ್ಟು, ಸಾವನ್ನು ಕುರಿತು ನಮಗೆ ಏನೇನೂ ಗೊತ್ತಿಲ್ಲ, ಗೊತ್ತಿಲ್ಲದ ವಲಯ ಯಾವಾಗಲೂ ದೆವ್ವಗಳು ಕುಣಿಯುವ ಜಾಗ. ಅದು ವರ್ಜಿನ್ ಸ್ಪ್ರಿಂಗ್ ಬುಗ್ಗೆ ಹುಟಿಯುವ ಸ್ಥಳ ಕೂಡ.

ಜುಲೈ 19,1995

# ಯಡ್ಯೂರಪ್ಪ ಆಣೆ-ಒನಕೆ ಓಬವ್ವ



ಎಚ್.ಎಲ್. ಕೇಶವಮೂರ್ತಿ

## ಅಣಕ

'ಉತ್ತರನ ಪೌರುಷ' ಎಂಬ ನುಡಿಗಟ್ಟು ಎಲ್ಲರಿಗೂ ಪರಿಚಯ ಇರುವಂತಹದ್ದು. ಇದಕ್ಕೆ ಪರ್ಯಾಯವಾದದ್ದು ಇತ್ತೀಚೆಗೆ ಕನ್ನಡ ಭಾಷೆಗೆ ಸೇರ್ಪಡೆಯಾಗಿರುವಂತಿದೆ. ಘನ ಸರ್ಕಾರವೆಂಬುದು ರೈತರ ಫಲವತ್ತಾದ ಸಾವಿರಾರು ಎಕರೆ ಭೂಮಿಯನ್ನು, ದಕ್ಷಿಣೆ ಪಡೆದು, ಪೊಸ್ಕೊ ಕಂಪೆನಿಗೆ ವಹಿಸಿ ಕೊಡಲು ತುದಿಗಾಲಿನಲ್ಲಿ ನಿಂತಿರುವುದು ಸರಿಯಷ್ಟೆ. ತಮ್ಮ ಜೀವನಾಧಾರವಾದ ಭೂಮಿಯನ್ನು ಬಿಡಲೊಪ್ಪದ ರೈತ ಮಹಿಳೆಯರು ಇದರ ಪ್ರಯೋಗ ಮಾಡಿದ್ದಾರೆ. 'ನಮ್ಮ ಭೂಮಿ ಸುದ್ದೀಗೆ ಬಂದ್ರೆ ಯಡ್ಯೂರಪ್ಪಂಗೆ ಆಣೆ ಮಾಡಿ ಓಡಿಹೋಗಕ್ಕಲ್ರಿ ಒನಕೆ ಓಬವ್ವ ಆಗ್ತೀವ್ರಿ' ಎಂದು ಹೇಳುತ್ತಿದ್ದಾರಂತೆ!

ಯಡ್ಯೂರಪ್ಪನವರ 'ಪಲಾಯನ ಯಾತ್ರೆ' ಜನಮನದಲ್ಲಿ ಎಷ್ಟು ಆಳವಾಗಿ ಬೇರೂರಿದೆ ಅಂದ್ರೆ ಶಾಲಾ ಮಕ್ಕಳಿಗೆ 'ಒನಕೆ ಓಬವ್ವ' ವಿರುದ್ಧದ ಪದ ಬರೆಯಿರಿ ಅಂದ್ರೆ 'ಯಡ್ಯೂರಪ್ಪ ಆಣೆ' ಅಂತಾನೆ ಬರೀತಾವಂತೆ! ಈ ದಿಢೀರ್ ಬೆಳವಣಿಗೆಯಿಂದ ಸನ್ಮಾನ್ಯರು 'ಮೌನ ವ್ರತ' ಸ್ವೀಕರಿಸುವ ಮಾತನಾಡುತ್ತಿದ್ದಾರಂತೆ. ಹೀಗೆ 'ಅರ್ಜುನ ಸನ್ಯಾಸಿ' ವೇಷ ಧರಿಸಿದರೂ ಕುಮಾರಸ್ವಾಮಿ ಬಿಡಲೊಲ್ಲರಾಗಿರುವುದು ಶೋಚನೀಯವೇ ಸರಿ.

ಎಷ್ಟೇ ಆಗಲಿ ಕುಮಾರಸ್ವಾಮಿ ಸಿನಿಮಾ ಮನುಷ್ಯ. ಟಿವಿ ಧಾರಾವಾಹಿಗಳ ಪರಿಣಾಮ ಬಲ್ಲೋರು. ಯಡ್ಯೂರಪ್ನೋರ ಮೇಲಿನ ಭ್ರಷ್ಟಾಚಾರ ಆರೋಪಗಳನ್ನ ಧಾರಾವಾಹಿ ತರಹಾನೆ ಬಿಡುಗಡೆ ಮಾಡ್ತಾ ತಮ್ಮ ಹೆಸರು ಜನಮಾನಸದಲ್ಲಿ ನೆಲೆಯೂರುವಂತೆ ಮಾಡುವ ಸಂಚು ಹೂಡಿದರು. ಇವನು ಧಾರಾವಾಹಿ ಮಾಡಿದರೆ ನಾವು ಸಿನಿಮಾನೆ ಮಾಡ್ತೀವಿ ಎಂದೋ ಏನೋ ಗೌಡರ ಕುಟುಂಬದ 1500 ಕೋಟಿ ರೂಪಾಯಿ ಹಗರಣದ ಪುಸ್ತಕ ರೆಡಿ ಮಾಡಿದರು. ಅದಕ್ಕೆ ಚಾರ್ಜ್‌ಶೀಟ್ ಅನ್ನೊ ಹೆಸರಿಟ್ಟರು. ಸಿನಿಮಾಗಳು ಯಶಸ್ಸು ಅಂತ ಆದರೆ ಅದೇ ಧಾಟೀಲಿ ಇನ್ನೊಂದು ಸಿನಿಮಾ ತೆಗೀತಾರೆ. ಸಾಂಗ್ಲಿಯಾನ ಸಿನಿಮಾ ಕ್ಲಿಕ್ ಆಯ್ತು. ಅದ ಎನ್‌ಕ್ಯಾಷ್ ಮಾಡಿಕೊಳ್ಳಬೇಕೂಂತ ಸಾಂಗ್ಲಿಯಾನ ಭಾಗ ಎರಡು ತೆಗೆದ್ರು. ಹಾಗೇನೆ ಚಾರ್ಜ್‌ಶೀಟ್ ಕ್ಲಿಕ್ ಆದರೆ ಚಾರ್ಜ್ ಶೀಟ್ 2 ಬಿಡುಗಡೆ ಮಾಡಬೇಕು ಅಂತಿದ್ರು. ಇದಕ್ಕೆ ಪೂರ್ವ ಸಿದ್ಧತೆ ಮಾಡಿಕೊಂಡ್ರು. ಚಾರ್ಜ್‌ಶೀಟ್ ಅನ್ನು ಹರಳು ಹುರಿದ ಹಾಗೆ ಇಂಗ್ಲಿಷ್‌ನಲ್ಲಿ ಮಾತಾಡೋರ ಕೈಲಿ ಬಿಡುಗಡೆ ಮಾಡಿಸಿದ್ರೆ ಅದೂ ಮಹಿಳೆ ಕೈಲಿ ಮಾಡಿಸಿದ್ರೆ ಸ್ಪೆಷಲ್ ಎಫೆಕ್ಟ್ ಇರುತ್ತೆ ಅಂದುಕೊಂಡು ನಿರ್ಮಲಾ ಸೀತಾರಾಮ್ ಅವರ ಕೈಲಿ ಮಾಡಿಸಿದ್ರು. ಹಿಂಗೆ ಬಿಡುಗಡೆ ಮಾಡಿದ ಮೇಲಾದ್ರೂ ಜನ ಅನ್ನಿಸಿಕೊಂಡೋರು ಯಡ್ಯೂರಪ್ನೋರು ನಿರಾಳವಾಗಿ ಇರೋಕೆ ಬಿಟ್ಟರು ಅಂತೀರಾ... ಉಹುಂ. 'ಅರೆ ಅಷ್ಟು ಮಾಡವ್ರೆ, ಇಷ್ಟು ಮಾಡವ್ರೆ; ಹಂಗೆ ಮಾಡವ್ರೆ, ಹಿಂಗೆ ಮಾಡವ್ರೆ ಅಂದ್ಬುಟ್ರೆ ಆಗೋಯ್ತಾ? ಅವ್ರುನ ಕೈಲೇ ಅಧಿಕಾರ ಐತಲ್ಲ ಮಾಡುಸ್ಲಿ ತನಿಖೇಯ, ಹಾಕುಸ್ಲಿ ಜೈಲಿಗೆ' ಅಂದ್ರು.... ಯಾರೋ ಜನ! ಜನಾನೇ ಹಿಂಗಂತಾವ್ರೆ ಅಂದ್ಮೇಲೆ ನಾಯಕರು ಸುಮ್ಮನಿದ್ದಾರಾ? 'ನಡೆಸಲಿ ತನಿಖೆ, ಆಗಲಿ ತಪ್ಪಿತಸ್ಥರಿಗೆ ಶಿಕ್ಷೆ' ಅಂತ ಪಟ್ಟು ಹಾಕಿದ್ರು.

ಯಡ್ಯೂರಪ್ನೋರ್ಗೆ ಪೀಕಲಾಟಕ್ಕಿಟ್ಟುಕೊಂಡಿತು. ಅತ್ತ ದರಿ, ಇತ್ತ ಪುಲಿ ಅನ್ನೊ ಹಂಗಾಯ್ತು. ಸಿಬಿಐ ತನಿಖೇನೆ ಆಗಲಿ ಅಂದ್ರೆ ಅದೋ ಆವರಿಗಾಗದವರ ಹಿಡಿತದಲ್ಲೈತೆ. ಅದರ ಮೇಲೆ ನಂಬಿಕೆ ಇಲ್ಲ ಅಂತ ಅವರೇ ಸಾವಿರ ಸಲ ಹೇಳಿದ್ರು. ಜನ ಸುಮ್ನಿರುತ್ತಾ? ಆಗ ನಂಬಿಕೆ ಇಲ್ಲದ್ದು ಈಗ ಹೆಂಗೆ ಬಂತು ಅಂತ ಗುದ್ತಾರೆ. ಅದರ ಸಾವಾಸನೆ ಬ್ಯಾಡಾಂತ ಸಿಓಡಿ ತನಿಖೆ ಮಾಡ್ಲಾನ ಅಂದ್ರೆ ಹಂಗೇ ಆಗ್ಲಿ ಅಂತಾವೆ ನಿಜ. ಅಲ್ಲಿಗೇನೋ ಕುಲಸ್ತರನ್ನ ನೇಮಿಸಿ, ತನಿಖೆ ಶಾಸ್ತ್ರ ಮಾಡ್ಸಿ ನೇಣುಗಂಬ ಹತ್ತಿಸಬಹುದು. ಆಮೇಲೆ ಅವರದ್ದು ಮಾತ್ರ ತನಿಖೆ ಮಾಡಿಸಿದ್ರಲ್ಲ ಹಂಗೇ ನಿಮ್ದೂ ಆಗ್ಲಿ ಅಂತ ರೊಚ್ಚು ಹಿಡೀತವೆ. 'ಸಿಬಿಐ ಮೇಲೆ ನಮಗೆ ನಂಬಿಕೆ ಇಲ್ಲ, ಸಿಓಡಿ ಮೇಲೆ ಅವರಿಗೆ ನಂಬಿಕೆ ಇಲ್ಲ' ಅಂತ ತೇಲಿಸಿಬಿಡಾನ ಅಂದ್ರೆ, ಆ ಹಾಳಾದ ಕುಮಾರಸ್ವಾಮಿ 'ಇಂಟರ್‌ನ್ಯಾಷನಲ್ ಏಜೆನ್ಸಿಯಿಂದ್ಲೇ ತನಿಖೆ ಮಾಡುಸ್ರಿ' ಅಂತ ಅಬ್ಬರಿಸ್ತಾನೆ. ಈ ದೇವೇಗೌಡರನ್ನ ನಂಬಂಗಿಲ್ಲ, ಪ್ರಳಯಾಂತಕ ಬುದ್ಧಿ ಇರೋರು. ಅವರ ಜನಾವ ಅಲ್ಲೆಲ್ಲಿ ಇಟ್ಟಿದ್ದಾರೋ ಏನೋ! ಅಡಗೂರು ವಿಶ್ವನಾಥ ಅಂತೋರು 'ತನಿಖೆ ಅಂತ ಆಗ್ಲಿ ಮಾರಾಯ್ರು. ನೀವಿಬ್ರೂ ಕಾವಿ ಕಂಡ್ರೇ ಕಾಲಿಗೆ ಬೀಳೋರು. ಮಠಾಧೀಶರಿಂದಲೇ ತನಿಖೆ ಮಾಡುಸ್ರಿ' ಅಂತ ಗೇಲಿ ಮಾಡ್ತಾಬಿದ್ದವ್ರೆ. ಗೇಲಿ ಮಾತಾದ್ರೂ ಅದ್ರಲ್ಲೂ ಸತ್ಯ ಇದೆ. ಇದನ್ನ ಒಪ್ಪಬಹುದು ಅಂದ್ರೆ, ಯಾವ ಮಠಾಧೀಶರ ಕೈಲಿ ಅಂತ ತನಿಖೆ ಮಾಡ್ಸೋದು? ವೀರಶೈವ ಮಠಗಳೇನೊ ಕಾಸಿಗೊಂದು ಕೊಸರಿಗೊಂದು ಅವೆ. ದಿನಬೆಳಗಾದರೆ ಹೊಸ ಹೊಸವು ಹುಟ್ತಾನೆ ಇದಾವೆ. ಕುಲಸ್ತರ ಬೆನ್ನಿಗೆ ಅವರೆಲ್ಲ ನಿಲ್ತಾರೆ ನಿಜ. ಈ ದೇವೇಗೌಡ್ರು ಅವರ್ನೂ ಕೊಂಚಾಕ್ಕಿದ್ರೂ ಹಾಕಿದೋರೇಯ. ಬೆನ್ನಿಗೆ ನಿಂತವ್ರೆ ಅಂತ ನಂಬಿಕೊಂಡು ಹೋದ್ರೆ ಸರಿಯಾದ ಸಮಯದಲ್ಲಿ ಇನ್ನೇನೋ ಮಾಡಿದ್ರೂ ಮಾಡ ಬಹುದು! ಬ್ರಾಹ್ಮಣ ಸ್ವಾಮಿಗಳನ್ನು ನಂಬೋ ಹಂಗಿಲ್ಲ. ಮೇಲೊಂದು ಆಡ್ತವೆ, ಒಳಗೊಂದು ಮಾಡ್ತವೆ. ಒಕ್ಕಲಿಗ ಸ್ವಾಮಿಗಳು ಯಾವತ್ತಿದ್ರೂ ಅವ್ರುರ್ಕ ಡೇನೇಯ. ತನಿಖೆ ಸಾವಾಸವೇ ಬ್ಯಾಡ. ದೇವರ ಮೇಲೆ ಆಣೆ ಹಾಕ್ಬುಡಾನ ಬನ್ನಿ, ಅನ್ನೋಕೆ ಧರ್ಮಸ್ಥಳದಲ್ಲಿ ಆದ ಮೋಕ್ಷ ಇನ್ನೂ ಹಸಿಹಸಿಹಾಗಿದೆ. ಗೊಣ್ಣೆಗೆ ಸಿಕ್ಕಿದ ನೊಣ ಆಗಿದ್ರು ಪಾಪ ಯಡ್ಯೂರಪ್ನೋರು.



ಈ ನಡುವೆ ಕುಮಾರಸ್ವಾಮಿ ಬೇರೆ 'ಎಂಟು ದಿವಸ ದೊಳಗೆ ತನಿಖೆ ಪ್ರಾರಂಭಿಸಬೇಕು, ಮೂರು ತಿಂಗಳ ಒಳಗೆ ವರದಿ ಬರಬೇಕು. ಇಲ್ಲದೆ ಹೋದರೆ ಆಮರಣ ಉಪವಾಸ ಕುಂತ್ಕತೀನಿ' ಅಂತ ಬೆದರಸವ್ರೆ. ಉಪವಾಸ ಅನ್ನೋದು ಐಕ್ಲಾಟ ಆಗೋಗದೆ. ಆ ರಾಮ್‌ದೇವ್‌ಗೆ ಆದದ್ದ ನೋಡಿಯಾದ್ರೂ ಬುದ್ಧಿ ಕಲೀಬಾರ್ದ? ಅವನು ಸರ್ವರೋಗಗಳಿಗೂ ಯೋಗ ಮದ್ದು ಅಂತ ಹೇಳ್ತ ವೇದಿಕೆ ಮೇಲೆ ದೆವ್ವ ಹಿಡ್ದಿರೋರಂಗೆ ಕುಣೀತಿದ್ದ. ಹೊರದೇಶದಲ್ಲಿರೋ ಭಾರತೀಯರ ಕಪ್ಪುಹಣವನ್ನು ವಾಪಸ್ಸು ತರಿಸೋ ತನಕ ಉಪವಾಸ ಕೂತಿರ್ತೀನಿ ಅಂದಿದ್ದ. ಹಸಿವಿಗೂ ಯೋಗ ಮದ್ದು ಅಂದು ಕೊಂಡಿದ್ದನೋ ಏನೋ. ಮೂರು ದಿನ ಉಪವಾಸ ಇದ್ದದ್ಕೇ ಸಾಯೋ ಹಂಗಾದ. ಇದ ಜನ ಎಲ್ಲ ಕಣ್ಣಾರೆ ಕಂಡ ಸಂಗ್ತಿ. ನೀವೂ ಹಂಗಾಗ್ತೀರಿ ಮಾರಾಯ್ರು ಅಂದ್ರೆ ಒಪ್ಪಲ್ಲ, ಉಪವಾಸ ಕುಂತೇ ತೀರ್ತೀನಿ ಅಂತಾರೆ. ಇದರ ಮೇಲೆ ನನ್ನ ಶರೀರದ ತುಂಬ ಕಾಯಿಲೆ ತುಂಬವೆ ಅಂತಾನೂ ಹೇಳ್ತಾ ಅವ್ರೆ. ಕಾಯಿಲೆ ಮನುಷ... ಉಪವಾಸ... ಸಾವು... ಎಷ್ಟು ಸಲ ಅಂತ ಪಾಪ ಪರಿಹಾರ ಮಾಡ್ಕೊಂಡಾರು ಅವರು ತಾನೇಯ. ಎಲ್ಲಿ ಹೋಗಿ ಸಾಯಬೇಕು ಹೇಳಿ.

ಜನರಿಗೇನೋ ಬಾಯಿಗೆ ಎಲೆ ಅಡಿಕೆ ಆಗೋಕೆ ಒಂದು ವಿಷಯ ಬೇಕು. ಹೊಸ ಸುದ್ದಿ ಬರ್ತಿದ್ದಂಗೆ ಆದ ಮರ್ತು ಇದ ಜಗ್ಗಿಸ್ತಾ ಕುಂತ್ಕತಾರೆ ಅಂತಾವ 'ಚಾರ್ಜ್‌ಶೀಟ್' ಬಿಟ್ಟರೆ ಅದು ತಿರುಗ್ಸಿ ಮುರುಗ್ಸಿ ಅವ್ರುರ್ಗೇ ಅಮರಿಕೊಳ್ಳೋ ಹಂಗಾಗದಲ್ಲಾ...

********

ಈ ಜನಕ್ಕೆ ಭೂಮಿ ಮೇಲೆ ಏನೋ ಒಂದು ತರಹ ಆಸೆ. ಭೂಮಿ ಅಂದ ಮೇಲೆ ಎಲ್ಲಾನೂ ಒಂದೇ ತರ ಇರಲ್ವಲ್ಲ, ಫಲವತ್ತಾದವ್ರೂ ಇರ್ತವೆ, ಬಂಜರು ಭೂಮಿನೂ ಇರ್ತವೆ. ಬೆಂಗಳೂರಿನ ಭೂಮಿ ಅಂದರೆ ವಜ್ರದ ಗಣಿ ಇದ್ದಂಗೆ. ಮೈಸೂರೋವು ಚಿನ್ನದ ಗಣಿ ಇದ್ದಂಗೆ. ಅಯ್ಯೋ ವಜ್ರಪಜ್ರ ಎಲ್ಲ ನಮ್ಮಂತೋರಿಗ್ಯಾಕೆ ಅನ್ನೊ ವಿರಾಗಿಗಳೂ ಇರ್ತಾರೆ. ಗೌರಮ್ಮ ಇಂತೋರಲ್ಲಿ ಒಬ್ಬರು. ಪಾಪ ಗಂಡ ಇರ್ಲಿಲ್ಲ, ಹಿಂಗಿಂಗೆ ನಾನು ಗಂಡ ಸತ್ತಿರೋಳ[...] ಮೈಸೂರಲಿ ಸೈಟು ಅಂತ ಒಂದು ಕೊಟ್ರೆ ಹೆಂಗೊ[...] ಕಾಲ ತಳ್ತೀನಿ ಅಂತ ಮುಖ್ಯಮಂತ್ರಿಗಳ ಹತ್ತಿ[...] ಗೋಳಾಡಿದರಂತೆ. ಅವರ ಗೋಳಾಟ ಕಂಡು ಇವ[...] ಕರುಳು ಚುರುಕ್ ಅಂತಂತೆ. ಹೃದಯ ಅನ್ನೋದ[...] ಮಂಜುಗಡ್ಡೆ ತರ ಕರಗ್ತಂತೆ. ಛೇ ಗಂಡ ಸತ್ತೋರ್ಗೆ ಸಹಾಯ[...] ಮಾಡ್ದೇ ಇದ್ದ ಮೇಲೆ ನಾನು ಅಧಿಕಾರದಲ್ಲಿದ್ದೂ ಸತ್ತಂಗೇಯ[...] ಅನ್ನಿಸ್ತಂತೆ. ಆ ಗಂಡ ಸತ್ತೋಳ್ಗೆ 50x80 ಸೈಟನ[...] ಅನುಕಂಪದ ಆಧಾರದ ಮೇಲೆ ನೀಡಿದ ಮೇಲೇ ಮನಸ್ಸಿ[...] ಸಮಾಧಾನ ಆದ್ದದ್ದಂತೆ. ಹಂಗೇ ಇನ್ನೊಂದು ಹೈದ ಬಂತಂತೆ[...] ರಾಜೇಶ್ ಅಂತ ಅವನ ಹೆಸರಂತೆ. ನಾನು ತಂದಿಲ್ಲ[...] ತಬ್ಬಲಿ, ನನಗೊಂದು ದಾರಿ ತೋರ್ಸಿ ಅಂತಾ[...] ಗೋಗರೀತಂತೆ. ಇವನಿಗೆ ದಾರಿ ಮೈಸೂರಿನ ಸೈಟಲ್ಲ[...] ಅಂತಾವ, ಅದ್ಕೂ ಒಂದು ಮಂಜೂರು ಮಾಡಿದ್ರಂತೆ[...] ಹಿಂಗೆ ಹೆಂಡ್ತಿ ಕಳ್ಕಂಡಿರೋ ವಿಧುರ ನಾನು ಅಂತಾ[...] ತಂದೆ ತಾಯಿ ಇಲ್ದಿರೋ ತಬ್ಬಲಿ ಅಂತಾವ ಕೇಳ್ಕಂಡ[...] ಬಂದ್ರಂತೆ. ಅವರ ಪರಿಪಾಟಲ ಕಂಡು ಯಡ್ಯೂರಪ್ನೋ[...] ಅನುಕಂಪ ಅನೋದರ ಕೋಡೀನೆ ಬಿತ್ತಂತೆ. ತಗಳಿ ನೀವ್ರು[...] ಒಂದೊಂದು ಸೈಟ ಅಂದ್ರಂತೆ.

ಮಾಡಾಕೆ ಕೇಮಿಲ್ಲದೋವ್ರು ಹಿಂಗೆ ಸೈಟು ಪಡೆದವ[...] ವಂಶಾವಳಿ ತಡುಕ್ಕಂಡು ಹೊಂಟವಂತೆ. ಗೌರಮ್ಮ, ಸುರೇ[...] ಇದ್ರಲ್ಲ ಅವರು ಯಡ್ಯೂರಪ್ನೋರ ಸೋದರಿ ಹಾಗೂ[...] ಸೋದರ ಅಳಿಯ ಅಂತೆ. ಇದನ್ನೇ ಅಧಿಕಾರದ ದುರು[...] ಯೋಗ ಅಂತ ಕುಂತವೆ. ಅರೆ ಮುಖ್ಯಮಂತ್ರಿಗಳ ಸಂಬಂಧಿ[...] ಗಳಾಗಿದ್ರೆ ಗಂಡ ಸಾಯಬಾರದು, ತಂದೆ ಸಾಯಬಾರದು[...] ಅಂತ ಕಾನೂನು ಇದ್ದಾ. ಅಂತೋರು ಒಂದು ಗ್ಯಾಗರೆದಾ[...] ಮನುಷ್ಯನಾದೋರು ಇಲ್ಲ ಅನ್ನ ಕಾಯ್ತದಾ. ಸೋದರಿ[...] ಅಂತಲ್ಲರೀ ಸೈಟು ಕೊಟ್ಟಿರೋದು, ವಿಧವೆ ಅಂತಾವ[...] ಸೋದರಳಿಯ ಅಂತ ಅಲ್ಲ ಪಾಪ ತಂದದಿಲ್ಲೋನು[...] ಅಂತಾವ. ನಿಮ್ಮ ಲೆಕ್ಕ ನೋಡಿದ್ರೆ ಗಂಡ ಸತ್ತಿರೋದು[...] ತಂದೆ ಸತ್ತಿರೋದು ಅವರ್ದ್ಕೋತೇನೆ ಸಾಯಬೇಕಿತ್ತು ಅನ್ನೋ[...] ಹಂಗದೆ. ಅವರ್ದು ಹಾಳಾಗ್ಲಿರೀ, ಇನ್ನೂ ಕೆಲವ[...] ಸಂಬಂಧಿಕರಿಗೆ ಹಂಚದ್ರಲ್ಲ ಇದಕ್ಕೇನಂತೀರಿ ಅಂತ ಕೇಳ್ತವೆ[...] ಅವ್ಕೆ ಸಂಬಂಧದ ಬಗ್ಗೆ ಸರಿಯಾದ ತಿಳಿವಳಿಕೆ ಇಲ್ಲ[...] ಅದು ಒಂದು ತರಹ ಗರಿಕೆ ಬೇರು ಇದ್ದಂಗೆ. ತಡುಕ[...] ಹೋದ್ರೆ ಲಿಂಗಾಯಿತರ್ಗೆಲ್ಲ ಒಂದಲ್ಲ ಒಂದು ಕಡೆ ನೆಂಟುಸ್ತ[...] ಇರ್ತದೆ. ಹಿಂಗಾಗಿ ಸಂಬಂಧಿಕರಿಗೆ ಹಂಚವ್ರೆ ಅನ್ನೊ ಮಾತ[...] ಒಪ್ಪೋಗಾಗಕಿಲ್ಲ ಬುಡಿ. ಇದೆಲ್ಲ ಹೇಳಿದ್ರೆ ಜಾತಸ್ತರಿಗೆ[...] ಕೊಟ್ಟಿರೋದು ನ್ಯಾಯವಾ ಅನ್ನೊ ಪಾಯಿಂಟ ಹಾಕ್ತಾರೆ[...] ಅಲ್ಲರೀ ಅವರು ಯಡ್ಯೂರಪ್ನೋರ ಹತ್ತಿರ ಹೋದ್ರು[...] ಕಷ್ಟ ತೋಡಿಕೊಂಡ್ರು. ಅವರ ಪಡ್ತಿರೋನೋವ[...] ನೋಡಲಾರದೆ ಕೊಟ್ಟವ್ರೆ. ಬ್ಯಾರೆಯೋರು ಹಿಂಗೆ ಮಾಡಿದ್ರೆ[...] ಅವರ್ಗೂ ಕೊಡ್ತಿದ್ರೋ ಏನೋ......!

# ಧರ್ಮಸ್ಥಳದ ಧಾರ್ಮಿಕ ದಂಧೆಕೋರರಿಗೇಕೆ ರಿಯಾಯಿತಿ?

ಜುಲೈ 6, 2011ರ ಸಂಚಿಕೆಯಲ್ಲಿ ಪ್ರಕಟಗೊಂಡ 'ಧಾರ್ಮಿಕ ದಂಧೆಕೋರರು' ಎಂಬ ಲೇಖನದ ಅಗತ್ಯ ಬಹಳವಿತ್ತು, ಜನರೆಲ್ಲ ಬೌದ್ಧಿಕವಾಗಿ ದಿವಾಳಿಯಂಚಿಗೆ ಸಾಗುತ್ತಾ ನಾಡಿನ ತುಂಬ ಖಾದಿ, ಖಾವಿ ಮತ್ತು ಖಾಕಿಗಳು ರಣಕೇಕೆ ಹಾಕಿ ಮೆರೆಯುತ್ತಿರುವುದನ್ನು ಕಣ್ಣು ಬಿಟ್ಟುಕೊಂಡು ಮೂಕರಾಗಿ ನೋಡುತ್ತಾ ಕೂರುವುದನ್ನು ಬಿಟ್ಟರೆ ಬೇರೇನೂ ನಮ್ಮಿಂದ ಮಾಡಲು ಸಾಧ್ಯವಿಲ್ಲ ಎಂಬ ಹತಾಶೆಯ ಮನೋಭಾವ ತಲುಪಿದ್ದಾರೆ. ಮಾತ್ರವಲ್ಲ, ಇನ್ಯಾರೋ ನಮ್ಮನ್ನು ಉದ್ಧಾರ ಮಾಡಲು ಇಂದಲ್ಲ ನಾಳೆ ಬಂದೇ ಬರುತ್ತಾರೆ ಎಂಬ ಭಗವದ್ಗೀತೆಯ ಹಸಿ ಸುಳ್ಳನ್ನು ನಿಜವೆಂದು ನಂಬಿ ಕೂತಿದ್ದಾರೆ. ಇಂತಹ ಮಂದಿಗೆ ಕೊನೆ ಪಕ್ಷ ನಿಮ್ಮ ಸುತ್ತ ಇಂತಹ ವಂಚಕರಿದ್ದಾರೆ ಎಂದು ಹೇಳುವುದಕ್ಕಾದರೂ ಇಂತಹ ವರದಿಯ ಅಗತ್ಯವಿತ್ತು.

ಆದರೆ ಇದನ್ನು ಕುರಿತು ಬರೆಯುವಾಗ ಮೊನ್ನೆ ಮೊನ್ನೆ ಕರ್ನಾಟಕ ರಾಜಕೀಯದ ಇತಿಹಾಸದಲ್ಲೇ ಕಂಡುಕೇಳರಿಯದಂತಹ ಒಂದು ವಿಚಿತ್ರ ಘಟನೆ ಕುರಿತು ಆ ಸಂಚಿಕೆಯಲ್ಲಿ ಪ್ರಕಟಗೊಳ್ಳಲಿಲ್ಲ. ಅದೇನೆಂದರೆ, ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ಎಂಬ ಪ್ರಹಸನ ಕುರಿತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದನ್ನು ಪರಮೋಚ್ಚ ಸ್ಥಾನವೆಂದು ಕರೆಯುತ್ತೇವೆಯೋ ಅಂತಹ ಸ್ಥಾನಮಾನಗಳನ್ನು ಒಯ್ದು ಯಾವುದೋ ಧಾರ್ಮಿಕ ಕ್ಷೇತ್ರದ ವ್ಯಕ್ತಿಯ ಪದತಲದಲ್ಲಿ ಇಟ್ಟರಲ್ಲ, ಪ್ರಜಾಪ್ರಭುತ್ವದಲ್ಲಿ ಇದಕ್ಕಿಂತ ಬಹುದೊಡ್ಡ ಆತ್ಮವಂಚನೆ ಮತ್ತೆಲ್ಲಿದೆ?

ಬಿ.ಎಸ್.ಯಡಿಯೂರಪ್ಪ ಮತ್ತು ಎಚ್.ಡಿ.ಕುಮಾರಸ್ವಾಮಿ – ಇಬ್ಬರೂ ಕಳ್ಳರೇ, ವಂಚಕರೇ ಮತ್ತು ಸುಳ್ಳುಗಾರರೇ. ಅವರಿಬ್ಬರು ತಮ್ಮ ಸಾಚಾತನವನ್ನು ಸಾಬೀತುಪಡಿಸಲು ಆಯ್ದುಕೊಂಡಿದ್ದೂ ಇವರ ಮನಃಸ್ಥಿತಿಗೆ ಸೂಕ್ತವಾದ ಸ್ಥಳವನ್ನೆ ಅಲ್ಲವೇ?

ಸಾಯಿಬಾಬಾ, ರಾಮದೇವ್, ರವಿಶಂಕರ್, ಮಾತಾ ಅಮೃತಾನಂದಮಯೀ ತರಹದ 'ಧಾರ್ಮಿಕ ದಂಧೆಕೋರರ' ಪಟ್ಟಿಯಲ್ಲಿ ದಾಖಲಾಗಬೇಕಾದ ಮತ್ತೊಂದು ಹೆಸರೇ ಧರ್ಮಸ್ಥಳದ ನಡೆದಾಡುವ ಮಂಜುನಾಥನೆಂದು ಹೇಳಿಕೊಳ್ಳುವ ಶ್ರೀ ವಿರೇಂದ್ರ ಹೆಗ್ಗಡೆ. ಏಕೆ ಇಂತಹ ಮಹತ್ವದ ಶಕ್ತಿ ಕೇಂದ್ರದ ಬಗ್ಗೆ ಪತ್ರಿಕೆ ಮರೆತಿತೋ ಅಥವಾ ರಿಯಾಯಿತಿ ನೀಡಿತೋ ಗೊತ್ತಾಗುತ್ತಿಲ್ಲ, ಇಂದು ಈ ದೇಶದ ಕೆಲವೇ ಕೆಲವು ದೊಡ್ಡ ಪ್ರಮಾಣದ ಆದಾಯ ಪಡೆಯುತ್ತಿರುವ ದೇವಾಲಯಗಳಲ್ಲಿ ಮಂಜುನಾಥನ ಸನ್ನಿಧಿಯೂ ಒಂದು. ಅಂತಹ ಒಂದು ಸನ್ನಿಧಿಯಲ್ಲಿ ಬಂದು ಸೇರುವ ಭಕ್ತರ ಹಣ ಎಷ್ಟು? ಪ್ರತಿ ದಿನ ಬರುವ ಆದಾಯ ಮತ್ತು ಖರ್ಚಾಗುವ ಮೊತ್ತವೆಷ್ಟು ಎಂಬುದನ್ನು ಸರ್ಕಾರಕ್ಕಲ್ಲದಿದ್ದರೂ ಭಕ್ತರಿಗಾದರೂ ಉತ್ತರ ಹೇಳುವ ನೇರವಂತಿಕೆ ಇಲ್ಲವೆಂದ ಮೇಲೆ ಅವರು ದೇವರಾಗಲು ಹೇಗೆ ಸಾಧ್ಯ?

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.

ಇವತ್ತು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಗೆ ಹಲವು ಪ್ರಶ್ನೆಗಳನ್ನು ಕೇಳಬೇಕಾಗಿದೆ:

* ಮಂಜುನಾಥನ ಸನ್ನಿಧಿಯಲ್ಲಿ ಇಲ್ಲಿಯವರೆಗೆ ಯಾವುದೇ ಯಾವೊಬ್ಬ ರಾಜಕಾರಣಿಯ ಕಪ್ಪು ಹಣವನ್ನು ಇಟ್ಟು ರಕ್ಷಣೆ ಮಾಡಿಕೊಟ್ಟಿಲ್ಲ


* ತೆರಿಗೆ ವಂಚಿಸಲು ಯಾರಿಗೂ ಸಹಕರಿಸಿಲ್ಲ

* ಮಂಜುನಾಥನ ಹಣವನ್ನು ಬಡ್ಡಿ ವ್ಯವಹಾರಕ್ಕೆ ಕೊಟ್ಟಿಲ್ಲ

* ಅಪಾರ ಹಿಂದೂ ಭಕ್ತರ ದುಡ್ಡನ್ನು ಜೈನರ ಉದ್ಧಾರಕ್ಕೆ ಮಾತ್ರ ಬಳಸಿಕೊಂಡಿಲ್ಲ.

* ಧರ್ಮಸ್ಥಳದ ಸುತ್ತಮುತ್ತಲ ವ್ಯಾಪ್ತಿಯಲ್ಲಿ ಪ್ರಜಾಪ್ರಭುತ್ವವಿದೆಯೇ ಹೊರತು ಪಾಳೆಗಾರಿಕೆ ಪದ್ಧತಿ ಅಲ್ಲ...

.. ಹೀಗೆ ವೀರೇಂದ್ರ ಹೆಗ್ಗಡೆಯವರೇ ಮಂಜುನಾಥನ ಮುಂದೆ ಆಣೆಪ್ರಮಾಣ ಮಾಡಲು ಸಿದ್ಧರಿದ್ದಾರೆಯೇ?!





ಧರ್ಮದ ಅಮಲಿನಲ್ಲಿ ತೇಲುತ್ತಿರುವ ಮಂದಿಗೆ ಇದ್ಯಾವುದೂ ಅಪರಾಧವೆಂಬಂತೆ ಕಾಣದಿರಬಹುದು. ಆದರೆ ದಿನನಿತ್ಯ ಸಾವಿರಾರು ಜನರಿಗೆ ಪ್ರವಚನ ಮಾಡುವ ಹೆಗ್ಗಡೆಯವರು ಮೊದಲು ತಮ್ಮ ಕೈಬಾಯಿ ಶುದ್ಧವಾಗಿಟ್ಟುಕೊಂಡಿರಬೇಕಲ್ಲವೇ?

ಅದೆಲ್ಲ ಇರಲಿ, ಧಾರ್ಮಿಕ ಕ್ಷೇತ್ರದ ಲಂಪಟರ ಮುಖವಾಡ ಕಳಚಿದ್ದಕ್ಕೆ 'ಲಂಕೇಶ್' ವಾರ ಪತ್ರಿಕೆಗೆ ಧನ್ಯವಾದಗಳು.

**- ಮಂಜಣ್ಣ, ಸೊರಬ**

ನಮ್ಮ ದೇಶದಲ್ಲಿಂದು ಭ್ರಷ್ಟಾಚಾರ ಎಲ್ಲ ಕ್ಷೇತ್ರಗಳನ್ನು ಬೃಹತ್ ಪ್ರಮಾಣದಲ್ಲಿ ವ್ಯಾಪಿಸಿದೆ. ಅಣ್ಣಾ ಹಜಾರೆ ಅವರು ಭ್ರಷ್ಟಾಚಾರವನ್ನು ನಿಗ್ರಹಿಸಲು ಲೋಕಪಾಲ ಪ್ರಾಧಿಕಾರವೊಂದನ್ನು ಸ್ಥಾಪಿಸುವಂತೆ ಆಗ್ರಹಿಸುವ ಚಳವಳಿಯನ್ನು ಸಂಘಟಿಸಿದರು ಮತ್ತು ಅದಕ್ಕೆ ವ್ಯಾಪಕ ಸಾರ್ವತ್ರಿಕ ಬೆಂಬಲವೂ ವ್ಯಕ್ತವಾಯಿತು. ಚಳವಳಿಯ ಗಂಭೀರತೆಯನ್ನು ಕಂಡುಕೊಂಡ ಸರಕಾರವು ಹಜಾರೆಯವರೊಳಗೊಂಡು ಸರಕಾರಿ ಮತ್ತು ಗಣ್ಯ ನಾಗರಿಕರ ಒಂದು ಸಮಿತಿಯನ್ನು ರಚಿಸಿತು ಮತ್ತು ಆ ಸಮಿತಿ ರಚಿಸಿದ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸುವುದಾಗಿ ಭರವಸೆಯನ್ನೂ ನೀಡಿತು.




# ಉಪೇಂದ್ರನ ಶ್ರೀಮತಿಗೆ ಸಂಕಟ!

ಅಕ್ಷಯ್‌ಕುಮಾರ್ ಮತ್ತು ಕರೀನಾ ಕಪೂರ್ ನಟಿಸಿದ್ದ 'ಐತ್ರಾಜ್' ಸಿನಿಮಾದ ರಿಮೇಕ್ ಆದ 'ಶ್ರೀಮತಿ' ಚಿತ್ರದ ಮುಖ್ಯ ಪಾತ್ರಕ್ಕೆ ಸೆಲಿನಾ ಜೇಟ್ಲಿ ಎಂಬ ಬಾಲಿವುಡ್ ಬೆಡಗಿಯನ್ನು ಆಯ್ಕೆ ಮಾಡಲಾಯಿತು. ಇನ್ನೊಂದು ಪಾತ್ರ ಉಪ್ಪಿ ಪತ್ನಿ ಪ್ರಿಯಾಂಕಾಗೆ ಲಭಿಸಿತು.

...ಆಫ್ಟರ್ ಎ ಲಾಂಗ್ ಟೈಂ ಉಪೇಂದ್ರ ಮತ್ತು ...ಯಾಂಕಾ ನಟಿಸಿರುವ 'ಶ್ರೀಮತಿ' ಸಿನಿಮಾ ...ಡುಗಡೆಯಾಗುತ್ತಿದೆ. ಇವರಿಬ್ಬರು ಮದುವೆಗೆ ...ಂಚೆ 'ಎಚ್‌ಟುಓ' ಚಿತ್ರದಲ್ಲಿ ಹಸಿಬಿಸಿಯಾಗಿ ...ಸಿಕೊಂಡಿದ್ದರು. ಮದುವೆಯ ನಂತರ ಈ ...ೋಡಿ ತೆರೆಯ ಮೇಲೆ ಒಟ್ಟಿಗೇ ...ಸುತ್ತಿರುವುದು ಇದೇ ಚಿತ್ರದಲ್ಲಿ. ಈ ಚಿತ್ರದ ...ದು ವಿಶೇಷತೆ ಯಾವುದೆಂದರೆ ಉಪ್ಪಿ ಮೊದಲ ...ರಿಗೆ ಗಡ್ಡ ಮೀಸೆ ತೆಗೆದು ವಿಭಿನ್ನ ಗೆಟಪ್ಪಿನಲ್ಲಿ ...ಸಿಕೊಂಡಿರುವುದು.

ಈ ಸಿನಿಮಾ ಯಾವತ್ತೋ ...ಡುಗಡೆಯಾಗಬೇಕಿತ್ತು. ಆದರೆ ...ರಂಭದ ದಿನದಿಂದಲೂ ...ವತ್ತಿನ ತನಕ 'ಶ್ರೀಮತಿ'ಗೆ ...ದಲ್ಲ ಒಂದು ರೀತಿಯ ...ಆತಂಕಗಳು ...ದುರಾಗುತ್ತಲೇ ಇವೆ.

...ಆಂಧ್ರದ ವೇಮಾ ರೆಡ್ಡಿ ...ಬ ನಿರ್ಮಾಪಕ ಈ ...ಮಾವನ್ನು ಮೊದಲಿಗೆ ...ರಂಭಿಸಿದರು. ಹಾಗೆ ...ೀಡಿದರೆ 'ಸೂಪರ್' ...ರಂಭಿಸುವುದಕ್ಕೆ ಮುಂಚೆಯೇ ...ೀಮತಿ' ತೆರೆಗೆ ...ಬೇಕಿತ್ತು. ಹಿಂದಿಯಲ್ಲಿ




ವೇಮಾರೆಡ್ಡಿ ಕಳುಹಿಸಿದ ಲೀಗಲ್ ನೋಟೀಸ್

ಸಿನಿಮಾ ನಿರ್ದೇಶನದಿಂದ ಬರೋಬ್ಬರಿ ಹತ್ತು ವರ್ಷಗಳ ಕಾಲ ದೂರ ಸರಿದಿರುವ ಉಪ್ಪಿ ಮತ್ತೆ ತಾನು ಡೈರೆಕ್ಷನ್‌ನಲ್ಲಿ ಹಿಡಿತ ಪಡೆಯಬೇಕೆಂಬ ಮತ್ತು ತಾಂತ್ರಿಕವಾಗಿ ಅಪ್‌ಡೇಟ್ ಆಗಬೇಕೆಂಬ ಕಾರಣಗಳಿಂದ 'ಶ್ರೀಮತಿ'ಯನ್ನು ಖುದ್ದು ತಾವೇ ನಿರ್ದೇಶಿಸಲು ಮುಂದಾದರು. ಆದರೆ ತಾನೇ ಡೈರೆಕ್ಟರ್ ಎಂದು ಅನೌನ್ಸ್ ಮಾಡಿಕೊಳ್ಳಲಿಲ್ಲ. ಬದಲಾಗಿ ಕನ್ನಡವೇ ಬಾರದ ಎಸ್.ಎಸ್.ಸಮೀರ್ ಎಂಬ ಆಂಧ್ರದವನನ್ನು ಜೊತೆಯಲ್ಲಿಟ್ಟುಕೊಂಡು ಆತನೇ ಸಿನಿಮಾದ ನಿರ್ದೇಶಕ ಎಂದು ಅನೌನ್ಸ್ ಮಾಡಿದರು ಉಪ್ಪಿ. ಆದರೆ ಪ್ರತಿಯೊಂದು ದೃಶ್ಯವನ್ನೂ ಸ್ವತಃ ಉಪ್ಪಿಯೇ ಕಂಪೋಸ್ ಮಾಡುತ್ತಿದ್ದರು. ಪುರುಷೋತ್ತಮ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ಸೈಲೆಂಟಾಗಿ ಸೈಡಲ್ಲಿ ನಿಲ್ಲುತ್ತಿದ್ದ. ಹಾಗೆ ನಿಂತೂ ನಿಂತೂ ಸಾಕಾದ್ದರಿಂದ ಪುರುಷೋತ್ತಮ್ ಸಿನಿಮಾ ಮುಗಿಯುವ ಹೊತ್ತಿಗೇ 'ಶ್ರೀಮತಿ'ಗೆ ತಲಾಖ್ ಕೊಟ್ಟು ಆಂಧ್ರಕ್ಕೆ ಓಡಿಹೋದ. ಆನಂತರ ಆತ ಮತ್ತೆ ಕಾಣಿಸಿಕೊಂಡಿದ್ದು ಅರ್ಜುನ್ ಸರ್ಜಾ ನಟಿಸುತ್ತಿರುವ 'ಕಾಂಟ್ರಾಕ್ಟ್' ಎಂಬ ತ್ರಿಭಾಷಾ ಸಿನೆಮಾದ ಅಂಗಳದಲ್ಲಿ. ಪುರುಷೋತ್ತಮ ಕೈಕೊಟ್ಟು ಹೋದ ಮೇಲೆ 'ಶ್ರೀಮತಿ' ಚಿತ್ರಕ್ಕೆ ಅಸಿಸ್ಟೆಂಟ್ ಆಗಿದ್ದ ಜಿ. ರವಿ ಎಂಬಾತನನ್ನೇ ನಿರ್ದೇಶಕ ಎಂದು ಟೈಟಲ್ ಕಾರ್ಡ್ ಬರೆಸಿದರು ಉಪ್ಪಿ.

ಈ ಮಧ್ಯೆ ವೇಮಾ ರೆಡ್ಡಿ ಆರಂಭಿಸಿದ್ದ ಈ ಚಿತ್ರ ಉಪೇಂದ್ರ ಮತ್ತು ಸೆಲಿನಾ ಜೇಟ್ಲಿ ಎಂಬ ಎರಡು ಬಿಳಿ ಆನೆಗಳ ಕಾರಣಕ್ಕೆ ಅರ್ಧ ಮುಗಿಯುವ ಹೊತ್ತಿಗೆ ಆತನ ಬಳಿ ಬಜೆಟ್ಟು ಖಾಲಿಯಾಗಿಹೋಯಿತು. ಆಗ ನಿರ್ಮಾಪಕ ಶಂಕರ್‌ಗೌಡ ಆ ಚಿತ್ರವನ್ನು ತನ್ನ ಹೆಸರಿಗೆ ಬರೆಸಿಕೊಂಡು ಚಿತ್ರೀಕರಣ ಮುಂದುವರೆಸಿದರು. ಅಷ್ಟೊತ್ತಿಗೆ ಉಪೇಂದ್ರ 'ಸೂಪರ್' ಆರಂಭಿಸಿದ್ದರಿಂದ 'ಶ್ರೀಮತಿ' ಮತ್ತಷ್ಟು ವಿಳಂಬವಾಯಿತು. ಈ ಎಲ್ಲ ಅಡೆತಡೆಗಳ ನಡುವೆಯೂ ಬೇನಾಮಿ ಹೆಸರಿನಲ್ಲಿ ಉಪ್ಪಿಯೇ ನಿರ್ದೇಶಿಸಿರುವ 'ಶ್ರೀಮತಿ' ಈ ವಾರ ತೆರೆಗೆ ಬರಲು ಸಜ್ಜಾಗಿದೆ.

ಆದರೆ ಇದೇ ಹೊತ್ತಿಗೆ ಈ ಸಿನಿಮಾದ ಮೊದಲ ನಿರ್ಮಾಪಕ ವೇಮಾ ರೆಡ್ಡಿ ಆಂಧ್ರಾ





ಹೈಕೋರ್ಟ್‌ನಿಂದ ಈಗಿನ ನಿರ್ಮಾಪಕ ಶಂಕರ್ ಗೌಡರಿಗೆ 'ನನಗೆ ಬರಬೇಕಿದ್ದ ದುಡ್ಡು ಇನ್ನೂ ಸಂಪೂರ್ಣವಾಗಿ ಕೈಸೇರಿಲ್ಲ' ಎಂದು ಲೀಗಲ್ ನೋಟಿಸ್ ರವಾನಿಸಿದ್ದಾನೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೂ ಇದರ ಪ್ರತಿಯನ್ನು ಲಗತ್ತಿಸಿದ್ದಾನೆ.

ಬಿಡುಗಡೆಯ ಹೊಸ್ತಿಲಲ್ಲಿ ನಿಂತಿರುವ 'ಶ್ರೀಮತಿ'ಯ ಈಗಿನ ನಿರ್ಮಾಪಕ ಶಂಕರ್‌ಗೌಡ ವೇಮಾ ರೆಡ್ಡಿಗೆ ದುಡ್ಡು ಕೊಡದಿದ್ದರೆ ಬಿಡುಗಡೆಯ ದಿನವೇ ಪ್ರದರ್ಶನ ರದ್ದಾಗುವುದು ಗ್ಯಾರಂಟಿ. ಹೀಗಾಗಿ ವಾಣಿಜ್ಯ ಮಂಡಳಿ ಮಧ್ಯಸ್ಥಿಕೆಯಲ್ಲಿ ವೇಮಾ ರೆಡ್ಡಿಗೆ ಒಂದು ಕೋಟಿ ರೂಪಾಯಿಗಳನ್ನು ಶಂಕರ್‌ಗೌಡರಿಂದ ಸಂದಾಯ ಮಾಡಿಸುವ ಮಾತುಕತೆ ನಡೆಯುತ್ತಿದೆ.

ಪಾಪ ಈ 'ಶ್ರೀಮತಿ'ಗೆ ಬಹಳಷ್ಟು ಪುರುಷರು 'ಕಾಟ'ಕೊಟ್ಟಿರುವುದಂತೂ ಸತ್ಯ.

• ಅರುಣ್



# ಸುಬ್ಬಾಶಾಸ್ತ್ರಿ ಸುಸ್ತುಬಿದ್ದ!

ಕಳೆದ ವಾರ 'ಹಾಯ್ ಸುಬ್ಬಾಶಾಸ್ತ್ರಿ' ಎಂಬ ಸಿನಿಮಾವೊಂದು ದಿಢೀರ್ ಮುಹೂರ್ತ ಆಚರಿಸಿಕೊಂಡಿತು. ಇದರ ನಿರ್ದೇಶಕ ಬಿ.ರಾಮಮೂರ್ತಿ. 'ಪಯಣ' ಖ್ಯಾತಿಯ ರವಿಶಂಕರ್ ಇದರ ಹೀರೋ, ಹೀರೋಯಿನ್ ಸಂಗೀತಾ ಶೆಟ್ಟಿ. ಮೊದಲ ದಿನ ರಾಜರಾಜೇಶ್ವರಿ ನಗರದಲ್ಲಿ ಚಿತ್ರೀಕರಣ ನಡೆಯಿತು. ಆದರೆ ಎರಡನೇ ದಿನ ಶೂಟಿಂಗ್ ಸ್ಪಾಟಿನಲ್ಲಿ ಯೂನಿಟ್ ಇದ್ದರೂ ಯಾವ ಕಲಾವಿದರೂ ಹಾಜರಿರಲಿಲ್ಲ. ಯಾಕೆಂದರೆ, ಈ ಚಿತ್ರದ ನಿರ್ಮಾಪಕ ನಳಿನ್ ಕುಮಾರ್ ತಮ್ಮ ಶ್ರಮಕ್ಕೆ ದುಡ್ಡು ಕೊಡುತ್ತಾನೆ ಎಂಬ ಸಣ್ಣ ಸುಳಿವೂ ಕೂಡಾ ಆ ಚಿತ್ರದ ಕಲಾವಿದರಿಗೆ ಇರಲಿಲ್ಲ. ಇದೆಲ್ಲದರ ಮಧ್ಯೆಯೇ ನಿರ್ಮಾಪಕ ನಳಿನ್ ಕುಮಾರ್‌ಗೂ ಡೈರೆಕ್ಟರ್ ರಾಮಮೂರ್ತಿಗೂ ಮಾರಾಮಾರಿ ಜಗಳ ನಡೆದು ಸಿನಿಮಾ ಕ್ಯಾನ್ಸಲ್ ಆಗಿದೆಯಂತೆ

ನಳಿನ್ ಕುಮಾರ್ ಗಾಂಧಿನಗರದ ಕ್ರಿಮಿಗಳಲ್ಲಿ ಒಬ್ಬ. ಸಿನಿಮಾ ನಿರ್ಮಾಪಕರಿಗೆ ಇಪ್ಪತ್ತು ಪರ್ಸೆಂಟ್ ಮೀಟರ್ ಬಡ್ಡಿ ಮೇಲೆ ಸಾಲ ನೀಡಿ ಅವರನ್ನು ಪೀಡಿಸುವುದು ನಳಿನ್ ಕುಮಾರನ ನಿತ್ಯ ಕಾಯಕ. ಈ ಕಾರಣಕ್ಕೇ ಈತನನ್ನು ಜೂನಿಯರ್ ಆಟೋ ಮೋಹನ ಎಂದೂ ಗಾಂಧಿನಗರಿಗಳು ಕರೆಯುತ್ತಾರೆ. ಇಂಥ ನಳಿನ್ ಆರ್ಟಿಸ್ಟುಗಳಿಗೆ ಆಕಾಶ ತೋರಿಸಿ ಹಣವನ್ನೇ ಖರ್ಚು ಮಾಡದೆ ಸಿನಿಮಾ ಮಾಡುವ ಸ್ಕೆಚ್ ಹಾಕಿಕೊಂಡಿದ್ದ. ಆತನ ಪ್ಲಾನ್ ತಿಳಿದ ಚಿತ್ರತಂಡದ ಎಲ್ಲ ಸದಸ್ಯರೂ ವಿಘ್ನಗೊಂಡಿದ್ದಾರೆ.

ಪರಿಣಾಮವಾಗಿ 'ಸುಬ್ಬಾಶಾಸ್ತ್ರಿ' ಆರಂಭಕ್ಕೂ ಮುನ್ನವೇ ಉಸಿರು ನಿಲ್ಲಿಸಿದ್ದಾನೆ!

...ರೆ ಈಗ ಆ ಸಮಿತಿಯೊಳಗೆಯೇ ಮುಖ್ಯ ಪ್ರಶ್ನೆಗಳಿಗೆ ಒಮ್ಮತ ಮೂಡದೆ ...ಸೂದೆಯ ಉದ್ದೇಶವೇ ಮೂಲೆಗುಂಪಾಗುವಂತೆ ತೋರುತ್ತಿದೆ. ವಿಭಿನ್ನ ...ಳಿಕೆಗಳು ಕೇಳಿಬರುತ್ತಿವೆ. ಅಲ್ಲದೆ ಅಣ್ಣಾ ಹಜಾರೆಯವರು ಸತ್ಯಾಗ್ರಹವನ್ನು ...ರಾರಂಭಿಸುವುದು ಖಚಿತವೆಂಬ ಹೇಳಿಕೆಯು ನಮ್ಮೆಲ್ಲರ ದುಗುಡಕ್ಕೆ ...ಣವಾಗಿದೆ. ಹಜಾರೆಯವರು ಆ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳನ್ನು ...ರ್ಕಿಸಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಮುಂದಾದುದನ್ನು ನಾವು ...ತಿಸುತ್ತೇವೆ. ಎಡಪಕ್ಷಗಳು ಈಗಾಗಲೇ ಅವರಿಗೆ ಬೆಂಬಲವನ್ನು ಸೂಚಿಸಿವೆ. ...ಅಣ್ಣಾ ಹಜಾರೆಯವರ ಹಿಂದಿನ ಚಳವಳಿಯಲ್ಲಿ ರಾಮದೇವ್ ಎಂಬ ...ಗ ಗುರು ಎಂದುಕೊಳ್ಳುವ ವ್ಯಕ್ತಿಯು ನುಸುಳಿ ಚಳವಳಿಯ ದಿಕ್ಕುತಪ್ಪಿಸುವ ...ನ್ನು ರೂಪಿಸಿದ್ದು ಬಹಿರಂಗವಾಗಿತ್ತು. ಹಜಾರೆ ಅವರ ಚಳವಳಿಯಲ್ಲಿ ...ಗೆ ಪ್ರಾಮುಖ್ಯತೆ ದೊರಕದ್ದುದನ್ನು ಕಂಡು ಅವರನ್ನು ಪ್ರಾಯೋಜಿಸಿದ ...ವು ಶಕ್ತಿಗಳು ವಿದೇಶೀ ಬ್ಯಾಂಕುಗಳಲ್ಲಿ ಜಮೆಯಾಗಿರುವ ಕಪ್ಪು ಹಣವನ್ನು ...ಸ್ ತರುವುದಕ್ಕೆ ಪ್ರಾಮುಖ್ಯತೆ ಕೊಟ್ಟು ಅದನ್ನು ಮುಟ್ಟುಗೋಲು ...ವಶಪಡಿಸಬೇಕೆಂಬ ಬೇಡಿಕೆಯನ್ನಿಟ್ಟು ರಾಮದೇವ್‌ನ ನೇತೃತ್ವದಲ್ಲಿ ...ಯೇ ಒಂದು ಚಳವಳಿಯನ್ನು ಪ್ರಾರಂಭಿಸಿದರು. ಅದರ ಪ್ರಹಸನವನ್ನು ...ಕಂಡಿದ್ದೇವೆ. ರಾಮಲೀಲಾ ಮೈದಾನದಲ್ಲಿ ನೆರೆದಿದ್ದ ಜನರನ್ನು ಚದುರಿಸಲು ...ಧ್ಯರಾತ್ರಿಯಲ್ಲಿ ನಡೆಸಿದ ಪೊಲೀಸ್ ಕಾರ್ಯಾಚರಣೆಯು ...ಡನೀಯವಾದರೂ, ಆ ಚಳವಳಿಯ ಹಿಂದೆ ರೂಪಿತವಾದ ವಿನಾಶಕಾರಿ ...ತು ನಮ್ಮೆಲ್ಲರನ್ನು ದಂಗುಬಡಿಸಿತು. ಆ ಸಂದರ್ಭದಲ್ಲಿ ರಾಮದೇವ್ ...ಸಿದ ರೀತಿ, ಹೆಣ್ಣುವೇಷದಲ್ಲಿ ಪಲಾಯನಗೈದ ಅವರ ಹೇಡಿತನ ಮತ್ತು ...ನ್ನು ಮುಂದಿರಿಸಿ ಚಳವಳಿಯನ್ನು ರೂಪಿಸಿದ ಕೋಮುವಾದಿಗಳ ಮತ್ತು ...ಜ್ಯೋದ್ಯಮಿಗಳ ಸಂಚು ಅತ್ಯಂತ ವಿನಾಶಕಾರಿಯಾಗಿತ್ತು. ರಾಷ್ಟ್ರವ್ಯಾಪಿ ...ಜಕತೆಯನ್ನು ಉಂಟು ಮಾಡಿ ಅಧಿಕಾರವನ್ನು ಕಸಿದುಕೊಳ್ಳುವ ಹುನ್ನಾರ ...ದಲ್ಲಿ ಅಡಗಿದ್ದದ್ದು ಬಯಲಾಗಿತ್ತು.

...ಆದರೆ ರಾಮದೇವ್ ಅವರ ಪ್ರಹಸನಕ್ಕೂ ಹಜಾರೆಯವರ ಚಳವಳಿಗೂ ...ಳ ವ್ಯತ್ಯಾಸವಿದೆ. ಅವರಿಬ್ಬರ ಚಳವಳಿಗಳನ್ನು ತಳಕು ಹಾಕಕೂಡದು. ರಾಮದೇವ್ ಅವರು ವಾಣಿಜ್ಯೋದ್ಯಮಿಗಳ ಮತ್ತು ದುಷ್ಟ ಶಕ್ತಿಗಳ ಪ್ರತಿನಿಧಿಯಾದರೆ ಹಜಾರೆಯವರು ಜನಸಾಮಾನ್ಯರ ಪ್ರತಿನಿಧಿಯಾಗಿರುತ್ತಾರೆ. ಲೋಕಪಾಲ್ ಮಸೂದೆಯ ಸಮಿತಿಯಲ್ಲಿನ ಮುಖ್ಯ ಭಿನ್ನಾಭಿಪ್ರಾಯವು ಲೋಕಪಾಲರ ನೇಮಕ, ಅವರಿಗೆ ನೀಡುವ ಅಧಿಕಾರ ಮತ್ತು ಅವರ ನಿಯಂತ್ರಣದ ಬಗ್ಗೆ ಮತ್ತು ಅವರಿಗೆ ಈಗಿನ ಬೇಡಿಕೆಯಂತೆ ಅಧಿಕಾರ ನೀಡಿದರೆ ಅವರು ಭಸ್ಮಾಸುರನಂತೆ ಅನಿಯಂತ್ರರಾಗಿ ವಿನಾಶಕ್ಕೆ ದಾರಿಯಾದೀತು ಎಂಬ ಭೀತಿ ಕಾಡುವುದು ಸಹಜವಾಗಿದೆ. ಆದಕ್ಕೆ ನಾವು ಒಂದು ಸಲಹೆಯನ್ನು ಸೂಚಿಸಲು ಬಯಸುತ್ತೇವೆ.

ಲೋಕಪಾಲ ಸಂಸ್ಥೆಯನ್ನು ಕೇಂದ್ರ ಮಂತ್ರಿಮಂಡಲ (ಪ್ರಧಾನ ಮಂತ್ರಿ), ವಿರೋಧ ಪಕ್ಷದ ನಾಯಕ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಂಗ ಪೀಠವು ಜೊತೆಗೂಡಿ ರೂಪಿಸತಕ್ಕದ್ದು ಮತ್ತು ಲೋಕಪಾಲರನ್ನು ನೇಮಿಸುವ, ನಿಯಂತ್ರಿಸುವ ಮತ್ತು ಉಚ್ಚಾಟಿಸುವ ಅಧಿಕಾರವೂ ಅವರಿಗೇ ಇರಬೇಕು ಮತ್ತು ಇದನ್ನು ರಾಷ್ಟ್ರಾಧ್ಯಕ್ಷರ ಮೂಲಕ ಕಾರ್ಯಗತಗೊಳಿಸುವಂತಿರಬೇಕು. ರಾಷ್ಟ್ರಾಧ್ಯಕ್ಷರನ್ನು ಹೊರತುಪಡಿಸಿ ಕೇಂದ್ರ ಸರಕಾರದಿಂದ ಸಂಬಳ, ಗೌರವಧನ ಪಡೆಯುವ ಸರ್ವರನ್ನೂ ವಿಚಾರಣೆಗೊಳಪಡಿಸಿ ಸರ್ವೋಚ್ಚ ನ್ಯಾಯಾಲಯದ ಅಡಿಯಲ್ಲಿ ಬರುವ ಪ್ರತ್ಯೇಕ ನ್ಯಾಯಾಲಯದಲ್ಲಿ ದಾವೆಯನ್ನು ಹೂಡುವ ಪೂರ್ಣ ಅಧಿಕಾರ ಲೋಕಪಾಲರಿಗೆ ಇರಬೇಕು. ವಿಚಾರಣೆ ನಡೆಸಿ ಶಿಕ್ಷಿಸುವ ಅಧಿಕಾರ ನ್ಯಾಯಾಲಯಗಳಿಗೆ ಮಾತ್ರ ಇರಬೇಕು. ಇದರಿಂದಾಗಿ ಲೋಕಪಾಲ್ ಸಂಸ್ಥೆಯು ಸಂವಿಧಾನದ ರೂಪುರೇಷೆಗಳಿಗೆ ಹೊರತಾದುದು ಮತ್ತು ಅನಿಯಂತ್ರಿತವಾದುದು ಎಂಬ ಭೀತಿ ದೂರವಾಗುವುದಲ್ಲದೆ ಅದು ಖಂಡಿತವಾಗಿಯೂ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಲ್ಲುದು ಎಂಬುದು ನಮ್ಮ ನಂಬಿಕೆ.

- ಬಿ.ವಿ.ಕಕ್ಕಿಲಾಯ, ಮಾಜಿ ಸಂಸದರು, ಮಂಗಳೂರು

ಮೈಸೂರಿನ 'ರಿಯಲ್ ಎಸ್ಟೇಟ್ ದಂಧೆಯಲ್ಲಿ ಮಾಜಿ-ಹಾಲಿ ಖಾಕಿಗಳ ಕಾರುಬಾರು' ಎಂಬ ವರದಿಯ ಕೊನೆಯಲ್ಲಿ "ಯಾವುದೇ ಕ್ರಮ ಕೈಗೊಳ್ಳದೆ ಗೃಹಸಚಿವರು ತೆಪ್ಪಗಿರುವುದು ಹಲವಾರು ಗುಮಾನಿಗಳನ್ನು ಹುಟ್ಟಿಸುತ್ತದೆ" ಎಂದು ಬರೆದಿದ್ದೀರಿ. ಇಲ್ಲಿ ಹಲವಾರು ಗುಮಾನಿ ಹುಟ್ಟುತ್ತಿಲ್ಲ. ಹುಟ್ಟಿರುವುದು ಒಂದೇ ಗುಮಾನಿ. ಅದು ಜಾತಿ ಎಂಬ ಗುಮಾನಿ. ಕೆ. ಅಶೋಕ್‌ರವರ ಸ್ವಜಾತಿ ಪ್ರೀತಿಯ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಬಹುಪಾಲು ಜನ ಅಸಮಾಧಾನ ಹೊಂದಿರುವುದಂತೂ ಖಂಡಿತ ಸತ್ಯ. ಇದು ಜ್ವಾಲಾಮುಖಿಯಾಗಿ ಸ್ಫೋಟಗೊಳ್ಳುವುದಕ್ಕಿಂತ ಮುಂಚೆ ಈ ಸಮುದಾಯದ ಅಧಿಕಾರಿಗಳು, ರಾಜಕಾರಣಿಗಳು, ದೊಡ್ಡ ಹುದ್ದೆಯಲ್ಲಿರುವವರು ಹಾಗೂ ಶ್ರೀಮಂತರು ಇತರೆ ವರ್ಗದವರ ವಿಶ್ವಾಸ ಗಳಿಸಲು ಪ್ರಯತ್ನಿಸಲಿ ಎಂಬುದೇ ನನ್ನ ಹಾರೈಕೆ. ದಯವಿಟ್ಟು ಇದರ ಬಗ್ಗೆ ಈ ಸಮುದಾಯದ ಜನ ಯೋಚಿಸಬೇಕು. ಬರೀ ಹಣ-ಆಸ್ತಿ ಅಧಿಕಾರ ಮುಖ್ಯವಲ್ಲ, ಪ್ರೀತಿ ವಿಶ್ವಾಸ ಮುಖ್ಯ ಎಂಬುದನ್ನು ಅವರೆಲ್ಲ ಅರಿಯಲಿ.

-ನಂಜುಂಡಸ್ವಾಮಿ, ಮೈಸೂರು

ಚಲನಚಿತ್ರಗಳಲ್ಲಿ ನಾಯಕ ಮೊದಲು ಕೆಟ್ಟ ಕೆಲಸಗಳನ್ನು ಮಾಡಿ ಹಣ ಗಳಿಸುತ್ತಾನೆ. ನಂತರ ಅವನು ತಾನು ನಡೆಸುತ್ತಿರುವ ಅನಾಥಾಲಯಕ್ಕಾಗಿ ಈ ರೀತಿ ಹಣ ಗಳಿಸಿದ್ದು ಎಂದು ತೋರಿಸಿ ಪ್ರೇಕ್ಷಕರ ಅಭಿಮಾನ ಗಳಿಸುತ್ತಾನೆ. ಇಂತಹ ಕಥೆಯುಳ್ಳ ಹತ್ತಾರು ಸಿನಿಮಾಗಳು ಬಂದು ಹೋಗಿದೆ. ನಿಜ ಜೀವನದ ಅಪರಾಧಿಗಳೂ ಸಿಕ್ಕಿಬಿದ್ದಾಗ ತಾವು ಯಾವುದೋ ಘನ ಕಾರ್ಯಕ್ಕಾಗಿ ಹಣ ಹೊಂದಿಸಲು ಈ ಅಪರಾಧ ಮಾಡಿದ್ದು ಎಂದು ಸುಳ್ಳು ಕಥೆ ಕಟ್ಟಿ ಜನರ ಸಹಾನುಭೂತಿ ಗಳಿಸಲು ಪ್ರಯತ್ನಿಸುತ್ತಾರೆ. ಹುಣಸೂರಿನ ಜೋಡಿ ಕೊಲೆಗಾರರೂ ಕೆಎಫ್‌ಡಿಯ ಹೆಸರು ಬಳಸಿದ್ದು ಇದೇ ಕಾರಣಕ್ಕೆ.

ಭೂಗಳ್ಳರು, ಮರಳು ಮಾಫಿಯಾ, ಗಣಿ ಮಾಫಿಯಾ, ಶಿಕ್ಷಣ ಮಾಫಿಯಾದವರು ಒಂದಿಲ್ಲೊಂದು ರಾಜಕೀಯ ಪಕ್ಷದ ಸದಸ್ಯರಾಗಿ ಕಾನೂನಿನಿಂದ ರಕ್ಷಣೆ ಪಡೆಯುತ್ತಿದ್ದಾರೆ. ಕ್ರಿಮಿನಲ್‌ಗಳೆಲ್ಲಾ ಒಂದಿಲ್ಲೊಂದು ಸಂಘಟನೆಯ ಸದಸ್ಯರಾಗಿ ಗೌರವಯುತ ಮುಖವಾಡ ಧರಿಸಿರುತ್ತಾರೆ. ಧಾರ್ಮಿಕ ಸಂಘಟನೆಗಳು ಮತ್ತು ಭಾಷಾವಾರು, ಜಾತಿವಾರು ಸಂಘಟನೆಗಳಲ್ಲಿ ಇಂತಹವರು ತೂರಿಕೊಂಡಾಗ ಇತರರಿಗೆ ಗೊತ್ತಾಗುವುದಿಲ್ಲ. ಅವರು ಸಿಕ್ಕಿ ಬಿದ್ದಾಗಲೇ ನಿಜರೂಪ ಗೊತ್ತಾಗುವುದು ಹಾಗೂ ಸಂಘಟನೆಯ ಹೆಸರು ಹಾಳಾಗುವುದು.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 20-7-2011 RNI No. KARKAN2005



## ಜಯಕ್ಕನ ಮಗನ ವಿಜಯೀಭವ!

ದರ್ಶನ್, ಸುದೀಪ್‌ರಿಂದ ಪ್ರಾರಂಭವಾಗಿ ಮೊನ್ನೆ ಕಾಮಿಡಿ ಗಣೇಶನ ತನಕ ಎಲ್ಲ ಓಡುವ ಕುದುರೆಗಳೂ ಚಿತ್ರ ನಿರ್ಮಾಣದ ರುಚಿ ನೋಡಿದ್ದಾಯಿತು. ಈಗ ಬ್ಲಾಕ್ ಕೋಬ್ರಾ ವಿಜಯ್ ಕೂಡಾ ಸಿನಿಮಾ ನಿರ್ಮಾಣಕ್ಕೆ ಕೈಯಿಟ್ಟಿದ್ದಾರೆ. ವಿಜಯ್ ನಿರ್ಮಿಸಲು ಉದ್ದೇಶಿಸಿರುವ ಸಿನಿಮಾಕ್ಕೆ ಸದ್ಯ 'ಜಯಕ್ಕನ ಮಗ' ಎಂದು ಹೆಸರಿಡಲಾಗಿದೆ. ಈ ಚಿತ್ರವನ್ನು ಸೂರಿ ನಿರ್ದೇಶಿಸಬೇಕಿತ್ತಂತೆ. ಆದರೆ ಸೂರಿ ಪುನೀತ್‌ಗಾಗಿ 'ಅಣ್ಣಾ ಬಾಂಡ್' ಮತ್ತು ಶಿವಣ್ಣನಿಗೆ 'ಕಡ್ಡಿಪುಡಿ' ಸಿದ್ಧಮಾಡಿಕೊಡುವ ತನಕ ಸಿಕ್ಕಾಪಟ್ಟೆ ಬಿಜಿ. ಹೀಗಾಗಿ ತನ್ನ ಸಿನಿಮಾವನ್ನು ನಿರ್ದೇಶಿಸಲು ವಿಜಿ ತನ್ನ ಶಿಷ್ಯನೊಬ್ಬನನ್ನು ಸಿದ್ದ ಮಾಡಿದ್ದಾರೆ. 'ದುನಿಯಾ'ದಿಂದ ಹಿಡಿದು ಸೂರಿಯ ಎಲ್ಲ ಚಿತ್ರಗಳಲ್ಲೂ ಸಹಾಯಕನಾಗಿ ದುಡಿದಿರುವ ಗಡ್ಡಾ ವಿಜಿ ಎಂಬಾತನೇ 'ಜಯಕ್ಕನ ಮಗ'ನ ಲಗಾಮು ಹಿಡಿಯುತ್ತಿದ್ದಾರೆ.

ಈಗ 'ಜರಾಸಂಧ' ಮತ್ತು 'ಭೀಮಾತೀರ' ಚಿತ್ರಗಳಲ್ಲಿ ಬಿಜಿ ಆಗಿರುವ ವಿಜಯ್ ಆಷಾಢ ಮುಗಿಯುತ್ತಿದ್ದಂತೆಯೇ ತಮ್ಮ ಚಿತ್ರದ ಮುಹೂರ್ತ ಮಾಡಲಿದ್ದಾರೆ.



## ಮುತ್ತಿನ ರಾಷನಾ

ಕೊಡಗಿನ ಬೆಡಗಿಯರಾದ ಪ್ರೇಮ, ಡೈಸಿ ಬೋಪಣ್ಣ, ನಿಧಿ ಸುಬ್ಬಯ್ಯ.... ಮೊದಲಾದವರ ನಂತರ ಕೊಡಗಿನಿಂದ ಇನ್ನೊಬ್ಬ ಸುಂದರಿ ಗಾಂಧಿನಗರಕ್ಕೆ ಬಂದಿದ್ದಾಳೆ. ಆರಡಿ ಎತ್ತರದ ಬೊಗಸೆ ಕಂಗಳ ಆಕೆಯ ಹೆಸರು ರಾಷನಾ.

ಈಕೆ ನಟಿಸುತ್ತಿರುವ ಚಿತ್ರದ ಹೆಸರು 'ಮುತ್ತಿನಮಳೆ'. ಈಕೆ ಈ ಹಿಂದೆ 'ಬೆಸುಗೆ' ಎಂಬ ಚಿತ್ರದಲ್ಲಿ ನಟಿಸಿದ್ದರೂ ಅದಿನ್ನೂ ಸಂಪೂರ್ಣವಾಗಿಲ್ಲ. ಅನಿರೀಕ್ಷಿತವಾಗಿ ಬಂದ ಸಿನಿಮಾ ಆಫರ್‌ಗಳನ್ನು ಆಸೆ ಕಣ್ಣುಗಳಿಂದ ಸ್ವೀಕರಿಸುತ್ತಿರುವ ರಾಷನಾ ಈಗ ಸಿನಿಮಾಕ್ಕಾಗಿ ನೃತ್ಯ, ಸ್ವಿಮ್ಮಿಂಗ್, ಫೈಟಿಂಗ್ ಕಲಿಯಲು ಆರಂಭಿಸಿದ್ದಾಳೆ. ಅದರರ್ಥ ಆಕೆ ಕನ್ನಡ ಚಿತ್ರರಂಗದಲ್ಲಿ ಗಟ್ಟಿಯಾಗಿ ಕಾಲೂರಬೇಕೆಂದು ನಿರ್ಧರಿಸಿದಂತಿದೆ. ಈ ಚಿತ್ರದ ನಿರ್ದೇಶಕ ಮಂಜು ಯಾನೆ ಪ್ರಿಯಸಾಗರ್. ಈತ 'ಎಕ್ಸ್‌ಕ್ಯೂಸ್ ಮಿ' ಚಿತ್ರದಿಂದ ಬಹುತೇಕ ಎಲ್ಲಾ ಚಿತ್ರಗಳಲ್ಲಿ ಪ್ರೇಮ್‌ಗೆ ಸಹಾಯಕರಾಗಿ ದುಡಿದ ಅನುಭವ ಹೊಂದಿರುವವರು. ಅಷ್ಟೇ ಅಲ್ಲ, ಕೂಡ್ಲು ರಾಮಕೃಷ್ಣ, ಓಂಪ್ರಕಾಶ್ ಮೊದಲಾವರ ಜೊತೆಯೂ ಕೆಲಸ ಮಾಡಿರುವ ಪ್ರಿಯಸಾಗರ್‌ಗೆ ಇದು ಚೊಚ್ಚಲ ನಿರ್ದೇಶನದ ಚಿತ್ರ. ಪ್ರಿಯ ಅವರ ಕನಸಿಗೆ ಹೆಗಲುಕೊಟ್ಟು ಸಹಕರಿಸುತ್ತಿರುವವರು ಈ ಚಿತ್ರದ ಕಾರ್ಯನಿರ್ವಾಹಕ ನಿರ್ಮಾಪಕ ಪತ್ರಕರ್ತ ವೈ.ಜಿ.ಅಶೋಕ್‌ಕುಮಾರ್.



## ದಿಗಂತ ಬಾಲಿವುಡ್‌ಗೆ ಹೋಗ್ತಾನಂತೆ!

'ನಂಗೆ ಬಾಲಿವುಡ್ಡಲ್ಲಿ ಛಾನ್ಸು ಸಿಕ್ಕಿದೆ. ಫೇಮಸ್ ಡೈರೆಕ್ಟರ್ ಮಣಿಶಂಕರ್ ಅವರ ಹೊಸ ಚಿತ್ರದಲ್ಲಿ ನನಗೆ ಅವಕಾಶ ಕೊಟ್ಟಿದ್ದಾರೆ...' - ಹೀಗೆಂದು ದೂದ್ ಪೇಡ ದಿಗಂತ ಕೂತಲ್ಲಿ ನಿಂತಲ್ಲಿ ಕನವರಿಸುತ್ತಿದ್ದಾನೆ.

ಸದ್ಯಕ್ಕೆ ಕನ್ನಡದಲ್ಲಿ ಇರುವ ಅವಕಾಶಗಳನ್ನೇ ಸರಿಯಾಗಿ ಉಪಯೋಗಿಸಿಕೊಳ್ಳದ ದಿಗಂತ್ ಇಲ್ಲಿನ ನಿರ್ಮಾಪಕರನ್ನು ಗೋಳಾಡಿಸುತ್ತಿದ್ದಾನೆ. ದಿಗಂತ್‌ನ ಉದಾಸೀನತೆಗೆ ಬೇಸತ್ತು ಸಾಧು ಕೋಕಿಲಾ ತಮ್ಮ 'ಅನಾರ್ಕಲಿ' ಚಿತ್ರದಿಂದ ಆತನಿಗೆ ಗೇಟ್ ಪಾಸ್ ನೀಡಿ ಶ್ರೀನಗರ ಕಿಟ್ಟಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಕವಿತಾ ಲಂಕೇಶ್ ನಿರ್ದೇಶನದ 'ಕ್ರೇಜಿಲೋಕ' ಚಿತ್ರಕ್ಕೂ ರವಿಚಂದ್ರನ್ ಮಗನ ಪಾತ್ರಕ್ಕೆ ದಿಗಂತನನ್ನೇ ಮೊದಲು ಆಯ್ಕೆ ಮಾಡಿಕೊಂಡಿದ್ದರು. ಆದರೆ ಈತನ ಸಮಯಪ್ರಜ್ಞೆ ಮತ್ತು ವೃತ್ತಿಪರತೆಗೆ ಹೆದರಿ ಸಿನಿಮಾ ಆರಂಭಕ್ಕೂ ಮುನ್ನವೇ 'ಬ್ಯಾಡ ಬಿಡಪ್ಪಾ ನಿನ್ ಸಹವಾಸ' ಎಂದು ಹೇಳಿ ದಿಗಂತನ ಬದಲಿಗೆ ಸೂರ್ಯ ಎಂಬ ಹುರುಪಿನ ಹುಡುಗನಿಗೆ ಅವಕಾಶ ನೀಡಿದ್ದಾರೆ.

ಮುದ್ದಾಗಿರುವ ದಿಗಂತನನ್ನು ನೋಡಿ ಮಣಿಶಂಕರ್ ಮಾರು ಹೋಗಿರಬಹುದು. ಆದರೆ ದಿಗಂತನೊಂದಿಗೆ ಹೆಣಗಾಟ ಶುರು ಮಾಡಿದ ಮೇಲೆ 'ಇದೆಂಥ ಹಣೆಬರಹ' ಎಂದು ಅವರಿಗೆ ಅನ್ನಿಸದೇ ಇರದು. ದಿಗಂತನನ್ನು ನೆನೆದರೆ ಅಂಥ ಯೋಗರಾಜ ಭಟ್ಟರೇ ಗಡಗಡ ನಡುಗುತ್ತಾರೆಂದರೆ ಇನ್ನು ಪಾಪ ಮಣಿಶಂಕರ್ ಅವರ ಪರಿಸ್ಥಿತಿ ಏನಾಗುತ್ತೋ.....



## ಶಿವಣ್ಣ ಸೇಫ್!

ಶಿವಣ್ಣನ ಅಭಿಮಾನಿಗಳಿಗೊಂದು ಸಿಹಿ ಸುದ್ದಿ.

ಕಳೆದ ವಾರವಷ್ಟೇ ಚಿಕಿತ್ಸೆಗಾಗಿ ಪ್ಯಾರಿಸ್‌ಗೆ ತೆರಳಿದ್ದ ಶಿವರಾಜ್‌ಕುಮಾರ್ ನಿಗದಿತ ಸಮಯಕ್ಕಿಂತ ಮೊದಲೇ ಸ್ವದೇಶಕ್ಕೆ ವಾಪಸಾಗಿದ್ದಾರೆ. ಅಷ್ಟೇ ಅಲ್ಲ "ಜುಲೈ 16ರಿಂದ ನಾನು ಮತ್ತೆ ಶೂಟಿಂಗ್‌ನಲ್ಲಿ ಭಾಗವಹಿಸುತ್ತೇನೆ" ಎಂದೂ ಹೇಳಿದ್ದಾರೆ.

ಶಿವರಾಜ್‌ಕುಮಾರ್ ಸಣ್ಣ ಚಿಕಿತ್ಸೆಗಾಗಿ ಪ್ಯಾರಿಸ್‌ಗೆ ಹೊರಡುವ ಸುದ್ದಿ ಹೊರಬಿದ್ದಾಗ ಗಾಂಧಿನಗರದ ಜನ ಗಲಿಬಿಲಿಗೊಂಡಿದ್ದರು. ಅದೇ ರೀತಿ ಶಿವರಾಜ್‌ಕುಮಾರ್ ಆರೋಗ್ಯದ ಬಗ್ಗೆ ಇಲ್ಲಸಲ್ಲದ ಗಾಳಿ ಸುದ್ದಿಗಳು ಹರಡಿದ್ದವು. ಈಗ ಅಂತಹ ಗಾಳಿಸುದ್ದಿಗಳಿಗೆ ಬ್ರೇಕ್ ಬಿದ್ದಿದೆ. ನಮಗೆ ತಿಳಿದುಬಂದ ಪ್ರಕಾರ ಶಿವರಾಜ್‌ಕುಮಾರ್‌ಗೆ ಪ್ಯಾರಿಸ್‌ನಲ್ಲಿನ ವೈದ್ಯರು ಯಾವುದೇ ಆಪರೇಷನ್ ಮಾಡಿಲ್ಲ. ಅದರ ಬದಲಿಗೆ ಅವರ ಅನಾರೋಗ್ಯ ಕುರಿತ ಲ್ಯಾಬೊರೇಟರಿ ವರದಿಗಳನ್ನು ಪರೀಕ್ಷಿಸಿದ ನಂತರ ಇಂಜೆಕ್ಷನ್ ಮತ್ತು ಮಾತ್ರೆಗಳಿಂದಲೇ ಅದನ್ನು ಗುಣಪಡಿಸಿದ್ದಾರಂತೆ. ಆ ಕಾರಣದಿಂದಲೇ ಶಿವಣ್ಣ ನಿಗದಿತ ಸಮಯಕ್ಕಿಂತ ಮೂರ್‍ನಾಲ್ಕು ದಿನ ಮೊದಲೇ ವಾಪಸ್ ಬರಲು ಸಾಧ್ಯವಾಗಿದ್ದು.

ಅದೇನೇ ಇರಲಿ, ಶಿವರಾಜ್‌ಕುಮಾರ್ ಆರೋಗ್ಯದ ಬಗ್ಗೆ ಉಂಟಾಗಿದ್ದ ಆತಂಕ, ಅನುಮಾನಗಳೆಲ್ಲಾ ದೂರವಾಗಿದ್ದು ಸಂತೋಷದ ವಿಷಯ. ಈಗಷ್ಟೇ 'ಜೋಗಯ್ಯ' ಚಿತ್ರದ ಮೂಲಕ 100ರ ಗಡಿ ತಲುಪಿರುವ ಶಿವಣ್ಣ ಈಗ ಸಂಪೂರ್ಣವಾಗಿ ಚೇತರಿಸಿಕೊಂಡು ಮತ್ತೆ ಮೊದಲಿನಂತೆ ಪಾದರಸದಂತೆ ಓಡಾಡಲಿ ಎಂಬುದು ನಮ್ಮ ಹಾರೈಕೆ.



ವಿನಾಯಕ ಗೆಳೆಯರ ಬಳಗ
ಮೇಘನಾ, ವಿಜಯ ರಾಘವೇಂದ್ರ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Ind